ವಿಧಾನ ಪರಿಷತ್‌ನಲ್ಲಿ ಭೂಕಂದಾಯ ತಿದ್ದುಪಡಿ ಮಸೂದೆಗೆ ಧ್ವನಿಮತದ ಮೂಲಕ ಒಪ್ಪಿಗೆ

ಕಂದಾಯ ಇಲಾಖೆ ಭ್ರಷ್ಟಾಚಾರ ಅನಾವರಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಂದಾಯ ಇಲಾಖೆಯಲ್ಲಿನ ಅವ್ಯವಸ್ಥೆ ಮತ್ತು ಭ್ರಷ್ಟಾಚಾರವನ್ನು ವಿಧಾನ ಪರಿಷತ್ ಸದಸ್ಯರು ಎಳೆಎಳೆಯಾಗಿ ಅನಾವರಣಗೊಳಿಸಿದರು.

ಪರಿಷತ್‌ನಲ್ಲಿ ಸೋಮವಾರ ಮಂಡಿಸಿದ ವಿಧಾನಸಭೆ ಅಂಗೀಕರಿಸಿರುವ 'ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ)' ಮಸೂದೆ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದ ಸದಸ್ಯರು, ತಹಶೀಲ್ದಾರ್ ಕಚೇರಿ ಮತ್ತು ಸರ್ವೆ ಇಲಾಖೆಗಳಲ್ಲಿನ ಲಂಚಾವತಾರಗಳನ್ನು ಬಿಚ್ಚಿಟ್ಟರು.

ಬಿಜೆಪಿಯ ಆಯನೂರು ಮಂಜುನಾಥ್ ಮಾತನಾಡಿ, 'ಅವ್ಯವಸ್ಥೆಯಿಂದ ಕೂಡಿರುವ ಕಂದಾಯ ಇಲಾಖೆಯು ಹತ್ತಾರು ನಿಯಮಗಳನ್ನು ಪರಿಶೀಲಿಸಿ ಒಂದು ವಾರದಲ್ಲಿ ಭೂಪರಿವರ್ತನೆಗೆ ಅನುಮತಿ ನೀಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಪಹಣಿಯಲ್ಲಿ ಸಣ್ಣ ತಿದ್ದುಪಡಿ ಮಾಡಲು ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿಗೆ ಸಾಧ್ಯವಾಗುತ್ತಿಲ್ಲ. 11–ಇ ನಕ್ಷೆ ಪಡೆಯಲು ಕನಿಷ್ಠ ಆರು ತಿಂಗಳು ಅಲೆದಾಡಬೇಕು. ಶಕ್ತಿ ಇಲ್ಲದ ಇಲಾಖೆಗೆ ಇಂತಹ ಮಸೂದೆ ಮಂಡಿಸಲು ಅವಸರ ಏನು? ಇಲಾಖೆಯನ್ನು ಮೊದಲು ಸುಧಾರಿಸಿ' ಎಂದು ಕಿಡಿಕಾರಿದರು.

'ನಗರೀಕರಣ ಮಾಡಿದರೆ ರೈತನ ಬದುಕು ಹೇಗೆ? ನಮಗೆ ಆಹಾರ ಯಾರು ಕೊಡುತ್ತಾರೆ. ಬಂಡವಾಳದಾರರಿಗೆ ಮಾತ್ರ ಭೂಮಿ ಲಭ್ಯವಾಗುವುದರಿಂದ ಈ ಮಸೂದೆಯನ್ನು ಮತ್ತೊಮ್ಮೆ ಪರಿಶೀಲಿಸಬೇಕು' ಎಂದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಈ ಮಸೂದೆ ಬಡವರ ವಿರೋಧಿ. ಭೂಮಾಫಿಯಾದವರಿಗೆ ಲೂಟಿ ಮಾಡಲು ಅವಕಾಶ ಕಲ್ಪಿಸುತ್ತದೆ. ಈಶಾ ಫೌಂಡೇಷನ್ ಸಂಸ್ಥಾಪಕ ಜಗ್ಗಿ ವಾಸುದೇವ್ ಅವರಿಗೆ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರ ಭೂಮಿ ನೀಡಿದೆ. ಮಸೂದೆ ಜಾರಿಯಾದರೆ ಇದೇ ರೀತಿ ಬಲಾಢ್ಯರಿಗೆ ಮಾತ್ರ ಅನುಕೂಲವಾಗುತ್ತದೆ' ಎಂದರು.

ಕಾಂಗ್ರೆಸ್‌ನ ಎಸ್. ರವಿ, 'ಮೊದಲು ಸರ್ವೆ ಇಲಾಖೆಯನ್ನು ಹದ್ದುಬಸ್ತಿನಲ್ಲಿಡಿ. ಲಂಚಕೋರರಿಗೆ ಇದು ಅತ್ಯಂತ ಫಲವತ್ತಾಗಿರುವ ಇಲಾಖೆಯಾಗಿದೆ. ಇಲಾಖೆ ಅಧಿಕಾರಿಗಳು ರೈತರನ್ನು ಕಾಲಕಸದ ರೀತಿ ಕಾಣುತ್ತಿದ್ದಾರೆ. ಇಲ್ಲಿ ಲಂಚದ ದರಗಳನ್ನು ಸಹ ಹೋಟೆಲ್‌ನಲ್ಲಿನ ತಿಂಡಿಗಳ ದರದ ರೀತಿ ಪಟ್ಟಿ ಮಾಡಿದ್ದಾರೆ. ಯಾವುದೇ ಕ್ರಮಕೈಗೊಳ್ಳದಿದ್ದರೆ ಸಚಿವರಿಗೂ ಶಾಪ ತಟ್ಟುತ್ತದೆ' ಎಂದು ಎಚ್ಚರಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, 'ತಹಶೀಲ್ದಾರ್ ಕಚೇರಿಯಲ್ಲಿ ಲಂಚ ಕೊಟ್ಟರೆ ಮಾತ್ರ ಕೆಲಸಗಳಾಗುತ್ತವೆ. ಮಸೂದೆಯಲ್ಲಿ ಬಡವರಿಗೆ ಅನುಕೂಲವಾಗುವ ಯಾವುದೇ ಅಂಶಗಳಿಲ್ಲ. ಆತುರದ ನಿರ್ಧಾರದಿಂದ ದರೋಡೆಕೋರರಿಗೆ ಅನುಕೂಲವಾಗುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜೆಡಿಎಸ್‌ನ ತಿಪ್ಪೇಸ್ವಾಮಿ, 'ಭೂಪರಿವರ್ತನೆಯ ಸಮಯಾವಕಾಶವನ್ನು ಇನ್ನಷ್ಟು ವಿಸ್ತರಿಸಬೇಕು' ಎಂದು ಹೇಳಿದರು.

ಧ್ವನಿಮತದ ಮೂಲಕ ಮಸೂದೆಗೆ ಅನುಮೋದನೆ ನೀಡಲಾಯಿತು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಆಶಾ ಕಾರ್ಯಕರ್ತೆಯರು ಪೊಲೀಸ್ ಸಿಬ್ಬಂದಿಗೆ ಸ್ಯಾನಿಟೈಸರ್ ಹಾಕಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಭೂಪರಿವರ್ತನೆ ಸರಳೀಕರಣ: ಸಚಿವ

'ಭೂಪರಿವರ್ತನೆಯನ್ನು ಸರಳಗೊಳಿಸುವುದು ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶದಿಂದ ಕರ್ನಾಟಕ ಭೂಕಂದಾಯಕ್ಕೆ ತಿದ್ದುಪಡಿ ಮಾಡಲಾಗುತ್ತಿದೆ' ಎಂದು ಕಂದಾಯ ಸಚಿವ ಆರ್. ಅಶೋಕ್ ಸಮರ್ಥಿಸಿಕೊಂಡರು.

'ಏಳು ದಿನಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರ ಅನುಮತಿ ನೀಡಬೇಕು. ಯಾವುದೇ ರೀತಿ ಕ್ರಮಕೈಗೊಳ್ಳದಿದ್ದರೆ ಸಹಜವಾಗಿ ಅನುಮತಿ ದೊರೆಯಲಿದೆ. 11ಇ ನಕ್ಷೆಯನ್ನು ಭೂಪರಿವರ್ತನೆಗೆ ಮುನ್ನವೇ ಸಲ್ಲಿಸಬೇಕು' ಎಂದರು

ಸುದ್ದಿ 2 ನಿಮಿಷ

ಸೈಬರ್ ಅಪರಾಧ– 80,379 ದೂರು ದಾಖಲು: ಆರಗ ಜ್ಞಾನೇಂದ್ರ

ಬೆಳಗಾವಿ: ಸೈಬರ್ ಅಪರಾಧ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರವು ರೂಪಿಸಿರುವ 'ನ್ಯಾಷನಲ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್'ನಲ್ಲಿ ಕರ್ನಾಟಕದಿಂದ 80,379 ದೂರುಗಳು ದಾಖಲಾಗಿವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಸಚಿವರು, 'ಸೈಬರ್ ವಂಚಕರಿಂದ ನಡೆದಿರುವ ಕೃತ್ಯಗಳ ಕುರಿತು ದಾಖಲಾದ ದೂರುಗಳಿಗೆ ಸಂಬಂಧಿಸಿದಂತೆ 528 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲಾಗಿದೆ. 2,738 ಪ್ರಕರಣಗಳಲ್ಲಿ ಸಂಜ್ಞೇಯವಲ್ಲದ ಅಪರಾಧ ಪ್ರಕರಣ ದಾಖಲಿಸಲಾಗಿದೆ. 901 ದೂರುಗಳನ್ನು ತಿರಸ್ಕರಿಸಲಾಗಿದೆ' ಎಂದು ವಿವರ ನೀಡಿದರು.

'ಸೈಬರ್ ಅಪರಾಧ ನಿಯಂತ್ರಣ ಪೊಲೀಸ್ ಠಾಣೆಗಳಿಗೆ ತಜ್ಞ ಸಿಬ್ಬಂದಿ ನೇಮಿಸಲಾಗಿದೆ. ಅಹಮದಾಬಾದ್‌ನ ವಿಧಿವಿಜ್ಞಾನ ವಿಶ್ವವಿದ್ಯಾಲಯದ ಮೂಲಕ ಪೊಲೀಸರಿಗೆ ತರಬೇತಿ ಕೊಡಿಸಲಾಗುತ್ತಿದೆ. ಒಂದು ವರ್ಷದಲ್ಲಿ ₹ 70 ಕೋಟಿ ಮೌಲ್ಯದ ಅಕ್ರಮವನ್ನು ಪೊಲೀಸರು ತಡೆದಿದ್ದಾರೆ' ಎಂದು ತಿಳಿಸಿದರು.

ಜೆಡಿಎಸ್‌ನ ಟಿ.ಎ. ಶರವಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸೈಬರ್ ಅಪರಾಧ ನಿಯಂತ್ರಣಕ್ಕಾಗಿ ಪೊಲೀಸರಿಗೆ ಅಂತರರಾಷ್ಟ್ರೀಯ ಮಟ್ಟದ ತರಬೇತಿ ನೀಡಲಾಗುತ್ತಿದೆ. ಸೈಬರ್ ಅಪರಾಧ ಪೊಲೀಸ್ ಠಾಣೆಗಳಿಗೆ ಸೈಬರ್ ಮತ್ತು ಡಿಜಿಟಲ್ ವಿಶ್ಲೇಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದು' ಎಂದರು.

ಗಡಿ ಪ್ರದೇಶಕ್ಕೆ ಹೆಚ್ಚಿನ ಅನುದಾನ ಒದಗಿಸಲು ಮೇಲ್ಮನೆಯಲ್ಲಿ ಆಗ್ರಹ

ಬೆಳಗಾವಿ: 'ಗಡಿ ಪ್ರದೇಶಗಳಲ್ಲಿನ ಶಾಲೆ ಮತ್ತು ಮೂಲಸೌಕರ್ಯ ಕಲ್ಪಿಸಲು ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು' ಎಂದು ವಿಧಾನ ಪರಿಷತ್‌ನಲ್ಲಿ ಸದಸ್ಯರು ಆಗ್ರಹಿಸಿದರು.

ವಿಧಾನಸಭೆ ಅಂಗೀಕರಿಸಿದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ಮಸೂದೆ ಕುರಿತ ಚರ್ಚೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, 'ಗಡಿ ಭಾಗದಲ್ಲಿನ ಹಲವು ಶಾಲೆಗಳ ಕಟ್ಟಡಗಳು ಕುಸಿದಿವೆ. ಹಿಂದಿನ ಸರ್ಕಾರ ಬಜೆಟ್‌ನಲ್ಲಿ ₹200 ಕೋಟಿ ನೀಡಿದ್ದರೆ ಈ ಸರ್ಕಾರ ಕೇವಲ ₹25 ಕೋಟಿ ಮೀಸಲಿಟ್ಟಿದೆ. ಕಾಸರಗೋಡು ಭಾಗದಲ್ಲಿ 200 ಶಾಲೆಗಳಲ್ಲಿ 100 ಶಾಲೆಗಳು ಮುಚ್ಚಿವೆ' ಎಂದು ವಿವರಿಸಿದರು.

ಕಾಂಗ್ರೆಸ್‌ನ ಎಂ. ನಾಗರಾಜ್, 'ಗಡಿ ಪ್ರದೇಶಗಳ ಅಭಿವೃದ್ಧಿಗೆ ಕನಿಷ್ಠ 100 ಕೋಟಿ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

'ಪ್ರಾಧಿಕಾರ ವ್ಯಾಪ್ತಿಯಿಂದ ಕೈಬಿಟ್ಟಿರುವ ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕುಗಳನ್ನು ಮರು ಸೇರಿಸಬೇಕು' ಎಂದು ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ ಒತ್ತಾಯಿಸಿದರು.

ಧ್ವನಿಮತದ ಮೂಲಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಇ– ತ್ಯಾಜ್ಯ ವಿಲೇವಾರಿ: 40 ಘಟಕ ಬಂದ್

ಬೆಳಗಾವಿ: ಇ– ತ್ಯಾಜ್ಯಗಳ ನಿರ್ವಹಣೆ ಮತ್ತು ವಿಲೇವಾರಿಗಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪ್ರಾರಂಭಿಸಿದ್ದ 40 ಘಟಕಗಳು ಮುಚ್ಚಿವೆ ಎಂದು ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಆನಂದ್ ಸಿಂಗ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಹಾಗೂ ಬಿಜೆಪಿಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಸಚಿವರು, 'ಇ– ತ್ಯಾಜ್ಯಗಳ ನವೀಕರಣ, ಬೇರ್ಪಡಿಸುವುದು ಮತ್ತು ಮರು ಬಳಕೆ ಮಾಡುವುದಕ್ಕಾಗಿ 180 ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿತ್ತು. 113 ಘಟಕಗಳು ಪ್ರಾರಂಭವಾಗಿದ್ದು, 40 ಘಟಕಗಳು ಮುಚ್ಚಿವೆ' ಎಂದರು.

47 ಇ-ತ್ಯಾಜ್ಯ ನಿರ್ವಹಣೆ, ವಿಲೇವಾರಿ ಘಟಕಗಳು ಇನ್ನೂ ನಿರ್ಮಾಣ ಹಂತದಲ್ಲಿವೆ. ಹೊಸ ಕೈಗಾರಿಕಾ ನೀತಿಯ ಅಡಿಯಲ್ಲಿ ಇ-ತ್ಯಾಜ್ಯ ಹಾಗೂ ಪ್ಲಾಸ್ಟಿಕ್ ತ್ಯಾಜಗಳ ನಿರ್ವಹಣೆ, ವಿಲೇವಾರಿ ವ್ಯವಸ್ಥೆ ಅಳವಡಿಸಿಕೊಳ್ಳಲು ಕೈಗಾರಿಕೆಗಳಿಗೆ ಸಹಾಯಧನ ನೀಡಲಾಗುತ್ತಿದೆಎಂದು ಹೇಳಿದರು.

ಮೀಸಲಾತಿ ಹೆಚ್ಚಳದ 'ಕೀರ್ತಿ'ಗಾಗಿ ಕಚ್ಚಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪಂಗಡ ಮೀಸಲಾತಿ ಹೆಚ್ಚಳದ ಹೆಗ್ಗಳಿಕೆಯ 'ಕೀರ್ತಿ'ಯನ್ನು ಪಡೆಯಲು ವಿಧಾನಸಭೆಯಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಮೂರು ಪಕ್ಷಗಳು ಪೈಪೋಟಿಗಿಳಿದವು.

ಮೀಸಲಾತಿ ಹೆಚ್ಚಳದ ಮಸೂದೆ ಮಂಡನೆಗೂ ಮೊದಲು ನಿಯಮ 69 ರ ಅಡಿ ಚರ್ಚೆಗೆ ಅವಕಾಶ ನೀಡಲಾಗಿತ್ತು. ಈ ಸಂದರ್ಭದಲ್ಲಿ ಆಯಾ ಪಕ್ಷಗಳ ಮುಖಂಡರು ತಮ್ಮ ಪಕ್ಷವೇ ಇದಕ್ಕೆ ಕಾರಣ, ಬೇರೆ ಪಕ್ಷಗಳಿಗೆ ಮೀಸಲಾತಿ ಬಗ್ಗೆ ಕಾಳಜಿಯೇ ಇಲ್ಲ ಎಂಬಂತೆ ಮಾತನಾಡಿದರು. ಇದು ಪರಸ್ಪರ ವಾಗ್ವಾದಕ್ಕೂ ಕಾರಣವಾಯಿತು.

ಚುನಾವಣೆ ಲೆಕ್ಕ: ಸಿದ್ದರಾಮಯ್ಯ

2019 ರಲ್ಲಿ ಸಮ್ಮಿಶ್ರ ಸರ್ಕಾರ ಇದ್ದಾಗ ಪ್ರಿಯಾಂಕ್ ಖರ್ಗೆ ಸಮಾಜಕಲ್ಯಾಣ ಇಲಾಖೆ ಸಚಿವರಾಗಿದ್ದರು. ಆಗ ನಾಗಮೋಹನ್‌ದಾಸ್ ಆಯೋಗ ರಚನೆ ಆಯಿತು. ಅವರು 2020 ರಲ್ಲಿ ವರದಿ ಸಲ್ಲಿಸಿದರು. ಪರಿಶಿಷ್ಟ ಜಾತಿಯ ಮೀಸಲು ಶೇ 15 ರಿಂದ ಶೇ 17, ಪರಿಶಿಷ್ಟ ಪಂಗಡದ ಮೀಸಲು ಶೇ 3 ರಿಂದ ಶೇ 7 ಕ್ಕೆ ಹೆಚ್ಚಿಸಲು ಶಿಫಾರಸು ಮಾಡಿತು. ಬಿಜೆಪಿ ಸರ್ಕಾರ ವರದಿ ಕೊಟ್ಟ ತಕ್ಷಣ ಜಾರಿ ಮಾಡಲು ಪ್ರಯತ್ನಿಸಲಿಲ್ಲ. 2 ವರ್ಷ ಮಲಗಿದ್ದ ಸರ್ಕಾರ ಈಗ ಚುನಾವಣೆ ಬಂದಾಗ ಜಾರಿಗೆ ಮುಂದಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

'ಚುನಾವಣೆ ಸಂದರ್ಭದಲ್ಲಿ ಮೂಗಿಗೆ ತುಪ್ಪ ಹಚ್ಚಲು ಬಿಜೆಪಿ ಪ್ರಯತ್ನಿಸುತ್ತಿದೆ. ನಿಮಗೆ ಬದ್ಧತೆ ಇಲ್ಲ. ಆದರೂ ಬೆಂಬಲ ಕೊಡುತ್ತೇವೆ. ಪ್ರಧಾನಿ ಬಳಿಗೆ ಸರ್ವ ಪಕ್ಷ ನಿಯೋಗ ಒಯ್ಯುವುದಿದ್ದರೆ ನಾವೂ ಬರುತ್ತೇವೆ' ಎಂದು ಅವರು ತಿಳಿಸಿದರು.

ಸಾ.ರಾ.ಮಹೇಶ್ ಆಕ್ಷೇಪ: ಸಮ್ಮಿಶ್ರ ಸರ್ಕಾರದ ಉಲ್ಲೇಖ ಮಾಡುವಾಗ ಅಂದಿನ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರ ಹೆಸರು ಪ್ರಸ್ತಾಪಿಸದ ಬಗ್ಗೆ ಜೆಡಿಎಸ್‌ನ ಸಾ.ರಾ.ಮಹೇಶ್ ಅವರು ತಕರಾರು ಎತ್ತಿದರು. ಪ್ರಿಯಾಂಕ್ ಖರ್ಗೆ ಪ್ರಸ್ತಾಪ ಇಟ್ಟರೂ ಮುಖ್ಯಮಂತ್ರಿ ಸಹಿ ಆಗದೇ ಇದ್ದರೆ, ಆಯೋಗ ನೇಮಕ ಆಗುತ್ತಿತ್ತೆ. ಕುಮಾರಸ್ವಾಮಿ ಅವರ ಹೆಸರು ಪ್ರಸ್ತಾಪಿಸಲು ಹಿಂದೇಟು ಏಕೆ ಎಂದು ಜೆಡಿಎಸ್‌ನ ಸಾ.ರಾ. ಮಹೇಶ್ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಕುಮಾರಸ್ವಾಮಿ ಫೈಲ್ ಮೇಲೆ ಒಂದು ಚೋಟಾ ಸಹಿ ಮಾಡಿದರು' ಎಂದರು. ಇದಕ್ಕೆ ತಿರುಗೇಟು ನೀಡಿದ ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಅವರು, 'ಚೋಟಾ ಸಹಿಯೋ ಬಡಾ ಸಹಿಯೋ, ಸಹಿ ಸಹಿಯೇ, ಕುಮಾರಣ್ಣ ಹೆಸರು ಹೇಳಲು ಹಿಂದೇಟು ಏಕೆ, ಒಮ್ಮೆ ಹೇಳಿ ಬಿಡಿ' ಎಂದರು.

ತುಂಬಿದ ಕೊಡ ತುಳುಕಲ್ಲ: 'ತುಂಬಿದ ಕೊಡ ತುಳುಕಲ್ಲ, ಉಳಿದವರು ಬಡ್ಕೊತ್ತಿದ್ದಾರೆ' ಎಂದು ಬಿಜೆಪಿಯ ಸಿ.ಟಿ.ರವಿ ಹೇಳಿದರು.

'ಮೀಸಲು ಜಾರಿಗೆ ತಂದ ಕ್ರೆಡಿಟ್ ತಮಗೇ ಸೇರಿದ್ದು ಎಂಬ ಬಗ್ಗೆ ಇವು ಕಿತ್ತಾಟ ನಡೆಸುತ್ತಿದ್ದಾರೆ. ಆದರೆ, ಮೀಸಲು ಜಾರಿ ಮಾಡಿದ್ದು ನಾವೇ' ಎಂದು ಹೇಳಿದರು.

ಖರ್ಗೆ– ಸವಾಲು ಪ್ರತಿ ಸವಾಲು

ಸಂಸತ್ತಿನಲ್ಲಿ ಹಿಂದೂ ಕೋಡ್ ಬಿಲ್ ತಂದಾಗ ಅದನ್ನು ವಿರೋಧಿಸಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಆರ್‌ಎಸ್‌ಎಸ್‌ನವರು 150 ದಿನಗಳ ಕಾಲ ಪ್ರತಿಭಟನೆ ನಡೆಸಿ ಸಂವಿಧಾನವನ್ನು ಸುಟ್ಟರು ಎಂದು ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ಬಿಜೆಪಿಯ ಸಿ.ಟಿ.ರವಿ ತೀವ್ರವಾಗಿ ಆಕ್ಷೇಪಿಸಿದರು.

'ಇದಕ್ಕೆ ನಿಮ್ಮ ಬಳಿ ಸಾಕ್ಷ್ಯ ಇದ್ದರೆ ಕೊಡಬೇಕು.ಇಲ್ಲವಾದರೆ ಸದನದಲ್ಲಿ ಕ್ಷಮೆ ಕೇಳಬೇಕು' ಎಂದು ರವಿ ಒತ್ತಾಯಿಸಿದರು.

'ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಲು ಕಾಂಗ್ರೆಸ್ ತಂತ್ರ ಮಾಡಿತ್ತು ಎಂದು ಹೇಳಿದ್ದೀರಿ ಅದರ ದಾಖಲೆ ಇದ್ದರೆ ಸದನ ಮುಂದಿಡಿ' ಎಂದು ಖರ್ಗೆ ಪ್ರತಿ ಸವಾಲು ಹಾಕಿದರು. ' ನನ್ನ ಬಳಿ ದಾಖಲೆ ಇದೆ. ಇಡುತ್ತೇನೆ, ನನ್ನ ದಾಖಲೆಗಳು ನಿಜವಾಗಿದ್ದರೆ ನೀವು ರಾಜಕೀಯ ಬಿಡಬೇಕು. ನನ್ನ ದಾಖಲೆ ಸುಳ್ಳಾಗಿದ್ದರೆ, ನಾನು ರಾಜಕೀಯ ಬಿಡುತ್ತೇನೆ' ಎಂದು ರವಿ ಹೇಳಿದರು.

'ಖರ್ಗೆ ಅವರು ಆರ್‌ಎಸ್‌ಎಸ್ ಕುರಿತು ಸುಳ್ಳು ಆರೋಪ ಮಾಡಿದ್ದು, ಅದನ್ನು ಕಡತದಿಂದ ತೆಗೆಸಬೇಕು' ಎಂದು ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು. 'ತಮ್ಮ ಮಾತುಗಳಿಗೆ ಪುರಾವೆಗಳನ್ನು ಖರ್ಗೆ ನೀಡಿದರೆ, ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುತ್ತೇನೆ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಶ್ರೀಮಂತ ದಲಿತ ಹೋಟೆಲ್ ಇಟ್ಟರೆ ಯಾರೂ ಅವನ ಬಳಿ ಹೋಗಲ್ಲ, ಬಡ ಬ್ರಾಹ್ಮಣ ಹೋಟೇಲ್ ಇಟ್ಟರೆ ಎಲ್ಲರೂ ಹೋಗ್ತಾರೆ, ಇದೇ ಸಾಮಾಜಿಕ ಅಸಮಾನತೆ

ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕ

ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ. ಆದರೆ, ಭರ್ತಿ ಮಾಡದೇ ಹೊರಗುತ್ತಿಗೆಯಲ್ಲಿ ನೇಮಿಸಿಕೊಳ್ಳುತ್ತಿದ್ದೀರಿ. ಅದರಲ್ಲೂ ಮೀಸಲಾತಿ ಕೊಡಿ

ಶಿವಲಿಂಗೇಗೌಡ, ಜೆಡಿಎಸ್ ಶಾಸಕ

ಕಪ್ಪುಪಟ್ಟಿ ಕಂಪನಿಗೆ ಕೆಂಪುಹಾಸು: ಕ್ರಮಕ್ಕೆ ಆಗ್ರಹ

ಬೆಳಗಾವಿ: ರಾಜ್ಯದ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸುವ ₹ 2,000 ಕೋಟಿ ಮೊತ್ತದ ಯೋಜನೆಯನ್ನು ಕಪ್ಪುಪಟ್ಟಿಗೆ ಸೇರಿದ್ದ ಕಂಪನಿಗೆ ವಹಿಸಿರುವ ಕುರಿತು ತನಿಖೆ ನಡೆಸಿ, ಕ್ರಮ ಜರುಗಿಸುವಂತೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸಿದರು.

'ಕಪ್ಪು ಕಂಪನಿಗೆ ಕೆಂಪುಹಾಸು' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಡಿಸೆಂಬರ್ 20ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಅವರು, 'ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸುವ ಯೋಜನೆಯ ಗುತ್ತಿಗೆಯನ್ನು ಕಪ್ಪುಪಟ್ಟಿಗೆ ಸೇರಿದ್ದ ಸಂಸ್ಥೆಗೆ ವಹಿಸಿರುವುದು ಸರಿಯಲ್ಲ. ಇದರ ಹಿಂದೆ ಅಕ್ರಮ ನಡೆದಿರುವ ಅನುಮಾನವಿದ್ದು, ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಹತ್ತಕ್ಕೂ ಹೆಚ್ಚು ಸ್ವಸಹಾಯ ಸಂಘಗಳು ಈ ಯೋಜನೆಯ ಗುತ್ತಿಗೆ ಪಡೆಯಲು ಅರ್ಹತೆ ಹೊಂದಿವೆ. ಆದರೆ, ಕಪ್ಪುಪಟ್ಟಿಗೆ ಸೇರಿದ್ದ ಸಂಸ್ಥೆಯ ಅಧೀನದ ಮೂರು ಸ್ವಸಹಾಯ ಗುಂಪುಗಳಿಗೆ ಮಾತ್ರ ಯೋಜನೆಯನ್ನು ವಹಿಸಲಾಗಿದೆ. ಈ ಅಕ್ರಮದ ಕುರಿತು ತನಿಖೆ ನಡೆಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಂದ ಉತ್ತರ ಪಡೆದು ಸದನದಲ್ಲಿ ಮಂಡಿಸುವುದಾಗಿ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ಸಹಾಯಧನ ಕಡಿತಕ್ಕೆ ಶಿಫಾರಸು

ನಿಗಮ–ಮಂಡಳಿ ವಿಲೀನಗೊಳಿಸಿ ಇಲ್ಲವೇ ಮುಚ್ಚಿ: ಪರಿಶೀಲನಾ ವರದಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯ ಸರ್ಕಾರದ ಸಾಲದ ಪ್ರಮಾಣ ವೇಗವಾಗಿ ಹೆಚ್ಚುತ್ತಿದ್ದು, ಅದಕ್ಕೆ ಅನುಗುಣವಾಗಿ ಬಡ್ಡಿಯ ಹೊರೆ ಹೆಚ್ಚುತ್ತಿರುವುದರಿಂದ ಅನಾವಶ್ಯಕವಾಗಿ ನೀಡುತ್ತಿರುವ ಸಹಾಯಧನವನ್ನು ಕಡಿತಗೊಳಿಸಬೇಕು ಮತ್ತು ಸಹಾಯಧನವನ್ನು ಕಡುಬಡವರಿಗೆ ಕೇಂದ್ರೀಕರಿಸಬೇಕು ಎಂದು 'ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ' ಶಿಫಾರಸು ಮಾಡಿದೆ.

2022–23ನೇ ಸಾಲಿನ ವರದಿಯನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ಸಾಲ ಪಡೆಯುತ್ತಿರುವ ಹಣವು ಆಡಳಿತಾತ್ಮಕ ವೆಚ್ಚಕ್ಕೆ ಬಳಕೆಯಾಗುತ್ತಿದೆ. ಇದರ ಜತೆಗೆ ರಾಜಸ್ವ ಕೊರತೆಯನ್ನೂ ರಾಜ್ಯ ಎದುರಿಸುತ್ತಿದೆ. ಸಹಾಯಧನ ಕಡಿತವೇ ಇದಕ್ಕೆ ಪರಿಹಾರ ಎಂದೂ ವರದಿ ಉಲ್ಲೇಖಿಸಿದೆ.

ಸಹಾಯಧನವನ್ನು ಬಡವರಿಗೆ ಕೇಂದ್ರೀಕರಿಸುವ ಜತೆಗೆ ಫಲಾನುಭವಿಗಳಿಗೆ ಸಹಾಯಧನವನ್ನು ನೇರ ನಗದು ವರ್ಗಾವಣೆ ಮಾಡುವ ಮೂಲಕ ಸೋರಿಕೆ ತಡೆಗಟ್ಟಬೇಕು ಎಂದು ಸಲಹೆ ನೀಡಿದೆ.

ಅಭಿವೃದ್ಧಿ ಯೋಜನೆ ವಿಳಂಬ: ಸರ್ಕಾರ ಮಾಡಲೇಬೇಕಾದ ಬದ್ಧವೆಚ್ಚ ಹೆಚ್ಚುತ್ತಿದ್ದು, ಕಾಮಗಾರಿಗಳಿಗೆ ಅಂದಾಜಿಸಿದ ಮೊತ್ತವು ಏರಿಕೆಯಾಗುತ್ತಿದೆ. ಆದ್ದರಿಂದ ಹೊಸ ಯೋಜನೆ/ ಕಾಮಗಾರಿಗಳಿಗೆ ಅನುಮೋದನೆ ನೀಡುವುದನ್ನು ವಿಳಂಬ ಮಾಡಬೇಕು ಎಂದೂ ವರದಿ ಸಲಹೆ ಇತ್ತಿದೆ.

ಬಜೆಟ್ ಅಂದಾಜಿನ ಅನುದಾನಕ್ಕೆ ಎದುರಾಗಿ ವಿವಿಧ ಇಲಾಖೆಗಳಲ್ಲಿ ರಾಜ್ಯ ಸರ್ಕಾರವು ಅನುಮೋದಿಸಿರುವ ಯೋಜನೆ ಮತ್ತು ಕಾಮಗಾರಿಗಳ ಮೇಲಿನ ಬದ್ಧವೆಚ್ಚ ಹೆಚ್ಚುತ್ತಲೇ ಇದೆ. ಒಟ್ಟಾರೆ ಬದ್ಧ ವೆಚ್ಚವು ಲೋಕೋಪಯೋಗಿ, ಜಲಸಂಪನ್ಮೂಲ, ಸಣ್ಣ ನೀರಾವರಿ ಇಲಾಖೆಗಳಲ್ಲಿ ತುಂಬಾ ಹೆಚ್ಚಳವಾಗಿದೆ ಎಂದು ವಿವರಿಸಿದೆ.

ನಿಗಮ-ಮಂಡಳಿ ವಿಲೀನ:- ಸ್ವಾಯತ್ತ ಸಂಸ್ಥೆಗಳಾದ ನಿಗಮ, ಮಂಡಳಿ, ಸ್ಥಾಯಿ ಸಂಸ್ಥೆಗಳು ಪರಿಸ್ಕರ ಸಹಕಾರದೊಂದಿಗೆ ಕಾರ್ಯನಿರ್ವಹಿಸಲು ಅವುಗಳನ್ನು ವಿಲೀನ ಮಾಡಬೇಕು. ಕೆಲವನ್ನು ಮುಚ್ಚಬೇಕು. ಆಡಳಿತಾತ್ಮಕ ವೆಚ್ಚವನ್ನು ಕಡಿಮೆ ಮಾಡುವುದು ತುರ್ತು ಅಗತ್ಯವಾಗಿದೆ. ಇಂತಹ ಕ್ರಮ ಕೈಗೊಳ್ಳುವುದರಿಂದ ಸಾರ್ವಜನಿಕ ಸೇವೆಗಳನ್ನು ಮತ್ತಷ್ಟು ಸಮರ್ಪಕವಾಗಿ ನೀಡಲು ಸಾಧ್ಯವಾಗಲಿದೆ ಎಂದು ವರದಿ ಅಭಿಪ್ರಾಯ ಪಟ್ಟಿದೆ.

ಎಸ್ಕಾಂ ಹೊರೆ: ವಿದ್ಯುತ್ ಖರೀದಿಸಿ ಪೂರೈಸುವ ಎಸ್ಕಾಂಗಳು ಸೆಪ್ಟೆಂಬರ್ ಅಂತ್ಯಕ್ಕೆ ₹17,017 ಕೋಟಿ ಬಾಕಿ ಉಳಿಸಿಕೊಂಡಿವೆ. ಈ ಮೊತ್ತದಲ್ಲಿ ₹14 ಸಾವಿರ ಕೋಟಿಗೆ ಸರ್ಕರವೇ ಖಾತರಿ ಒದಗಿಸಿದೆ.

ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಇಂಧನ ವಲಯ ಕುಸಿಯಲಿದ್ದು, ಅದರಿಂದ ಹಣಕಾಸಿನ ಮೇಲೆ ಅಪಾಯಕಾರಿ ಪರಿಣಾಮ ಉಂಟಾಗಲಿದೆ ಎಂದು ವಿಶ್ಲೇಷಿಸಿದೆ.

ಸರ್ಕಾರಿ ಸಂಸ್ಥೆಯಾದ ಕೆಪಿಸಿಎಲ್, ಆರ್‌ಪಿಸಿಎಲ್ ಹಾಗೂ ಕೆಪಿಟಿಸಿಎಲ್‌ಗೆ ಎಸ್ಕಾಂಗಳು ₹13,384 ಕೋಟಿ ಬಾಕಿ ಉಳಿಸಿಕೊಂಡಿವೆ.

ಆಸ್ತಿ ನಗದೀಕರಣ ಚುರುಕು

ರಾಜ್ಯ ಸರ್ಕಾರವು ಆಸ್ತಿ ನಗದೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಪರಿಶೀಲನಾ ಸಮಿತಿ ನಿರ್ದೇಶಿಸಿದೆ.

ಸರ್ಕಾರದ ಆಸ್ತಿಗಳನ್ನು ದೀರ್ಘಕಾಲದ ಒಪ್ಪಂದದ ಮೇಲೆ ಖಾಸಗಿಯವರಿಗೆ ನೀಡಿ ಸಂಪನ್ಮೂಲ ಕ್ರೋಡೀಕರಣ ಮಾಡುವುದನ್ನು ಆಸ್ತಿ ನಗದೀಕರಣ ಎನ್ನಲಾಗುತ್ತಿದೆ.

ಸರ್ಕಾರ ಈವರೆಗೆ ನಡೆಸಿರುವ ಆಸ್ತಿ ನಗದೀಕರಣದ ಪ್ರಗತಿಯ ಬಗ್ಗೆ ವಿವರಗಳನ್ನು ಪರಿಶೀಲಿಸಲಾಗಿದೆ. ಕೇಂದ್ರ ಸರ್ಕಾರವು ಆಸ್ತಿ ನಗದೀಕರಣದ ಮೇಲ್ವಿಚಾರಣೆ ನಡೆಸುತ್ತಿರುವುದರಿಂದಾಗಿ, ರಾಜ್ಯವು ಈ ವಿಷಯದಲ್ಲಿ ತ್ವರಿತ ಪ್ರಕ್ರಿಯೆ ನಡೆಸಬೇಕು ಎಂದು ವರದಿ ಹೇಳಿದೆ.

ತಂತ್ರಜ್ಞಾನಕ್ಕೆ ಆದ್ಯತೆ: ಹುದ್ದೆಗೆ ಕತ್ತರಿ

ತಂತ್ರಜ್ಞಾನವನ್ನು ಪರಿಣಾಮಕಾರಿ ಬಳಸುವ ಮೂಲಕ ಇಲಾಖೆಗಳಲ್ಲಿನ ಅನಗತ್ಯ ಹುದ್ದೆಗಳನ್ನು ಗುರುತಿಸಿ, ವೆಚ್ಚ ಕಡಿಮೆ ಮಾಡಬೇಕು ಎಂದು ವರದಿ ಶಿಫಾರಸು ಮಾಡಿದೆ.

ಹುದ್ದೆಗಳನ್ನು ನೇರವಾಗಿ ರದ್ದುಮಾಡಿ ಎಂದು ಸಲಹೆ ನೀಡದೇ ಇದ್ದರೂ ಹೀಗೆ ಅನಗತ್ಯ ಹುದ್ದೆಗಳನ್ನು ಗುರುತಿಸುವ ಮೂಲಕ ವೇತನ ಮತ್ತು ಪಿಂಚಣಿ ಮೇಲಿನ ವೆಚ್ಚವನ್ನು ಕಡಿಮೆ ಮಾಡಬೇಕಾದ ಅವಶ್ಯವಿದೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸರ್ಕಾರಿ ಶಾಲೆಗಳಿಗೂ ನಲ್ಲಿ ಸಂಪರ್ಕ: ದೊರೆಸ್ವಾಮಿ ಸಲಹೆ

ಬೆಂಗಳೂರು: ರಾಜ್ಯದ 17,970 ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು ಪೂರೈಸಲು ನಲ್ಲಿ ಸಂಪರ್ಕ ಕಲ್ಪಿಸುವಂತೆ ರಾಜ್ಯ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆ ನೀಡಿದ ಮಾಹಿತಿಯಂತೆ ರಾಜ್ಯದ ಸುಮಾರು 18 ಸಾವಿರ ಶಾಲೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಬೇಕಿದೆ. ಜಲಜೀವನ್ ಮಿಷನ್ ಯೋಜನೆಯಲ್ಲಿ ಎಲ್ಲ ಹಳ್ಳಿಗಳಿಗೂ ನಲ್ಲಿ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯೋಜನೆಯ ಅನುಷ್ಠಾನಕ್ಕಾಗಿ ₹ 300 ಕೋಟಿ ಬಿಡುಗಡೆ ಮಾಡಿದ್ದಾರೆ. ಇದರ ಜತೆಗೆ ಶಾಲೆಗಳಿಗೂ ಸಂಪರ್ಕ ಕಲ್ಪಿಸಬೇಕು ಎಂದು ಕೋರಿದ್ದಾರೆ.

ದೊರೆಸ್ವಾಮಿ ಅವರ ಪತ್ರಕ್ಕೆ ಪ್ರತಿಕ್ರಿಯಿಸಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು, '42,015 ಶಾಲೆಗಳಲ್ಲಿ 17,970 ಶಾಲೆಗಳಿಗೆ ನಲ್ಲಿ ಸಂಪರ್ಕ ಇಲ್ಲ. ಉಳಿದ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ಸಂಪರ್ಕ ಕಲ್ಪಿಸಲು ತಕ್ಷಣ ಅಂದಾಜುಪಟ್ಟಿ ಸಿದ್ಧಪಡಿಸಲು ಸೂಚಿಸಲಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

51.54 ಲಕ್ಷ ರೈತರ ಖಾತೆಗೆ ₹ 6,590 ಕೋಟಿ ಜಮೆ

ಬೆಳಗಾವಿ: 'ಕಳೆದ ನಾಲ್ಕು ವರ್ಷಗಳಲ್ಲಿ ಅತಿವೃಷ್ಟಿಯಿಂದ ರಾಜ್ಯದಲ್ಲಿ 57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದ್ದು, 51.54 ಲಕ್ಷ ರೈತರ ಬ್ಯಾಂಕ್ ಖಾತೆಗೆ ₹ 6,590.07 ಕೋಟಿ ಬೆಳೆಹಾನಿ ಪರಿಹಾರ ಮೊತ್ತವನ್ನು ಜಮೆ ಮಾಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಎಂ.ಪಿ. ಕುಮಾರಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಅತಿವೃಷ್ಟಿಯಿಂದ 2022ನೇ ಸಾಲಿನಲ್ಲಿ ಬೆಳೆ ಹಾನಿಯಾದ ರೈತರಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವ ಸಲುವಾಗಿ ಪ್ರತಿ ಹೆಕ್ಟೇರ್‌ಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಡಿ ನಿಗದಿಪಡಿಸಿದ್ದ ಪರಿಹಾರವನ್ನು ಪರಿಷ್ಕರಿಸಲಾಗಿದೆ' ಎಂದರು.

'ಮಳೆಯಾಶ್ರಿತ ಕೃಷಿ ಹಾನಿಗೆ ಪ್ರತಿ ಹೆಕ್ಟೇರ್‌ಗೆ ₹13,600, ನೀರಾವರಿ ಪ್ರದೇಶದ ಕೃಷಿ ನಷ್ಟಕ್ಕೆ ಹೆಕ್ಟೇರ್‌ಗೆ ₹ 8 ಸಾವಿರ, ಬಹು ವಾರ್ಷಿಕವಾದರೆ ₹ 28 ಸಾವಿರ ಪರಿಹಾರ ನೀಡಲಾಗುತ್ತಿದೆ. ಅತಿವೃಷ್ಟಿಯಿಂದ ಹಾನಿಗೊಳಗಾದ ಕಾಫಿ ಬೆಳೆಗೂ ಪರಿಹಾರ ನೀಡಲಾಗಿದೆ' ಎಂದು ಹೇಳಿದರು.

30 'ತಾಲ್ಲೂಕು ಆಡಳಿತ ಸೌಧ' ನಿರ್ಮಿಸಲು ಸಿಎಂಗೆ ಪ್ರಸ್ತಾವ

ಬೆಳಗಾವಿ: '30 ತಾಲ್ಲೂಕುಗಳಲ್ಲಿ ಆಡಳಿತ ಸೌಧ ನಿರ್ಮಿಸಲು ಮುಖ್ಯಮಂತ್ರಿ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ತಮ್ಮ ಕ್ಷೇತ್ರ ವ್ಯಾಪ್ತಿಯ ಸಾಲಿಗ್ರಾಮ 2020ರಲ್ಲಿ ತಾಲ್ಲೂಕು ಆಗಿ ಘೋಷಣೆಯಾದರೂ ಮೂಲಸೌಕರ್ಯ ಒದಗಿಸದ ಬಗ್ಗೆ ಜೆಡಿಎಸ್‌ನ ಸಾ.ರಾ. ಮಹೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹೊಸ ತಾಲ್ಲೂಕು ಕೇಂದ್ರಗಳಲ್ಲಿ ಆಡಳಿತ ಸೌಧ ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದರು.

'ಸಾಲಿಗ್ರಾಮದಲ್ಲಿ ಆಡಳಿತ ಸೌಧ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಹಣಕಾಸಿನ ಲಭ್ಯತೆ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ವಸತಿ ಯೋಜನೆಗಳ ಸಹಾಯಧನ ಹೆಚ್ಚಳಕ್ಕೆ ಚಿಂತನೆ

ಬೆಳಗಾವಿ: 'ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಲಾಗುವ ಸಹಾಯಧನ ಹೆಚ್ಚಿಸುವ ಬಗ್ಗೆ ಚಿಂತಿಸಲಾಗುವುದು' ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಕೆ.ಜಿ. ಬೋಪಯ್ಯ ಪ್ರಶ್ನೆಗೆ ಉತ್ತರಿಸಿ, '2019 –2020ರ ಅವಧಿಯಲ್ಲಿ 5.01 ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಿ, 3.85 ಲಕ್ಷ ಮನೆಗಳಿಗೆ ಕಾರ್ಯಾದೇಶ ನೀಡಲಾಗಿದೆ. ₹ 8,233 ಕೋಟಿ ಬಿಡುಗಡೆ ಕೂಡ ಮಾಡಲಾಗಿದೆ. ಆದರೆ, ಸೂಕ್ತ ದಾಖಲೆ ನೀಡದ ನಕಲಿ ಫಲಾನುಭವಿಗಳ 72 ಸಾವಿರ ಮನೆಗಳಿಗೆ ಹಣ ಮಂಜೂರಾತಿ ತಡೆ ಹಿಡಿಯಲಾಗಿದೆ' ಎಂದರು.

ಹಳಸಲು ಆಹಾರ ತಿಂದು 10 ಕುರಿ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧ ಹತ್ತಿರ ಪ್ರತಿಭಟನ ಸ್ಥಳದಲ್ಲಿ ಉಳಿದಿದ್ದ ಆಹಾರ ತಿಂದು 10 ಕುರಿಗಳು ಮೃತಪಟ್ಟಿವೆ. 40ಕ್ಕೂ ಹೆಚ್ಚು ಕುರಿಗಳು ಅಸ್ವಸ್ಥಗೊಂಡಿವೆ.

'ಡಿ.22ರಂದು ಇಲ್ಲಿ ನಡೆದಿದ್ದ ವಿರಾಟ್ ಪಂಚಶಕ್ತಿ ಸಮಾವೇಶದ ಸ್ಥಳದಲ್ಲಿಯೇ ಉಳಿದಿದ್ದ ಆಹಾರ ಎಸೆಯಲಾಗಿತ್ತು. ಭಾನುವಾರ ಸಂಜೆ ಇದನ್ನೇ ಕುರಿಗಳು ತಿಂದಿದ್ದವು. ಸೋಮವಾರ ಬೆಳಗಿನವರೆಗೆ ನರಳಾಡಿ ಸತ್ತಿವೆ' ಎಂದು ಕುರಿಗಾಹಿಗಳು ದೂರಿದ್ದಾರೆ.

'ಆಹಾರವನ್ನು ಮೂರು ದಿನದ ಬಳಿಕ ಕುರಿಗಳು ತಿಂದಿದ್ದು, ಜೀರ್ಣವಾಗದೆ ಮೃತಪಟ್ಟಿವೆ. ಇದಕ್ಕೆ 'ರುಮಿನಲ್ ಅಸಿಡೋಸಿಸ್' ಎನ್ನುತ್ತೇವೆ. ಮರಣೋತ್ತರ ಪರೀಕ್ಷೆ ನಡೆದಿದೆ. ಪಶು ವೈದ್ಯರು ಸ್ಥಳದಲ್ಲಿ ಬೀಡುಬಿಟ್ಟಿದ್ದಾರೆ. ಆಂಬುಲೆನ್ಸ್ ಕೂಡಾ ವ್ಯವಸ್ಥೆ ಮಾಡಲಾಗಿದೆ. ಕುರಿಗಳ ಆರೋಗ್ಯದ ಮೇಲೆ ಮೂರು ದಿನ ನಿಗಾ ಇರಿಸಲಾಗುವುದು' ಎಂದು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಆನಂದ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಲ ಮಾಡಿ ಕುರಿ ಸಾಕುತ್ತಿದ್ದೆವು. ಒಂದು ಕುರಿಗೆ ₹15 ಸಾವಿರ ದರವಿದೆ. ಪರಿಹಾರ ಕೊಟ್ಟು ಸಂಕಟದಿಂದ ರಕ್ಷಿಸಬೇಕು' ಎಂದು ಕುರಿಗಾಹಿಗಳಾದ ದೇಮಣ್ಣ ದೇಮನ್ನವರ, ನಿಂಗಪ್ಪ ದೇಮನ್ನವರ, ಸುನೀಲ ದೇಮನ್ನವರ ಅಳಲು ತೋಡಿಕೊಂಡರು.

ಹಳಸಿದ ಆಹಾರ ತಿಂದು ಸತ್ತಿರುವ ಕುರಿಗಳ ಮುಂದೆ ಕುರಿಗಾಹಿಗಳು /ಪ್ರಜಾವಾಣಿ ಚಿತ್ರ

ವಿರಾಟ್ ಪಂಚಶಕ್ತಿ ಸಮಾವೇಶ ಮುಗಿದ ನಂತರ ತ್ಯಾಜ್ಯ ವಿಲೇವಾರಿ ಆಗದಿರುವುದು ಗಮನಕ್ಕೆ ಬಂದಿಲ್ಲ. ಘಟನೆ ನಡೆಯಬಾರದಿತ್ತು. ಕುರಿಗಾಹಿಗಳಿಗೆ ಕೈಲಾದ ಸಹಾಯ ಮಾಡುತ್ತೇವೆ

ಬಸವಜಯ ಮೃತ್ಯುಂಜಯ ಸ್ವಾಮೀಜಿ, ಕೂಡಲಸಂಗಮ ಪೀಠ

ಜಲೀಲ್ ಕೊಲೆ: ಮೂವರ ಬಂಧನ

ಮಂಗಳೂರು: ಸುರತ್ಕಲ್‌ನ ಕಾಟಿಪಳ್ಳ ಕೃಷ್ಣಾಪುರದಲ್ಲಿ ಶನಿವಾರ ನಡೆದಿದ್ದ ಅಬ್ದುಲ್ ಜಲೀಲ್ ಕೊಲೆ ಪ್ರಕರಣ ಸಂಬಂಧ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

ಕೃಷ್ಣಾಪುರ ನೈತಂಗಡಿಯ ಶೈಲೇಶ್ ಪೂಜಾರಿ (21), ಹೆಜಮಾಡಿಯ ಸವಿನ್ ಕಾಂಚನ್ ಅಲಿಯಾಸ್ ಮುನ್ನಾ (24), ಪವನ್ ಅಲಿಯಾಸ್ ಪಚ್ಚು (23) ಬಂಧಿತ ಆರೋಪಿಗಳು.

'ಇವರಲ್ಲಿ ಇಬ್ಬರು ಕೃತ್ಯದಲ್ಲಿ ನೇರ ಭಾಗಿಯಾಗಿದ್ದು, ಒಬ್ಬ ಅವರನ್ನು ಬೈಕ್ ನಲ್ಲಿ ತಂದು ಬಿಟ್ಟಿದ್ದ. ಕೊಲೆಗೆ ಕಾರಣ ಏನು ಎಂಬುವುದನ್ನು ತನಿಖೆ ಪೂರ್ಣಗೊಂಡ ಬಳಿಕ ಬಹಿರಂಗಪಡಿಸುತ್ತೇವೆ' ಎಂದು ಕಮಿಷನರ್ ಹೇಳಿದರು.

ರೌಡಿ ಶೀಟರ್‌ಗಳು: 'ಸುರತ್ಕಲ್ ಠಾಣೆಯ ರೌಡಿಗಳ ಪಟ್ಟಿಯಲ್ಲಿ ಶೈಲೇಶ್ ಹೆಸರಿದೆ. ಮೂಲ್ಕಿ ಠಾಣೆಯ ರೌಡಿಗಳ ಪಟ್ಟಿಯಲ್ಲಿ ಸವಿನ್ ಕಾಂಚನ್ ಹೆಸರಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಸೇರಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿವೆ. ಈ ಆರೋಪಿಗಳಿಬ್ಬರೂ 2021ರಲ್ಲಿ ನಡೆದಿದ್ದ ರೌಡಿ ಶೀಟರ್ ಪಿಂಕಿ ನವಾಜ್ ಕೊಲೆ ಯತ್ನ ಪ್ರಕರಣದಲ್ಲೂ ಆರೋಪಿಗಳು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೇರಳ ಸಾಹಿತ್ಯೋತ್ಸವ ಜ.12ರಿಂದ

ಮಂಗಳೂರು: 'ಕೇರಳ ಲಿಟರರಿ ಫೆಸ್ಟ್'ನ (ಕೆಎಲ್‌ಎಫ್) ಆರನೇ ಆವೃತ್ತಿಯು ಕೇರಳದ ಕೋಯಿಕ್ಕೋಡ್‌ನಲ್ಲಿ 2023ರ ಜ.12ರಿಂದ 15ರವರೆಗೆ ನಡೆಯಲಿದೆ.

ಡಿ.ಸಿ ಕಿಳಕ್ಕೇಮುರಿ ಫೌಂಡೇಷನ್ ಪ್ರಾಯೋಜಿತ ಈ ಸಾಹಿತ್ಯೋತ್ಸವಕ್ಕೆ ಕೇರಳ ಸರ್ಕಾರ ಬೆಂಬಲ ನೀಡಲಿದೆ. ಕವಿ ಮತ್ತು ವಿಮರ್ಶಕ ಕೆ.ಸಚ್ಚಿದಾನಂದನ್ ಸಾಹಿತ್ಯೋತ್ಸವದ ನಿರ್ದೇಶಕರಾಗಿರುತ್ತಾರೆ. ನೊಬೆಲ್, ಜ್ಞಾನಪೀಠ, ಆಸ್ಕರ್, ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು, ಚಲನಚಿತ್ರ ಮತ್ತು ರಂಗಭೂಮಿಯ ಕಲಾವಿದರು, ವಿನ್ಯಾಸಕರು, ಮಾಧ್ಯಮ ಜಗತ್ತಿನ ದಿಗ್ಗಜರು, ರಾಜತಾಂತ್ರಿಕರು ಹಾಗೂ ವಿಭಿನ್ನ ಕ್ಷೇತ್ರಗಳ ದಿಗ್ಗಜರು, ಸೆಲೆಬ್ರಿಟಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುಮಾರು ಮೂರು ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಆಹ್ವಾನಿತರಲ್ಲಿ ಟರ್ಕಿ, ಸ್ಪೇನ್, ಅಮೆರಿಕ, ಬ್ರಿಟನ್, ಇಸ್ರೇಲ್, ನ್ಯೂಜಿಲೆಂಡ್, ಮಧ್ಯಪ್ರಾಚ್ಯ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದಾರೆ. ಜಾಗತಿಕ ಮಟ್ಟದ 400ಕ್ಕೂ ಹೆಚ್ಚು ಪ್ರಮುಖರು ಪಾಲ್ಗೊಳ್ಳಲಿದ್ದಾರೆ.

ಮುರುಘಾ ಮಠ: ಸರ್ಕಾರಕ್ಕೆ ಜ.1ರ ಗಡುವು ನೀಡಿದ ಮಠಾಧೀಶರು

ಆಡಳಿತಾಧಿಕಾರಿ ನೇಮಕಕ್ಕೆ ವಿರೋಧ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಿಸಿರುವ ಸರ್ಕಾರದ ಕ್ರಮ ವಿರೋಧಿಸಿ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಮಠಾಧೀಶರು, ಭಕ್ತರು ಸೋಮವಾರ ಪ್ರತಿಭಟಿಸಿದರು.

ನೇಮಕಾತಿ ರದ್ದುಪಡಿಸಬೇಕು. ಜ.1ರೊಳಗೆ ಆಡಳಿತಾಧಿಕಾರಿ ವಾಪಸು ಕರೆಸಿಕೊಳ್ಳಬೇಕು ಎಂದು ಗಡುವು ನೀಡಿದರು.

'ಮಠಕ್ಕೆ ಭವ್ಯ ಪರಂಪರೆ ಇದೆ. ಅನ್ನ, ಅಕ್ಷರ ದಾಸೋಹದಿಂದ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಸ್ವಾತಂತ್ರ್ಯಹರಣವನ್ನು ಒಪ್ಪುವುದಿಲ್ಲ' ಎಂದು ಮುಖ್ಯಮಂತ್ರಿಗೆ ಬರೆದಿರುವ ಮನವಿಯಲ್ಲಿ ತಿಳಿಸಲಾಗಿದೆ.

'ಮುರುಘಾಮಠ ಮತ್ತು ಎಸ್‌ಜೆಎಂ ವಿದ್ಯಾಪೀಠದ ಚಟುವಟಿಕೆ ಪಾರದರ್ಶಕವಾಗಿದೆ. ಆದರೂ ಆಡಳಿತಾಧಿಕಾರಿ ನೇಮಿಸಿ ಮಠಗಳ ಸ್ವಾತಂತ್ರ್ಯ ಕಸಿದುಕೊಳ್ಳಲಾಗಿದೆ. ದರ್ಬಾರ್ ಹಾಲ್‌ಗೆ ಬೀಗ ಜಡಿದು ಭಕ್ತರಿಗೆ ನೋವುಂಟು ಮಾಡಿದ್ದಾರೆ' ಎಂದು ಬಸವಪ್ರಭು ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದರು.

'ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವಾಗ ಶಿವಮೂರ್ತಿ ಶರಣರ ನೇತೃತ್ವದಲ್ಲಿ ಹೋರಾಟ ನಡೆಸಲಾಯಿತು. ಇದರ ಫಲವಾಗಿ ಸಮುದಾಯದ ಬಸವರಾಜ ಬೊಮ್ಮಾಯಿ ಸಿ.ಎಂ ಆದರು. ಬೊಮ್ಮಾಯಿ ಇದನ್ನು ಮರೆತು ನಡೆದುಕೊಳ್ಳುತ್ತಿದ್ದಾರೆ' ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ರಾವಂದೂರಿನ ಮೋಕ್ಷಪತಿ ಸ್ವಾಮೀಜಿ, ಹಾವೇರಿಯ ಬಸವ ಶಾಂತಲಿಂಗ ಸ್ವಾಮೀಜಿ, ಅಥಣಿಯ ಶಿವಬಸವ ಸ್ವಾಮೀಜಿ, ಗುರುಮಠಕಲ್‌ನ ಶಾಂತವೀರ ಸ್ವಾಮೀಜಿ, ಕಲಬುರಗಿಯ ಸಿದ್ಧಬಸವ ಕಬೀರ ಸ್ವಾಮೀಜಿ, ಡಾಬಸ್‌ಪೇಟೆ ಬಸವ ರಮಾನಂದ ಸ್ವಾಮೀಜಿ, ತುಮಕೂರಿನ ಮಹಾಲಿಂಗ ಸ್ವಾಮೀಜಿ, ಮೈಸೂರಿನ ಲಿಂಗಮೂರ್ತಿ ಸ್ವಾಮೀಜಿ, ಶರಣೆ ಮುಕ್ತಾಯಕ್ಕ ಇದ್ದರು.

ಮಠದ ಆವರಣದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲು ಪೊಲೀಸರು ಅನುಮತಿ ನೀಡಲಿಲ್ಲ.

ಚಿತ್ರದುರ್ಗದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ನಡೆದ ಧರಣಿಯಲ್ಲಿ ಬಸವಪ್ರಭು ಸ್ವಾಮೀಜಿ ಮಾತನಾಡಿದರು.

ಸರ್ಕಾರ ಮಠದ ವಿಷಯದಲ್ಲಿ ಹಸ್ತಕ್ಷೇಪ ಮಾಡಿದ್ದು ಖಂಡನೀಯ. ಮಠಾಧೀಶರು ಬೀದಿಗೆ ಇಳಿದರೆ ಸರ್ಕಾರಕ್ಕೆ ಕಷ್ಟವಾಗುತ್ತದೆ.

ಬಸವನಾಗಿದೇವ ಸ್ವಾಮೀಜಿ, ಛಲವಾದಿ ಗುರುಪೀಠ

ಬಸವ ಪರಂಪರೆಯ ಮಠಗಳು ವೈಚಾರಿಕ ಪ್ರಜ್ಞೆ ಬಿತ್ತುವ ಕೆಲಸ ಮಾಡುತ್ತಿವೆ. ಇಂತಹ ಮಠಗಳನ್ನು ನಿಯಂತ್ರಿಸಲು ಸರ್ಕಾರ ಯತ್ನಿಸಿದೆ.

ಬಸವ ಹರಳಯ್ಯ ಸ್ವಾಮೀಜಿ, ಶಿವಶರಣ ಹರಳಯ್ಯ ಗುರುಪೀಠ

'ಗಂಟುಮೂಟೆ ಕಟ್ಟಿಸುತ್ತೇವೆ'

'ಲಿಂಗಾಯತ ಸಮುದಾಯದ ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿ, ಸಮುದಾಯಕ್ಕೆ ಮುಳ್ಳಾಗಿದೆ. ಬಿಜೆಪಿಯನ್ನು ರಾಜ್ಯದಿಂದ ಗಂಟುಮೂಟೆ ಕಟ್ಟಿಸುವ ಕಾರ್ಯವನ್ನು ಲಿಂಗಾಯತ ಮಠಗಳು ಮಾಡಲಿವೆ' ಎಂದು ಬನವಾಸಿಯ ನಾಗಭೂಷಣ ಸ್ವಾಮೀಜಿ ಹೇಳಿದರು.

'ಪ್ರಗತಿಪರ ವಿಚಾರಧಾರೆ, ಧರ್ಮ ಸೇವೆ ಮಾಡುವವರನ್ನು ಸರ್ಕಾರ ಸಹಿಸಿಕೊಳ್ಳುತ್ತಿಲ್ಲ. ಚಿಂತಕರ ಹಣಿಯುವ ಹುನ್ನಾರ ನಡೆಸಿದೆ. ಮತ್ತೆ ಚಾತುರ್ವರ್ಣ ವ್ಯವಸ್ಥೆ ಸ್ಥಾಪಿಸಿ, ಲಿಂಗಾಯತ ಧರ್ಮವನ್ನು ಹೊಸಕಿ ಹಾಕಲು ಮುಂದಾಗಿದೆ. ಮಠ ಹಾಗೂ ಸಮಾಜವನ್ನು ಬ್ರಾಹ್ಮಣೀಕರಣ ಮಾಡಲು ಹವಣಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ, ಡಿಸೆಂಬರ್ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 357 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಪ್ರೌಢಶಾಲೆ, ಪಿಯು ಪರೀಕ್ಷಾ ವಿಭಾಗಗಳು ವಿಲೀನ
ಪಿಯು ಕಾಲೇಜುಗಳಿನ್ನು 'ಹಿರಿಯ ಪ್ರೌಢಶಾಲೆ' 7
ಇಂದು ಕ್ಷೇಮ ಕುಶಲ 4
ಶಿಕ್ಷಕರ ವರ್ಗಾವಣೆ ಕಾಯ್ದೆ ಅಧಿಕೃತ ಜಾರಿ 5
ಅಟಲ್ ಸ್ಮಾರಕಕ್ಕೆ ರಾಹುಲ್ ಭೇಟಿ 8

ಸೆನ್ಸೆಕ್ಸ್	ನಿಫ್ಟಿ	₹/$
60,566	18,015	82.65

ಸರ್ಕಾರದಿಂದ ಹೊಸ ಮಾರ್ಗಸೂಚಿ • ಚಿತ್ರಮಂದಿರ, ಬಾರ್, ಪಬ್‌ಗಳಿಗೆ ಕೆಲವು ನಿರ್ಬಂಧ

ವರ್ಷಾಚರಣೆ: ಮಾಸ್ಕ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೋವಿಡ್ ನಿಯಂತ್ರಣಕ್ಕಾಗಿ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿರುವ ರಾಜ್ಯ ಸರ್ಕಾರ, ಹೊಸ ವರ್ಷಾಚರಣೆಯ ಕೂಟಗಳು ಹಾಗೂ ಚಿತ್ರಮಂದಿರಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸಿದೆ.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಬೆಳಿಗ್ಗೆ ಸಂಪುಟ ಸಭೆ ಬಳಿಕ ಉನ್ನತಮಟ್ಟದ ಸಭೆ ನಡೆಸಿದ ಕಂದಾಯ ಸಚಿವ ಆರ್. ಅಶೋಕ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಬಿಗಿಗೊಳಿಸುವ ತೀರ್ಮಾನ ಕೈಗೊಂಡರು. ಬಳಿಕ ಆರೋಗ್ಯ ಇಲಾಖೆ ಆಯುಕ್ತರು ನೂತನ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ.

ರೆಸ್ಟೋರೆಂಟ್, ಬಾರ್ ಮತ್ತು ಪಬ್‌ಗಳಲ್ಲಿ ದೊಡ್ಡ ಮಟ್ಟದಲ್ಲಿ ಹೊಸ ವರ್ಷಾಚರಣೆ ಕೂಟಗಳನ್ನು ಆಯೋಜಿಸಿದಲ್ಲಿ ಮಾಸ್ಕ್ ಧರಿಸಿದವರಿಗೆ ಮಾತ್ರ ಪ್ರವೇಶ ನೀಡಬೇಕು. ಸಮಾರಂಭಗಳಲ್ಲಿ ಭಾಗವಹಿಸುವವರ ದೇಹದ ಉಷ್ಣಾಂಶ ತಪಾಸಣೆಗೆ ವ್ಯವಸ್ಥೆ ಮಾಡಬೇಕು ಎಂದು ಮಾರ್ಗಸೂಚಿಯಲ್ಲಿ ನಿರ್ದೇಶನ ನೀಡಲಾಗಿದೆ.

60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು, ಗರ್ಭಿಣಿಯರು, ಚಿಕ್ಕ ವಯಸ್ಸಿನ ಮಕ್ಕಳು ಹಾಗೂ ತೀವ್ರ ಸ್ವರೂಪದ ರೋಗಗಳಿಂದ ಬಳಲುತ್ತಿರುವವರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಸೂಕ್ತವಲ್ಲ ಎಂದು ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಏಳು ದಿನಗಳ ಪ್ರತ್ಯೇಕವಾಸ: ಅಂತರರಾಷ್ಟ್ರೀಯ ಪ್ರಯಾಣಿಕರಲ್ಲಿ ಶೇಕಡ 2ರಷ್ಟು ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗುವುದು. ಸೋಂಕು ದೃಢಪಟ್ಟವರಲ್ಲಿ ಸಿ.ಟಿ ಮೌಲ್ಯ 25ಕ್ಕಿಂತ ಕಡಿಮೆ ಇರುವವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನೆ ಅಧ್ಯಯನಕ್ಕೆ ಕಳುಹಿಸಲಾಗುವುದು. ವಿದೇಶಗಳಿಂದ ಬಂದಿಳಿದ ಸಂದರ್ಭದಲ್ಲಿ ಸೋಂಕು ಪತ್ತೆಯಾದರೆ ಅಂಥವರನ್ನು ಪ್ರತ್ಯೇಕವಾಸದಲ್ಲಿ ಇರಿಸಲು ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಮತ್ತು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗಳಲ್ಲಿ ವಿಶೇಷ ವಾರ್ಡ್‌ಗಳನ್ನು ಕಾಯ್ದಿರಿಸಲಾಗಿದೆ ಎಂದು ತಿಳಿಸಲಾಗಿದೆ.

ಕೋವಿಡ್ ದೃಢಪಟ್ಟ ವಿದೇಶಿ ಪ್ರಯಾಣಿಕರು ಏಳು ದಿನಗಳ ಕಾಲ ಪ್ರತ್ಯೇಕವಾಸದಲ್ಲಿ ಇರಬೇಕು. ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ಆಸ್ಪತ್ರೆಗೆ ದಾಖಲಾಗಬೇಕು ಎಂದು ಸೂಚಿಸಲಾಗಿದೆ.

ನಿರ್ಬಂಧ ಇಲ್ಲ: ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುಧಾಕರ್, 'ಯಾವುದೇ ಕಾರ್ಯಕ್ರಮಗಳಿಗೂ ನಿರ್ಬಂಧ ಇರುವುದಿಲ್ಲ. ಪಾದಯಾತ್ರೆ, ಬಸ್ ಯಾತ್ರೆ ಎಲ್ಲದ್ದಕ್ಕೂ ಅವಕಾಶವಿದೆ. ಆದರೆ, ಕೋವಿಡ್ ನಿಯಂತ್ರಣ ಮಾರ್ಗ ಸೂಚಿ ಪಾಲನೆ ಕಡ್ಡಾಯ' ಎಂದರು.

ಮುಖ್ಯಾಂಶಗಳು

- ಮಾರ್ಗಸೂಚಿ ಪಾಲನೆ ಕಡ್ಡಾಯ
- ಕಾರ್ಯಕ್ರಮ, ಪಾದಯಾತ್ರೆ, ಬಸ್‌ಯಾತ್ರೆ ಎಲ್ಲದ್ದಕ್ಕೂ ಅವಕಾಶ
- ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಸೋಂಕು ಪತ್ತೆ ಪರೀಕ್ಷೆ

ಜನಜೀವನ, ಆರ್ಥಿಕ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಕೋವಿಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದು
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಐವರು ವಿದೇಶಿಯರಲ್ಲಿ ಕೋವಿಡ್ ಪತ್ತೆ

ಗಯಾ/ನವದೆಹಲಿ (ಪಿಟಿಐ): ಬಿಹಾರದ ಬೋಧಗಯಾಕ್ಕೆ ತೀರ್ಥಯಾತ್ರೆ ಬಂದಿರುವ ಥಾಯ್ಲೆಂಡ್‌ನ ನಾಲ್ವರು ಮತ್ತು ಮ್ಯಾನ್ಮಾರ್‌ನ ಒಬ್ಬರು ಸೇರಿ ಐವರು ವಿದೇಶಿ ಪ್ರಜೆಗಳಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ ಎಂದು ಸೋಮವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೌದ್ಧ ಧರ್ಮಗುರು ದಲೈಲಾಮಾ ಅವರ ಈ ವಾರದ ಪ್ರವಚನ ಕೇಳಲು ಬಂದಿದ್ದ ವಿದೇಶಿ ಯಾತ್ರಿಕರನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಯಮಾನುಸಾರ ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ಇರುವುದು ದೃಢಪಟ್ಟಿದೆ. ಸೋಂಕಿತರಲ್ಲಿ ನಾಲ್ವರು ಮಹಿಳೆಯರಿದ್ದಾರೆ.

ವಾರಾಂತ್ಯದಲ್ಲಿ 33 ವಿದೇಶಿಯರನ್ನು ಪರೀಕ್ಷಿಸಲಾಯಿತು ಎಂದು ಗಯಾ ಜಿಲ್ಲೆಯ ವೈದ್ಯಕೀಯ ಉಸ್ತುವಾರಿ ಅಧಿಕಾರಿ ಡಾ.ರಂಜನ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಿರ್ವಹಣೆಗೆ ಅಣಕು ಪರೀಕ್ಷೆ

ನವದೆಹಲಿ (ಪಿಟಿಐ): ಕೋವಿಡ್ ಎದುರಿಸಲು ಆರೋಗ್ಯ ಸೌಲಭ್ಯಗಳ ಸನ್ನದ್ಧತೆ ಖಾತ್ರಿಗಾಗಿ ಕೇಂದ್ರ ಸರ್ಕಾರದ ಸಲಹೆ ಮೇರೆಗೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದೇ 27ರಂದು (ಮಂಗಳವಾರ) ಅಣಕು ಪರೀಕ್ಷೆ ನಡೆಯಲಿದೆ' ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ರಾಜ್ಯಗಳಿಗೆ ಕಳುಹಿಸಿರುವ ಪತ್ರದಲ್ಲಿ ಹೇಳಿದ್ದಾರೆ.

ಸಕ್ರಿಯ ಪ್ರಕರಣಗಳ ಏರಿಕೆ

ದೇಶದಲ್ಲಿ ಕೊರೊನಾ ಸೋಂಕಿನ 196 ಹೊಸ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 3,428ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ಹೇಳಿದೆ.

'ಫ್ಯಾನ್ ಡಾನ್ಸ್' ಮೂಡುಬಿದಿರೆಯಲ್ಲಿ ನಡೆಯುತ್ತಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ದಕ್ಷಿಣ ಕೊರಿಯಾದ ವಿದ್ಯಾರ್ಥಿಗಳು ಬೀಸಣಿಗೆ ನೃತ್ಯವನ್ನು ಸೋಮವಾರ ಪ್ರಸ್ತುತಪಡಿಸಿದರು
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಕರ್ನಾಟಕದ ಮರಾಠಿಗರ ಬೆಂಬಲಕ್ಕೆ ಮಹಾರಾಷ್ಟ್ರ ಸರ್ಕಾರ

'ಇಂದು ನಿರ್ಣಯ ಮಂಡನೆ'

ನವದೆಹಲಿ (ಪಿಟಿಐ): ಕರ್ನಾಟಕ ಗಡಿಯಲ್ಲಿ ನೆಲೆಸಿರುವ ಮರಾಠಿ ಭಾಷಿಕರಿಗೆ ಬೆಂಬಲವಾಗಿ ನಿಲ್ಲುವುದಾಗಿ ಹೇಳಿರುವ ಮುಖ್ಯಮಂತ್ರಿ ಏಕನಾಥ ಶಿಂದೆ ಈ ಸಂಬಂಧ ಮಂಗಳವಾರ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸುವುದಾಗಿ ಪ್ರಕಟಿಸಿದ್ದಾರೆ.

ಕರ್ನಾಟಕದೊಂದಿಗಿನ ಗಡಿ ವಿಚಾರದಲ್ಲಿ ಸರ್ಕಾರ ಮೌನವಹಿಸಿದೆ ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಈ ವಿಷಯ ತಿಳಿಸಿದ್ದಾರೆ.

ತಮ್ಮ ದೆಹಲಿ ಭೇಟಿ ಟೀಕಿಸಿದ ಮತ್ತು ಕರ್ನಾಟಕದಲ್ಲಿರುವ ಮರಾಠಿ ಭಾಷಿಕರಿರುವ ಪ್ರದೇಶವನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಬೇಕೆಂದು ಒತ್ತಾಯಿಸಿದ ಮಹಾರಾಷ್ಟ್ರ ವಿಕಾಸ ಅಘಾಡಿ ನಾಯಕ ಉದ್ಧವ್ ಠಾಕ್ರೆ ಅವರನ್ನೂ ಶಿಂಧೆ ಟೀಕಿಸಿದರು.

'ನಮಗೆ ಬೇರೆಯವರ ಪಾಠ ಅಗತ್ಯವಿಲ್ಲ. ಗಡಿ ಭಾಗದಲ್ಲಿ ನೆಲೆಸಿರುವ ಮರಾಠಿಗರ ಜೊತೆ ನಾವು ದೃಢವಾಗಿ ನಿಂತಿದ್ದೇವೆ. ಈ ಸಂಬಂಧ ಮಂಗಳವಾರ ವಿಧಾನಸಭೆಯಲ್ಲಿ ನಾವು ನಿರ್ಣಯ ಮಂಡಿಸುತ್ತೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಕರ್ನಾಟಕ ಸರ್ಕಾರದ ಕಠಿಣ ನಿಲುವಿನ ಕುರಿತು ಸರ್ಕಾರ ಮೌನವಹಿಸಿದೆಯೇ ಎಂಬ ಪ್ರಶ್ನೆಗೆ, 'ಗಡಿವಿವಾದಕ್ಕೆ ಸಂಬಂಧಿಸಿದ ಹೋರಾಟದಲ್ಲಿ ನಾನು ಜೈಲು ಶಿಕ್ಷೆ ಅನುಭವಿಸಿದವನು' ಎಂದಿದ್ದಾರೆ.

'ಗಡಿ ಭಾಗದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗವಾಗದಂತೆ ನಾವು ನೋಡಿಕೊಳ್ಳುತ್ತೇವೆ. ಕರ್ನಾಟಕ ಸರ್ಕಾರವು ಇದನ್ನು ಖಾತರಿಪಡಿಸಿಕೊಳ್ಳಲಿ' ಎಂದು ಶಿಂದೆ ತಿಳಿಸಿದ್ದಾರೆ.

'ಪ್ರತಿ ಇಂಚು ಭೂಮಿಗೂ ಹೋರಾಟ'

ನಾಗ್ಪುರ (ಪಿಟಿಐ): 'ರಾಜ್ಯದ ಪಾಲಿನ ಪ್ರತಿ ಇಂಚು ಭೂಮಿ ಉಳಿಸಿಕೊಳ್ಳಲು ಮಹಾರಾಷ್ಟ್ರ ಸರ್ಕಾರವು ಹೋರಾಟ ನಡೆಸಲಿದೆ' ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

ಗಡಿ ವಿವಾದ ವಿಷಯ ಕುರಿತು ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಕರ್ನಾಟಕದಲ್ಲಿರುವ ಮರಾಠಿ ಭಾಷಿಕರಿಗೆ ನ್ಯಾಯ ಒದಗಿಸಲು ಏನು ಮಾಡಬೇಕೋ, ಅದೆಲ್ಲವನ್ನೂ ಸರ್ಕಾರ ಮಾಡಲಿದೆ' ಎಂದು ಭರವಸೆ ನೀಡಿದರು.

ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್, ಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾದಂತೆ ಗಡಿ ವಿವಾದ ಕುರಿತು ನಿರ್ಣಯವನ್ನು ಮಂಡಿಸದ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಗಡಿ ವಿಷಯ ಕುರಿತು ಕರ್ನಾಟಕ ಮುಖ್ಯಮಂತ್ರಿ ನೀಡಿರುವ ಹೇಳಿಕೆಗಳಿಂದ ಮರಾಠಿಗರ ಭಾವನೆಗಳಿಗೆ ನೋವಾಗಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್‌ನ ಪೃಥ್ವಿರಾಜ ಚೌಹಾಣ್ ಅವರು, 'ಕರ್ನಾಟಕ ಮುಖ್ಯಮಂತ್ರಿ ಗಡಿ ವಿಷಯ ಕುರಿತು ಪ್ರಚೋದನಕಾರಿ ಹೇಳಿಕೆ ನೀಡುತ್ತಿದ್ದಾರೆ. ಇದನ್ನು ಕೇಂದ್ರ ಗೃಹ ಸಚಿವಾಲಯದ ಗಮನಕ್ಕೆ ತರಬೇಕು' ಎಂದು ಒತ್ತಾಯಿಸಿದರು.

ಗಡಿ ವಿಷಯ ಕುರಿತು ಕರ್ನಾಟಕ ವಿಧಾನಸಭೆಯು ಕಳೆದ ಗುರುವಾರ ಸರ್ವಾನುಮತದ ನಿರ್ಣಯ ಅಂಗೀಕರಿಸಿತ್ತು. ಗಡಿ ವಿಷಯ ಮುಗಿದ ಅಧ್ಯಾಯ. ಈಗಿನ ವಿವಾದ ಮಹಾರಾಷ್ಟ್ರ ಸರ್ಕಾರದ ಸೃಷ್ಟಿ ಎಂದು ಹೇಳಿತ್ತು.

ಕರ್ನಾಟಕ ಮಹಾರಾಷ್ಟ್ರ ನಡುವೆ ಗಡಿ ವಿವಾದವುಳ್ಳ ಪ್ರದೇಶಗಳನ್ನು ಒಟ್ಟಾಗಿಸಿ ಕೇಂದ್ರಾಡಳಿತ ಪ್ರದೇಶವೆಂದು ಕೇಂದ್ರ ಸರ್ಕಾರ ಘೋಷಿಸಬೇಕು
ಉದ್ಧವ್ ಠಾಕ್ರೆ, ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ

ವಿಧಾನಸಭೆ ಚುನಾವಣೆಗೆ ₹300 ಕೋಟಿ

ಬೆಳೆ ಹಾನಿಗೆ ₹758 ಕೋಟಿ • ಕಾರ್ನಾಡ್ ನಾಟಕ ಪ್ರದರ್ಶನಕ್ಕೆ ₹15 ಲಕ್ಷ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಸಭೆ ಚುನಾವಣೆಗೆ ₹300 ಕೋಟಿ, ಅತಿವೃಷ್ಟಿಯಿಂದ ಆಗಿರುವ ಬೆಳೆಹಾನಿಗೆ ಪರಿಹಾರ ಒದಗಿಸಲು ₹758.19 ಕೋಟಿ ಸೇರಿದಂತೆ ಹೆಚ್ಚುವರಿಯಾಗಿ ₹8 ಸಾವಿರ ಕೋಟಿ ವೆಚ್ಚ ಮಾಡಲು ಅನುಮೋದನೆ ಪಡೆಯಲು ಎರಡನೇ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ದೇವಸ್ಥಾನ, ಸಮುದಾಯಗಳಿಗೆ ನೀಡಲಾಗುತ್ತಿರುವ ಅನುದಾನವನ್ನು ಪೂರಕ ಅಂದಾಜಿನಲ್ಲಿ ಒದಗಿಸಿಕೊಳ್ಳಲಾಗಿದೆ. ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಸಚಿವರ ಅಧಿಕೃತ ಕಾರ್ಯಕ್ರಮಗಳಿಗೆ ಬಾಡಿಗೆ ಆಧಾರದ ಮೇಲೆ ಹೆಲಿಕಾಪ್ಟರ್/ ಏರ್ ಕ್ರಾಫ್ಟ್ ಬಿಲ್‌ಗಳನ್ನು ಪಾವತಿಸಲು ₹6 ಕೋಟಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಚರ್ಮಗಂಟು ರೋಗದಿಂದ ಮೃತಪಟ್ಟ ರಾಸುಗಳ ಮಾಲೀಕರಿಗೆ ಪರಿಹಾರ ವಿತರಿಸಲು ₹30 ಕೋಟಿ ಹೆಚ್ಚುವರಿಯಾಗಿ ಕೊಡಲಾಗಿದೆ.

- ಅತಿವೃಷ್ಟಿಯಿಂದ ಮೂಲಸೌಕರ್ಯಕ್ಕೆ ಆಗಿರುವ ಹಾನಿ ಸರಿಪಡಿಸಲು ₹124.50 ಕೋಟಿ ಹಾಗೂ ಕೊಡಗು ಜಿಲ್ಲೆಯಲ್ಲಿ ಮೂಲಸೌಕರ್ಯಕ್ಕೆ ಆಗಿರುವ ಸರಿಪಡಿಸಲು ನಡೆಸಿದ ಕಾಮಗಾರಿಗಳ ಬಾಕಿ ಬಿಲ್‌ಗಳ ಪಾವತಿಗೆ ಬೇಕಾದ ₹13.58 ಕೋಟಿ ಸೇರಿದಂತೆ ಒಟ್ಟು ₹638.08 ಕೋಟಿ

5ನೇ ಪುಟ ನೋಡಿ

ಪರಿಶಿಷ್ಟ ಮೀಸಲು ಹೆಚ್ಚಳ: ಮಸೂದೆಗೆ ಒಪ್ಪಿಗೆ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಒಟ್ಟಾರೆ ಶೇ 6 ರಷ್ಟು ಹೆಚ್ಚಿಸುವ ಮಸೂದೆಗೆ ವಿಧಾನಸಭೆ ಸೋಮವಾರ ಸರ್ವಾನುಮತದ ಒಪ್ಪಿಗೆ ನೀಡಿದೆ.

ಇದರಿಂದ ಪರಿಶಿಷ್ಟ ಜಾತಿ ಮೀಸಲು ಪ್ರಮಾಣ ಶೇ 17 ಕ್ಕೂ, ಪರಿಶಿಷ್ಟ ಪಂಗಡಗಳ ಮೀಸಲಾತಿ ಶೇ 7 ಕ್ಕೆ ಹೆಚ್ಚಲಿದೆ. ಈ ಹಿಂದೆ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಇದೀಗ ಮಸೂದೆಯನ್ನು ಮಂಡಿಸಿ ಅದಕ್ಕೆ ಒಪ್ಪಿಗೆ ಪಡೆಯಲಾಯಿತು. ಪರಿಷತ್ತಿನಲ್ಲಿ ಅಂಗೀಕಾರವಾದರೆ ಮೀಸಲಾತಿ ಪ್ರಮಾಣ ಶೇ 24 ರಷ್ಟು ಹೆಚ್ಚಿಸುವ ಅವಕಾಶದ ಮೊದಲ ಹೆಜ್ಜೆ ಪೂರ್ಣಗೊಳ್ಳಲಿದೆ.

ಮೀಸಲಾತಿ ಹೆಚ್ಚಳದ ಕುರಿತು ನಿಯಮ 69 ರ ಮೇಲಿನ ಚರ್ಚೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಈ ಮಸೂದೆಯನ್ನು ಮಂಡಿಸಿದರು. 'ಈ ಮಸೂದೆಯನ್ನು ತುಂಬು ಹೃದಯದಿಂದ ಬೆಂಬಲಿಸುತ್ತೇವೆ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್ ಬಂಡೆಪ್ಪ ಕಾಶೆಂಪೂರ ತಿಳಿಸಿದರು.

5ನೇ ಪುಟ ನೋಡಿ

ವಿಡಿಯೊಕಾನ್ ಸ್ಥಾಪಕ ವೇಣುಗೋಪಾಲ್ ಬಂಧನ 8

ಕ್ವಾರಿ ಕುಸಿತ: ಮೂವರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಬಿಸಲವಾಡಿ ಗ್ರಾಮದ ಬಿಳಿಕಲ್ಲು ಕ್ವಾರಿಯೊಂದರಲ್ಲಿ ಸೋಮವಾರ ಕಲ್ಲು ಕುಸಿದು ಕಾಗಲವಾಡಿ ಮೋಳೆಯ ಕಾರ್ಮಿಕರಾದ ಕುಮಾರ್ (28), ಶಿವರಾಜು (35) ಮತ್ತು ಸಿದ್ದರಾಜು (27) ಎಂಬವರು ಮೃತಪಟ್ಟಿದ್ದಾರೆ. 'ಗಣಿಯಲ್ಲಿ 12 ಕಾರ್ಮಿಕರು ಕೆಲಸ ಮಾಡುತ್ತಿದ್ದರು' ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

ಇದೇ ವರ್ಷ ಮಾರ್ಚ್ 4ರಂದು ಗುಂಡ್ಲುಪೇಟೆ ತಾಲ್ಲೂಕಿನ ಮಡಹಳ್ಳಿಯಲ್ಲಿ ಬಿಳಿಕಲ್ಲು ಕ್ವಾರಿ ಗುಡ್ಡ ಕುಸಿದು ಮೂವರು ಮೃತಪಟ್ಟಿದ್ದರು. ಆ ಕಹಿನೆನಪು ಹಸಿಯಾಗಿರುವಾಗಲೇ ಮತ್ತೊಂದು ಅವಘಡ ಸಂಭವಿಸಿದೆ.

ಬಿಸಲವಾಡಿಯ ಸರ್ವೆ ನಂಬರ್ 172ರಲ್ಲಿರುವ ಕ್ವಾರಿಯನ್ನು ರೇಣುಕಾದೇವಿ ಎಂಬುವವರು ನಡೆಸುತ್ತಿದ್ದಾರೆ. ಒಟ್ಟು 3 ಎಕರೆಯಲ್ಲಿ ಗಣಿಗಾರಿಕೆ ನಡೆಸಲು ಪರವಾನಗಿ ಪಡೆದಿದ್ದಾರೆ. ಕ್ವಾರಿಯು 250 ಅಡಿಗೂ ಹೆಚ್ಚು ಆಳವಿದೆ.

ಕ್ವಾರಿಯನ್ನು ಅವೈಜ್ಞಾನಿಕವಾಗಿ ನಿರ್ವಹಿಸಲಾಗುತ್ತಿದೆ. ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಪರವಾನಗಿ ರದ್ದತಿಗೆ ಕ್ರಮ ಕೈಗೊಳ್ಳಲಾಗುವುದು
ನಂಜುಂಡಸ್ವಾಮಿ, ಉಪ ನಿರ್ದೇಶಕ ಗಣಿ ಮತ್ತು ಭೂವಿಜ್ಞಾನ ಇಲಾಖೆ

ಸಂಪುಟ ವಿಸ್ತರಣೆ: ವರಿಷ್ಠರ ಜತೆ ಸಿ.ಎಂ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಸಚಿವ ಸಂಪುಟ ವಿಸ್ತರಣೆಯ ನಿರೀಕ್ಷೆ ಹೊತ್ತು ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಎರಡೂವರೆ ಗಂಟೆಗಳ ಕಾಲ ಸಭೆ ನಡೆಸಿದರು. ಆದರೆ ವರಿಷ್ಠರ ಸಮ್ಮತಿ ದೊರೆಯದ ಕಾರಣ, ಸಂಪುಟ ವಿಸ್ತರಣೆ ಯಾಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಬಿಜೆಪಿಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್, ಕರ್ನಾಟಕ ಉಸ್ತುವಾರಿ ಅರುಣ್ ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಭೆಯಲ್ಲಿ ಹಾಜರಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, 'ಸಂಪುಟ ವಿಸ್ತರಣೆ ಬಾಕಿ ಇರುವ ಕುರಿತು ಪಕ್ಷದ ನಾಯಕರಿಗೆ ವಿವರಿಸಿದ್ದೇನೆ. ನನ್ನಿಂದ ಎಲ್ಲ ಮಾಹಿತಿ ಪಡೆದುಕೊಂಡಿರುವ ವರಿಷ್ಠರು, ಶೀಘ್ರದಲ್ಲೇ ನಿರ್ಧಾರ ಪ್ರಕಟಿಸುವುದಾಗಿ ತಿಳಿಸಿದ್ದಾರೆ' ಎಂದರು.

3ನೇ ಪುಟ ನೋಡಿ

ಮುಖ್ಯಾಂಶಗಳು

- ವಿಸ್ತರಣೆ ಸಾಧ್ಯತೆ ಸದ್ಯಕ್ಕೆ ದೂರ
- ಶೀಘ್ರದಲ್ಲಿಯೇ ವರಿಷ್ಠರಿಂದ ನಿರ್ಧಾರ ಪ್ರಕಟ: ಸಿ.ಎಂ

ವಿದೇಶಗಳತ್ತ ಉಕ್ರೇನ್ ಸಂತ್ರಸ್ತ ವೈದ್ಯ ವಿದ್ಯಾರ್ಥಿಗಳು

• ಬಸವರಾಜ್ ಸಂಪಳ್ಳಿ

ವಿಜಯಪುರ: ಉಕ್ರೇನ್-ರಷ್ಯಾ ಯುದ್ಧ ಆರಂಭವಾದ ಬಳಿಕ ಭಾರತಕ್ಕೆ ಮರಳಿದ್ದ ನಿರಾಶ್ರಿತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸದ ಕಾರಣ ನಿರಾಶರಾದ ವಿದ್ಯಾರ್ಥಿಗಳು ಇದೀಗ ಮತ್ತೆ ವಿದೇಶಗಳತ್ತ ಮುಖ ಮಾಡತೊಡಗಿದ್ದಾರೆ. ಇದರಿಂದ ಪೋಷಕರಿಗೂ ದೊಡ್ಡ ಆರ್ಥಿಕ ಹೊರೆ ಬೀಳಲಿದೆ.

ಯುದ್ಧದ ಆರಂಭದ ವೇಳೆ ಉಕ್ರೇನ್‌ನಿಂದ ರಾಜ್ಯದ ಸುಮಾರು 700 ವೈದ್ಯಕೀಯ ವಿದ್ಯಾರ್ಥಿಗಳು ಮರಳಿದ್ದರು. ಇವರೂ ಸೇರಿ ದೇಶದ ಸಾವಿರಾರು ವಿದ್ಯಾರ್ಥಿಗಳಿಗೆ ಭಾರತದಲ್ಲೇ ಶಿಕ್ಷಣ ಮುಂದುವರಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ನಿರಾಕರಿಸಿದೆ.

ರಾಜ್ಯದ ವಿವಿಧ ಖಾಸಗಿ ವೈದ್ಯಕೀಯ ಕಾಲೇಜುಗಳು ಉಕ್ರೇನ್ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರಿಸಲು ಅವಕಾಶ ಕಲ್ಪಿಸಲು ಮುಂದೆ ಬಂದಿದ್ದವು. ಆದರೆ, ಎನ್‌ಎಂಸಿ ಅನುಮತಿ ನೀಡಲಿಲ್ಲ. ದೇಶದಲ್ಲಿರುವ ವೈದ್ಯಕೀಯ ಶಿಕ್ಷಣ, ಔಷಧ, ಚಿಕಿತ್ಸಾ ಪದ್ಧತಿಗೂ ವಿದೇಶಗಳ ವೈದ್ಯಕೀಯ ಶಿಕ್ಷಣ ಪದ್ಧತಿಗೂ ವ್ಯತ್ಯಾಸ ಇದೆ ಎಂದೂ ನಿರಾಕರಣೆಗೆ ಕಾರಣ ನೀಡಲಾಗಿತ್ತು.

ಶಿಕ್ಷಣ ಮುಂದುವರಿಸಲು ನಮ್ಮ ದೇಶದಲ್ಲಿ ಅವಕಾಶ ಸಿಗಲಿಲ್ಲ. ವಿದೇಶಗಳಲ್ಲಿ ಶಿಕ್ಷಣ ಮುಂದುವರಿಸಲು ಉಕ್ರೇನ್ ಅನುಮತಿ ಕಲ್ಪಿಸಿತು
ವಿವಿಧಾ ಅಲ್ಲಮಪ್ರಭು, ವೈದ್ಯಕೀಯ ವಿದ್ಯಾರ್ಥಿನಿ, ವಿಜಯಪುರ

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಎಲ್‌ಐಸಿ ಹೌಸಿಂಗ್: ಗೃಹಸಾಲ ಬಡ್ಡಿ ಏರಿಕೆ 8
ಮಾದಕದ್ರವ್ಯ, ಶಸ್ತ್ರಾಸ್ತ್ರವಿದ್ದ ಪಾಕ್ ದೋಣಿ ವಶ; 10 ಮಂದಿ ಬಂಧನ 8
ಕ್ರಿಕೆಟ್: ಗ್ರೀನ್ ಪ್ರಭಾವಿ ಬೌಲಿಂಗ್ 9

ರೆಪ್ಕೋ ಬ್ಯಾಂಕ್ ಸಾಲಮೇಳ

ಬೆಂಗಳೂರು: ರೆಪ್ಕೋ ಬ್ಯಾಂಕ್ ನಗರದ ಹಲಸೂರು ಶಾಖೆಯಲ್ಲಿ ಜನವರಿ 5ರವರೆಗೆ ಸಾಲ ಮೇಳವನ್ನು ಆಯೋಜಿಸಿದೆ. ಮಾಹಿತಿಗೆ 94490 52450 ಸಂಪರ್ಕಿಸಬಹುದು.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: E-GSU-ELE-2022-23-OT-5
ದಿನಾಂಕ: 21.12.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ, ಬೆಂಗಳೂರು ರವರ ಪ್ರಸ್ತಾಪಿಸಿರುವ ಕಚೇರಿ ಕಟ್ಟಡಕ್ಕೆ ಬೇಕಾದ ವಿದ್ಯುದೀಕರಣ ಕೆಲಸ.	ರೂ. 37,20,066/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.01.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ಗತಿ ಶಕ್ತಿ ಘಟಕ ಬೆಂಗಳೂರು

PUB/565/AAD/PRB/SWR/2022-23

S.W.Railways SWRRLY SWRRLY

ಇಂದು, ನಾಳೆ ಭಾರತೀಯ ಅರ್ಥಶಾಸ್ತ್ರ ಸಂಘದ ಸಮ್ಮೇಳನ

ಬೆಂಗಳೂರು: ಭಾರತೀಯ ಅರ್ಥಶಾಸ್ತ್ರ ಸಂಘದ 105ನೇ ವಾರ್ಷಿಕ ಸಮ್ಮೇಳನ ಡಿ.27, 28ರಂದು ಗಾಂಧಿನಗರದ ಶೇಷಾದ್ರಿ ರಸ್ತೆಯ ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಸಿಎಂಎಸ್ ಬ್ಯುಸಿನೆಸ್ ಸ್ಕೂಲ್‌ನಲ್ಲಿ ನಡೆಯಲಿದೆ.

ಜಾಗತಿಕ ಅರ್ಥಶಾಸ್ತ್ರ, ತಾಂತ್ರಿಕ ಅಭಿವೃದ್ಧಿ, ಹೊಸ ಉಪಕ್ರಮಗಳು, ಜಾಗತಿಕ ಹಿಂಜರಿತ, ಕರ್ನಾಟಕದ ಆರ್ಥಿಕತೆಯ ಸಮಕಾಲೀನ ಸವಾಲುಗಳ ಕುರಿತು ಸಮ್ಮೇಳನದಲ್ಲಿ ಚರ್ಚೆಗಳು ನಡೆಯಲಿವೆ. ಉಪ ರಾಷ್ಟ್ರಪತಿ ಜಗದೀಪ್ ಧನ್ಕರ್, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉಪಸ್ಥಿತರಿರುವರು. ನೀತಿ ಆಯೋಗದ ಕಾರ್ಯದರ್ಶಿ ರಮೇಶ್ ಚಂದ್ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಅಧ್ಯಕ್ಷ ವಿ.ಕೆ. ಮಲ್ಹೋತ್ರ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕರ್ನಾಟಕದ ಆರ್ಥಿಕತೆಯ ಅವಲೋಕನ, ಕೃಷಿ ಕ್ಷೇತ್ರದ ನೀತಿ ಮತ್ತು ಸವಾಲುಗಳು, ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ಪಥ, ಸೇವಾ ವಲಯದ ಆರ್ಥಿಕತೆಯ ಮೌಲ್ಯಮಾಪನ, ಕುರಿತು ಗೋಷ್ಠಿಗಳು ನಡೆಯಲಿವೆ ಎಂದು ವಿವರ ನೀಡಿದರು.

ಯಶವಂತಪುರ–ಮಂಗಳೂರು ವಿಶೇಷ ರೈಲು

ಮಂಗಳೂರು: ಯಶವಂತಪುರ ಮತ್ತು ಮಂಗಳೂರು ಮಧ್ಯೆ ಶ್ರವಣಬೆಳಗೊಳ ಮಾರ್ಗವಾಗಿ ವಿಶೇಷ ರೈಲು ಸಂಚರಿಸಲಿದೆ.

ಇದೇ 28ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಡುವ (06565) ರೈಲು ಮರುದಿನ ಬೆಳಿಗ್ಗೆ 9.50ಕ್ಕೆ ಮಂಗಳೂರು ಜಂಕ್ಷನ್ ರೈಲು ನಿಲ್ದಾಣ ತಲುಪಲಿದೆ.

ಇದೇ 29ರಂದು ಸಂಜೆ 5ಕ್ಕೆ ಮಂಗಳೂರು ಜಂಕ್ಷನ್‌ನಿಂದ ಹೊರಡುವ (06566) ರೈಲು, ಮರುದಿನ ನಸುಕಿನ ಜಾವ 4ಕ್ಕೆ ಯಶವಂತಪುರ ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಳಮೀಸಲಾತಿ ವಿರೋಧಿಯಲ್ಲ: ಜಿ.ಪರಮೇಶ್ವರ್ ಹೇಳಿಕೆ

ದಲಿತೋತ್ಸವದಲ್ಲಿ ಕಾಂಗ್ರೆಸ್ ಸ್ಪಷ್ಟ ನಿಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ ಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಹೊಂದಿರುವ ನಿಲುವನ್ನು ಚಿತ್ರದುರ್ಗದಲ್ಲಿ ಜ.8ರಂದು ನಡೆಯಲಿರುವ ದಲಿತೋತ್ಸವದಲ್ಲಿ ಪ್ರಕಟಿಸಲಾಗುವುದು' ಎಂದು ಕಾಂಗ್ರೆಸ್ ಪ್ರಣಾಳಿಕೆ ಹಾಗೂ ನೀತಿ ನಿರೂಪಣಾ ಸಮಿತಿಯ ಅಧ್ಯಕ್ಷ ಜಿ.ಪರಮೇಶ್ವರ್ ತಿಳಿಸಿದರು.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ 15 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಹೋರಾಟದ ಸ್ಥಳಕ್ಕೆ ನಾನು ಬಂದಿರುವುದು ಬಹಳಷ್ಟು ಜನರಿಗೆ ಆಶ್ಚರ್ಯ ಆಗಿರಬಹುದು. ನನ್ನ ವೈಯಕ್ತಿಕ ಬದ್ಧತೆ, ಪಕ್ಷದ ತೀರ್ಮಾನ ಮತ್ತು ನಮಗಿರುವ ಆತಂಕವನ್ನು ನಿಮ್ಮ ಮುಂದಿಡಲು ಬಂದಿದ್ದೇನೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ, ನಾನೂ ಸಚಿವನಾಗಿದ್ದೆ. ಪರಿಶಿಷ್ಟ ಜಾತಿ ಮತ್ತು ಪಂಗಡದರಿಗೆ ದೊರೆತಿರುವ ಶಿಕ್ಷಣ, ಉದ್ಯೋಗ ಸೇರಿ ಸ್ಥಿತಿಗತಿ ಅಧ್ಯಯನ ನಡೆಸುವಂತೆ ಸಂಪುಟದಲ್ಲಿದ್ದ ಸಮುದಾಯದ ಸಚಿವರೆಲ್ಲರೂ ಪ್ರಸ್ತಾಪಿಸಿದ್ದೆವು. ಎ.ಜೆ.ಸದಾಶಿವ ಆಯೋಗ ರಚನೆ ಸಂದರ್ಭದಲ್ಲೂ ಪ್ರಮುಖ ಪಾತ್ರ ವಹಿಸಿದ್ದೆವು' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಜಿ.ಪರಮೇಶ್ವರ್ ಮಾತನಾಡಿದರು. ಹೋರಾಟಗಾರ ಶಾಂತಕುಮಾರ್ ಚಳ್ಳಕೆರೆ, ಕರಿಯಪ್ಪ ಗುಡಿಮನಿ, ಎಸ್. ಮಾರಪ್ಪ, ರಮೇಶ್ ಚಕ್ರವರ್ತಿ ಇದ್ದರು

ಸವಿತಾ ಸಮುದಾಯ ಆಗ್ರಹ

ಸವಿತಾ ಸಮುದಾಯಕ್ಕೆ ಪ್ರವರ್ಗ 2ಎದಲ್ಲಿ ಒಳಮೀಸಲಾತಿ ಸೌಲಭ್ಯ ನೀಡಬೇಕು ಎಂದು ಕರ್ನಾಟಕ ರಾಜ್ಯ ಸವಿತಾ ಸಮಾಜ ಆಗ್ರಹಿಸಿದೆ.

'ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಸವಿತಾ ಸಮುದಾಯದವರಾದ ನಾವು ಹಿಂದುಳಿದಿದ್ದು, ಕುಲಕಸುಬಾದ ಕ್ಷೌರಿಕ ವೃತ್ತಿಯನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ. ಈ ಸಮಾಜಕ್ಕೆ ಪ್ರಬಲ ಸಮುದಾಯಗಳಿರುವ 2ಎ ಮೀಸಲಾತಿ ಸೌಲಭ್ಯ ನೀಡಲಾಗಿದೆ. ಇದರಿಂದ ಸಮುದಾಯಕ್ಕೆ ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಆದ್ದರಿಂದ ಪ್ರವರ್ಗ 2ಎ ಒಳಗಡೆ ಒಳಮೀಸಲಾತಿ ಕಲ್ಪಿಸಬೇಕು' ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ಟಿ. ತ್ಯಾಗರಾಜ ಆಗ್ರಹಿಸಿದರು.

'ಸವಿತಾ ಸಮುದಾಯಕ್ಕೆ ಒಳಮೀಸಲಾತಿ ನೀಡಬೇಕೆಂದು ಹಲವು ಬಾರಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆ ಮಾತನಾಡಲು ಸಮುದಾಯದಲ್ಲಿ ಯಾವುದೇ ಪ್ರಬಲ ನಾಯಕರು ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೂಡಲೇ ಒಳಮೀಸಲಾತಿ ಸೌಲಭ್ಯವನ್ನು ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ನಾನು ಒಳ ಮೀಸಲಾತಿ ವಿರೋಧಿ ಅಲ್ಲ. ಆದರೆ, ವಿರೋಧಿ ಎಂಬಂತೆ ಬಿಂಬಿಸಲಾಗಿತ್ತು. ನಮ್ಮ ಸರ್ಕಾರವೂ ಸೇರಿ ಎಲ್ಲಾ ಸರ್ಕಾರಗಳೂ ಸದಾಶಿವ ಆಯೋಗದ ವರದಿ ಮಂಡಿಸದೆ ವಿಳಂಬ ಮಾಡಿವೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಎಚ್.ಆಂಜನೇಯ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ವಿಧಾನಸಭೆಯ ಮುಂದಿನ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ವಿಷಯವನ್ನೂ ಸೇರಿಸಲಾಗುವುದು' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಅಂಬಣ್ಣ ಅರೋಲಿಕರ್, 'ಒಳ ಮೀಸಲಾತಿ ಜಾರಿ ಸಂಬಂಧ ಆಯೋಗ ರಚಿಸಲು ಹೋರಾಟ ಮಾಡಿದ್ದೆವು. ಆಯೋಗಕ್ಕೆ ಅನುದಾನ ಒದಗಿಸಲು ಹೋರಾಟ ಮಾಡಿದೆವು. ಈಗ ಆಯೋಗದ ವರದಿ ಜಾರಿಗೆ ಹೋರಾಟ ಮಾಡುತ್ತಿದ್ದೇವೆ. ಇದು ನಮ್ಮ ದುರಂತ' ಎಂದರು.

'ಒಳ ಮೀಸಲಾತಿಗಾಗಿ ಅಧಿವೇಶನದಲ್ಲಿ ಒತ್ತಾಯಿಸುವುದು ಪ್ರತಿಪಕ್ಷದ ಜವಾಬ್ದಾರಿ. ಅವರ ಕೆಲಸವನ್ನು ಬೀದಿಯಲ್ಲಿ ನಿಂತು ನಾವು ಮಾಡುತ್ತಿದ್ದೇವೆ. ಅಧಿವೇಶನದಲ್ಲಿ ಬೇರೆಯವರು ಪ್ರಸ್ತಾಪಿಸಿದರೆ ಮಾತನಾಡುತ್ತೇನೆ ಎಂದು ಸಮಾಜ ಕಲ್ಯಾಣ ಸಚಿವರು ಹೇಳಿಕೆ ನೀಡಿದ್ದಾರೆ. ಇದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸ' ಎಂದು ಆರೋಪಿಸಿದರು.

'ಬೆಳಗಾವಿ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬರಲಿದೆಯೇ ಎಂಬುದನ್ನು ಡಿಸೆಂಬರ್ 30ರ ತನಕ ಕಾಯುತ್ತೇವೆ. ಚರ್ಚೆಗೆ ತೆಗೆದುಕೊಳ್ಳದಿದ್ದರೆ ದೊಡ್ಡ ಮಟ್ಟದಲ್ಲಿ ಆಗುವ ಅನಾಹುತಕ್ಕೆ ರಾಜ್ಯ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ' ಎಂದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ರಾಮನಗರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ–562159.
Email: ID: dhoramanagaram@gmail.com P.No: 080–29576058
ಸಂ:ಜಿಆಕುಕ/ರಾ/ಸರಬ/15/2022–23 ದಿನಾಂಕ: 22/12/2022

ಇ–ಟೆಂಡರ್ ಅಧಿಸೂಚನೆ
(E-PROCUREMENT TENDER NOTIFICATION)

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ರಾಮನಗರ ಜಿಲ್ಲೆಯ ಅಧೀನದ ಆಸ್ಪತ್ರೆಗಳಿಗೆ ಪೀಠೋಪಕರಣಗಳನ್ನು ಖರೀದಿಸಲು ಇ–ಟೆಂಡರ್ ಪ್ರಕಟಣೆ ಹೊರಡಿಸುತ್ತಿರುವ ಬಗ್ಗೆ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ ಇ–Procurement ಟೆಂಡರ್ ಮೂಲಕ ಪಡೆಯುವ ಬಗ್ಗೆ.

1.	ಟೆಂಡರ್ ಪ್ರಕಟಣೆ ದಿನಾಂಕ:	ದಿನಾಕ: 22/12/2022
2.	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ: 22/12/2022
3.	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 06.01/2023ರ ಸಂಜೆ 17.30 ಗಂಟೆಗೆ
4.	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ ದಿನಾಂಕ : 09/01/2023 ರ ಬೆಳಿಗ್ಗೆ 11.00 ಗಂಟೆಗೆ
5.	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ	ರೂ. 17,500/–
6.	ಟೆಂಡರ್‌ನ ಒಟ್ಟು ಮೊತ್ತ	ರೂ. 7,00,000/–
7.	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ರಾಮನಗರ, ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಟೆಂಡರ್ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಮನಗರ

THE BIG DISCOUNT SALE
All New 2022 Collection at Mill Rate



SINCE 1960 hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas.
HEAVY DISCOUNT upto 50%
Shop online at www.hakoba.in
Venue THE CANARA UNION
No. 42, 8th Main, 13th Cross, Canara Union Road, Bangalore - 03.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಿಐಸಿಯಲ್ಲಿ ಇಂದು ಸಂಗೀತ ಸಂಜೆ ಜನ್ನಿ, ಬಿ. ಜಯಶ್ರೀ ಗಾನ ಸುಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಮನ ಸಾಂಸ್ಕೃತಿಕ ಸಂಘಟನೆಯ ಸಂಸ್ಥಾಪಕ ಹಾಗೂ ಖ್ಯಾತ ಗಾಯಕ ಎಚ್. ಜನಾರ್ದನ (ಜನ್ನಿ) ಅವರ ಹಾಡುಗಳೊಂದಿಗೆ ಜನಮನ ಸ್ಪಂದನ ಕಾರ್ಯಕ್ರಮ ದೊಮ್ಮಲೂರು ಬಳಿ ಇರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ(ಬಿಐಸಿ) ಇದೇ 27ರಂದು ಮಂಗಳವಾರ ನಡೆಯಲಿದೆ.

ಸಂಜೆ 7 ಗಂಟೆಯಿಂದ 8.30ರ ವರೆಗೆ ಜನಾರ್ದನ ಅವರು ದಲಿತ ಗೀತೆಗಳು, ಜಾನಪದ ಮತ್ತು ಕ್ರಾಂತಿ ಗೀತೆಗಳನ್ನು ಹಾಡಲಿದ್ದಾರೆ. ಮೈಸೂರು ಮೂಲದ ಜನಾರ್ದನ್ ಅವರು ಮೂರು ದಶಕಗಳಿಂದ ನಾಟಕ, ಸಂಗೀತ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ರಂಗಾಯಣದ ಸ್ಥಾಪನೆಯಲ್ಲಿ ಬಿ.ವಿ. ಕಾರಂತ ಅವರೊಂದಿಗೆ ಸಕ್ರಿಯ ಪಾತ್ರ ವಹಿಸಿದ್ದ ಜನಾರ್ದನ್, ರಂಗಾಯಣದ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಚಿತ್ರರಂಗದೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಹಿನ್ನೆಲೆ ಗಾಯಕರಾಗಿ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಜನಾರ್ದನ್ ನೇತೃತ್ವದ ಜನಮನ ತಂಡದಿಂದ ಜಾನಪದ ಗೀತೆಗಳು, ವಚನಗಳು, ರಂಗ ಗೀತೆ, ಹೋರಾಟದ ಗೀತೆಗಳ ಕಾರ್ಯಕ್ರಮ ನಡೆಯಲಿದೆ ಎಂದು ಬಿಐಸಿ ತಿಳಿಸಿದೆ.

ಜನಾರ್ದನ್

ಬಿ.ಜಯಶ್ರೀ

ಖ್ಯಾತ ಗಾಯಕಿ ಬಿ.ಜಯಶ್ರೀ ಅವರಿಂದ ಕನ್ನಡ ರಂಗಭೂಮಿ ಸಂಗೀತ ಸಂಜೆ ಕಾರ್ಯಕ್ರಮ ಇದೇ 29ರಂದು ಸಂಜೆ 6.30ರಿಂದ 8 ಗಂಟೆ ತನಕ ಬಿಐಸಿಯಲ್ಲಿ ನಡೆಯಲಿದೆ. ಲೇಖಕಿ ಪ್ರೀತಿ ನಾಗರಾಜ್, ನಟ ಲೋಕೇಶ್ ಆಚಾರ್, ನಟಿ ಪೂಜಾ ರಾವ್, ಸಂಗೀತಗಾರರಾದ ಜಿ.ವಿ. ಭಾರ್ಗವ್, ರೋಹಿಣಿ ರಘುನಂದನ್, ರಂಗ ನಿರ್ದೇಶಕ ಅರವಿಂದ ಕುಪ್ಲಿಕರ್, ಗಾಯಕಿ ದೀಪಾ ಅಗರ್‌ವಾಲ್, ಸಂಗೀತಗಾರ ಜಿ.ವಿವೇಕ್ ಭಾಗವಹಿಸಲಿದ್ದಾರೆ ಎಂದು ಬಿಐಸಿ ಮಾಹಿತಿ ನೀಡಿದೆ.

'ಪಂಚಭೂತ ಅನುಸರಿಸಿ ಮನೆ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯಯುತ ಮತ್ತು ಸಮೃದ್ಧಿ ಜೀವನಕ್ಕೆ ಪಂಚಭೂತಗಳನ್ನು ಅನುಸರಿಸಿ ಮನೆ ನಿರ್ಮಿಸುವುದು ಉತ್ತಮ ಮಾರ್ಗ ಎಂದು ವಾಸ್ತು ತಜ್ಞ ಅಪ್ಪಣ್ಣ ಸರ್‌ದೇಶಪಾಂಡೆ ತಿಳಿಸಿದರು.

ಮಲ್ಲೇಶ್ವರದ ಜಲಮಂಡಲಿ ಸುವರ್ಣ ಭವನದಲ್ಲಿ ತಮ್ಮ 'ಆರ್ಕಿಟೆಕ್ಚರ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸೂರ್ಯನ ಕಿರಣಗಳಲ್ಲಿರುವ ಪ್ರತಿ ಬಣ್ಣವೂ ತನ್ನದೇ ಆದ ಗುಣಲಕ್ಷಣ ಹೊಂದಿದ್ದು, ಪರಿಣಾಮವನ್ನು ಬೀರುತ್ತವೆ. ಆದ್ದರಿಂದ, ಅಡುಗೆ ಮನೆ, ಮಲಗುವ ಕೋಣೆ, ವ್ಯಾಸಂಗ ಮತ್ತು ಧ್ಯಾನ ಮಾಡುವ ಕೊಠಡಿಗೆ ಬಣ್ಣವನ್ನು ವೈಜ್ಞಾನಿಕವಾಗಿ ಅರಿಯುವುದು ವಾಸ್ತುವಾಗಿದೆ' ಎಂದು ಹೇಳಿದರು.

ಆರ್ಕಿಟೆಕ್ಚರ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ವಾಸ್ತು ತಜ್ಞ ಅಪ್ಪಣ್ಣ ಸರ್‌ದೇಶಪಾಂಡೆ, ಜಲಮಂಡಲಿ ಎಂಜಿನಿಯರ್ ಸುರೇಶ್, 'ವಿಜಯವಾಣಿ' ಸಂಪಾದಕ ಕೆ.ಎನ್.ಚನ್ನೇಗೌಡ, ಬಿ.ಆರ್.ಮೋಹನ್ ಹಾಜರಿದ್ದರು

ಜಲಮಂಡಲಿ ಎಂಜಿನಿಯರ್ ಸುರೇಶ್ ಮಾತನಾಡಿ, ಕಟ್ಟಡಗಳನ್ನು ನಿರ್ಮಿಸುವ ವೇಳೆ ನೈಸರ್ಗಿಕ ಸಂಪನ್ಮೂಲಗಳು ಎಷ್ಟು ಮುಖ್ಯ ಎಂಬುದನ್ನು ಅಪ್ಪಣ್ಣ ಅರಿತಿದ್ದಾರೆ. ಸೂರ್ಯನ ಬೆಳಕು, ಮಳೆ ನೀರು ಬಳಕೆ ಮಾಡಿಕೊಳ್ಳಲು ಆದ್ಯತೆ ನೀಡುತ್ತಾರೆ. ಸುವರ್ಣ ಭವನ ನಿರ್ಮಿಸುವ ವೇಳೆ ವಾಸ್ತು ಎಷ್ಟು ಮುಖ್ಯ ಎಂಬುದನ್ನು ತೋರಿಸಿದ್ದಾರೆ ಎಂದರು.

'ವಿಜಯವಾಣಿ' ಸಂಪಾದಕ ಕೆ.ಎನ್.ಚನ್ನೇಗೌಡ, ವಾಸ್ತು ತಜ್ಞ ಬಿ.ಆರ್.ಮೋಹನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಹಾಯಕರ ನೇಮಕ: ನಿರಾಕರಣೆ

ಬೆಂಗಳೂರು: ಕನ್ನಡ ಬಾವುಟ ರೂಪಿಸಿದ ಎಂ.ರಾಮಮೂರ್ತಿ ಅವರ ಪತ್ನಿ ಕಮಲಮ್ಮ ಅವರು ರಾಮಕೃಷ್ಣಾಶ್ರಮದ ಶಾರದಾ ಕುಟೀರದಲ್ಲಿ ಆಶ್ರಯ ಪಡೆದಿದ್ದು, ವಯಸ್ಸಾದ ಕಾರಣಕ್ಕೆ ಅವರು ಓಡಾಡುವ ಸ್ಥಿತಿಯಲ್ಲಿ ಇಲ್ಲ. ಅವರಿಗೆ ಸಹಾಯಕರನ್ನು ನೇಮಿಸುವಂತೆ ಕನ್ನಡ ಗೆಳೆಯರ ಬಳಗ ಮಾಡಿದ್ದ ಮನವಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿರಸ್ಕರಿಸಿದೆ.

ರಾಮಮೂರ್ತಿ ಅವರು ಹೊಲದಲ್ಲಿ ಕೊಳವೆಬಾವಿ ತೋಡಿಸುತ್ತಿದ್ದ ವೇಳೆ ಭೂಕುಸಿತದಿಂದ ಇಬ್ಬರು ಮಕ್ಕಳ ಜತೆಗೆ ಮರಣ ಹೊಂದಿದ್ದರು. ಈ ದುರಂತ ನಡೆದು 50 ವರ್ಷ ಕಳೆದಿದೆ. ಕನ್ನಡ ಹೋರಾಟಗಾರ ರಾಮಮೂರ್ತಿ ಅವರ ಪತ್ನಿ ಕಮಲಮ್ಮ ಅನಾಥರಾಗಿದ್ದಾರೆ. ನೂರು ವರ್ಷದ ಆಸುಪಾಸಿನ ವಯಸ್ಸಿನ ಅವರು ಕುಟೀರದ ಸಣ್ಣ ಕೊಠಡಿಯಲ್ಲಿ ನೆಲೆಸಿದ್ದಾರೆ. ಅವರಿಗೆ ಸಹಾಯಕರ ಅಗತ್ಯವಿದ್ದು, ಇಲಾಖೆಗೆ ಮನವಿ ಸಲ್ಲಿಸಿದರೆ ನಿರಾಕರಿಸಲಾಗಿದೆ ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ್ ದೂರಿದ್ದಾರೆ.

ಕಡತ ರವಾನೆ

'ವಿಶೇಷ ಪ್ರಕರಣವೆಂದು ಪರಿಗಣಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಸೂಚಿಸಿದ್ದಾರೆ. ಸಚಿವರಿಗೆ ಕಡತ ರವಾನಿಸಲಾಗಿದೆ. ಸಹಾಯಕರನ್ನು ನೇಮಿಸಲು ಇಲಾಖೆ ನಿಯಮದನ್ವಯ ಅವಕಾಶ ಇರಲಿಲ್ಲ. ಸಚಿವರು ನೀಡುವ ಸೂಚನೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತ್‌ರಾವ್ ಪಾಟೀಲ್ ತಿಳಿಸಿದರು.

ನಗರದಲ್ಲಿ ಇಂದು

'ಸರ್ವರಿಗೂ ಉದ್ಯೋಗ' ಉದ್ಯೋಗ ಮೇಳ: ಉದ್ಘಾಟನೆ: ವೈ. ರಾಜಾರೆಡ್ಡಿ, ಅತಿಥಿಗಳು: ಅಶ್ವಿನ್.ಡಿ. ಗೌಡ, ಉಪಸ್ಥಿತಿ: ಡಿ.ಎಲ್. ಕೃಷ್ಣಮೂರ್ತಿ, ಆಯೋಜನೆ: ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಸ್ಥಳ: ಆರ್.ಆರ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಬಾಣಾವರ, ಬೆಳಿಗ್ಗೆ 9

'ಗ್ರಾಹಕ ಸಂರಕ್ಷಣಾ ಕಾಯ್ದೆ- 2019' ಕುರಿತು ಸಂವಾದ: ಅತಿಥಿಗಳು: ಕನಗವಲ್ಲಿ, ಬಿ.ಕೆ. ಗಣೇಶ, ಅಶೋಕ್ ಪಾಟೀಲ್, ವೈ.ಜಿ. ಮುರಳೀಧರನ್, ಉಪಸ್ಥಿತಿ: ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ್ ಪೈ, ಅವಿರಾಮ್ ಶರ್ಮ, ರವಿ ವೆಂಕಟೇಶಂ, ಆಯೋಜನೆ, ಸ್ಥಳ: ಬಿಎಂಎಸ್ ಕಾನೂನು ಕಾಲೇಜು, ಬಸವನಗುಡಿ, ಬೆಳಿಗ್ಗೆ 10

ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ಋಷಿಕೇಶ.ಟಿ. ಕೃಷ್ಣನ್, ಶೇಷ್ ರಾವ್ ಪಪ್ಲಿಕರ್, ಅಧ್ಯಕ್ಷತೆ: ಪಿ.ಎನ್. ಪ್ರವೀಣ್, ಆಯೋಜನೆ ಮತ್ತು ಸ್ಥಳ: ಆರ್. ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಳಿಗ್ಗೆ 10

ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ನಾಗೇಶ್, ಅಧ್ಯಕ್ಷತೆ: ನರಸಿಂಹ ಮೂರ್ತಿ, ಅತಿಥಿಗಳು: ಆರ್. ಚಂದ್ರಶೇಖರ್, ಗಿರೀಶ್ ಲಕ್ಕಣ್ಣ, ಲಕ್ಷ್ಮಣಪ್ಪ, ಸೀತಾರಾಮ್, ಆಯೋಜನೆ: ಕಲಾರಂಗ ಲೋಕ, ಸ್ಥಳ: ದೇವಯ್ಯ ರಂಗಮಂದಿರ, ದೇವಯ್ಯ ಪಾರ್ಕ್, ಗಾಯತ್ರಿನಗರ, ಸಂಜೆ 5

'ಶಿವಸಂಚಾರ' ನಾಟಕ ಪ್ರದರ್ಶನ: ಉದ್ಘಾಟನೆ: ಶಾಂತಕುಮಾರಿ, ಅಧ್ಯಕ್ಷತೆ: ಮಾಲತಿ ಸುಧೀರ್, ಅತಿಥಿಗಳು: ಪ್ರತಿಭಾ ನಾರಾಯಣ್, ಸಿ.ವಿ. ನಾಗರಾಜ್, ಪಿ.ಬಿ. ಮಿತ್ರ, ಕುಮಾರ್ ಕೆ.ಎಚ್., ಆಯೋಜನೆ: ಚಿಂತನ ರಂಗಕಲಾವಿದರ ಬಳಗ, ಸ್ಥಳ: ಅಮ್ಮೆಂಬಳ್ ಸುಬ್ಬರಾವ್ ಪೈ ಸ್ಮಾರಕ ಕಲಾ ಭವನ, ಕೆನರಾ ಬ್ಯಾಂಕ್ ಕಾಲೊನಿ, ಚಂದ್ರಾ ಬಡಾವಣೆ, ಸಂಜೆ 6

ಸಂಗೀತ ಕಾರ್ಯಕ್ರಮ: ಗಾಯನ: ಬೆಂಗಳೂರು ಬ್ರದರ್ಸ್, ಹರಿಹರನ್ ಮತ್ತು ಅಶೋಕ್, ಆಯೋಜನೆ: ಲಂಡನ್ ಇಂಟರ್‌ನ್ಯಾಷನಲ್ ಆರ್ಟ್ಸ್ ಫೆಸ್ಟಿವಲ್, ರಾತ್ರಿ 8 (ಆನ್‌ಲೈನ್ ಕಾರ್ಯಕ್ರಮ).

ದಾಸರು ಹರಿದಾಸರು: ಅತಿಥಿಗಳು: ಅನೂರು ಅನಂತ ಕೃಷ್ಣ ಶರ್ಮ, ಪುತ್ತೂರು ನರಸಿಂಹ ನಾಯಕ್, ಆರ್.ಚಂದ್ರಶೇಖರ್, ದಾಸರ ಪದ ಗಾಯನ: ರಾಜೀವ್ ಅಗಳಿ ಮತ್ತು ತಂಡ, ಕಲ್ಪನಾ ನಾಯಕ್, ಹಿತ ಸಿ.ಎಸ್., ಸುಧಾ ಗಡಿಯಾರ್, ಶೋತ್ರಸ್ವಿನಿ ದಬೀರ್, ಸಂಜನಾ ಎಚ್., ಯಶಸ್ವಿನಿ, ಹಾರ್ಮೋನಿಯಂ: ಅನೂರ್ ಪ್ರಬೋಧ್ ಶ್ಯಾಮ್, ತಬಲಾ: ಪುಟ್ಟರಾಜು ಗೋನಹಳು, ತಾಳ: ಬಸಂತ್.ಜಿ. ಪ್ರಸಾದ್, ಬೆಳಕು: ಶಿವರಾಜ್ ಎಸ್., ಆಯೋಜನೆ: ಸವಿಗಾನ, ಸ್ಥಳ: ಅವ್ವಾ ಸಭಾಂಗಣ, ಬನಶಂಕರಿ 3ನೇ ಹಂತ, ಸಂಜೆ 5.30

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Farm House/ Land/ Resorts

Kanakapura Road

KANAKAPURA TOWN 1 Acre and 2 Acre with Water & Electricity Suitable for any Purpose Call Ravikumar: 9945928994.

JOB OPPORTUNITIES

Multiple Vacancy

REQUIRED, TEAMLEADER, Telecaller & Field_Executive For Bank Loan collection. Direct recruitment to company. 9620206756, 9620200756.

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PUBLIC NOTICE

PUBLIC NOTICE

Notice is hereby given to the general public that my client is negotiating to purchase all that immovable property described in the Schedule hereunder from its present owners (1) Mrs. Rukmini alias Rukmanamma, wife of late Mr. S. T. Ramaswamy Reddy (2) Mr. S. R. Bhaskar Reddy, and (3) Mr. S. R. Gunasheela Reddy, S. Nos.(2) and (3) are sons of late Mr. S. T. Ramaswamy Reddy, all are presently residing at No.13, Old No.174/A, 13th Cross, Sarakki Main Road, J. P. Nagar 1st Phase,Bangalore-560 078, who are representing that they are the absolute joint owners of the Schedule property and other than themselves no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/their/objection/s with relevant documentary proof to the undersigned at the address given below within EIGHT DAYS from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property being residentially converted undeveloped land measuring an extent of 2 acres 22 ½ guntas, in survey No.167/5, (Old survey No.167/1, portion of earlier survey No.167) and measuring an extent of 1 acre 1 ½ guntas in survey No.167/3, (Old survey No.167/1, portion of earlier survey No.167) in all measuring a total extent of 3 acres 24 guntas,(converted 1-39 ½ acres for residential use and land measuring an extent of 1-24 acres of commercial use (shops) by the Deputy Commissioner, Kolar District), approved by the Malur Town Planning Authority, Malur for residential and commercial use, situated at Chokkondahalli Village, Kasaba Hobli, Malur Taluk, Kolar District, presently coming under Madivala Village Panchayat Katha No.536/385, Property ID No.151900802401020076, measuring a total extent of 11670.93 square meters, excluding the amenities, in all measuring a total extent of 3 acres 24 guntas and bounded on the :

East by : Land belongs to Mr. Vishwanath bearing survey No.167/1; **West by** : Irabanahalli Road;
North by : Survey No.168 and 177 belongs to M/s. Ganesh Brick Works; and **South by** : Malur – Hosakote Road;

Bangalore
Dated : 26.12.2022.

A. NAGARAJA, Advocate,
No. 6, KHB Buildings, II Block, 13th Cross, Indiranagar II Stage, Bangalore - 560 038. Ph:9448067511

PERSONAL

Change of Name

I,SUBBANNA K.N s/o Late.Nagappagowda aged 59 years residing at No.12, 1st Cross, Shrishyalanagar, Pattegarapalya, Bengaluru-560079 has been Changed The Name to Subramanya K.N s/o.Late.Nagaraja as per the affidavit No.544,Dated 23.12.2022 in Bengaluru.Advocate: Sri.Ramalingaiah N. Mobile:93437 38678

SURENDER KUMAR, JC681931Y, SUB, Vill-Chamkha, , Morni Hills, Panchkula, Haryana changed Son's name MAITRIK to MAITRIK KAUSHIK, 26/12/2022 Notary K.V. Mani Bangalore

6502921M SEP Bablu Oraon 2ATC, daughter name Record's ANANYA instead of ANANYA ORAON notary B.M. Chandrashekar.

SMT BIDHYA VATI, Mother/o, JC681931Y, SUB, SURENDER KUMAR, Vill – Chamkha, Morni Hills, Panchkula, Haryana changed name SMT BIDHYA VATI to VIDYA WATI 26/12/2022 Notary K.V. Mani Bangalore

CHANGE OF NAME
I, **SUNANDA IMMANAGOUDRA** Residing at Banashankari 2nd stage, Bangalore-70. Declare that in some documents my names are **SUNANDA IMMANAGOUDRA AND SUNANDA GOUDAPPA SATTIGERI**. All the names **SUNANDA IMMANAGOUDRA AND SUNANDA GOUDAPPA SATTIGERI** belongs to me only. In future I will be continue with **SUNANDA IMMANAGOUDRA,** vide affidavit dated 21/12/2022, before notary G Dayananda, Bangalore.

I,MEHUL RATILAL SHAH R/a,#124,1st Floor,5th Main,3rd`Stage, 3rd`Block, Basaveshwara Nagar, Bangalore- 560079.Have Changed`My Minor Daughter's Name`From TANISHKA MEHUL SHAH`to TANISHKAA SHAH`vide Affidavit`Dated 26-12-2022 Before`Notary Shreeshail.B Gobbani, Bengaluru

CHANGE OF NAME
I, **YESHAWANTH NAGARAJU** Residing at #284, Near Anjaneya Swamy Temple, Begur, Bengaluru-560068, have changed my name to **YESHWANTH. N** vide affidavit dated 26/12/2022, before notary Gangaraju.B.N. Bangalore. Henceforth I shall be called **YESHWANTH. N** only.

ಪೂರ್ಣ ಪ್ರಮಾಣದ ಕಾರ್ಯಾಚರಣೆಗೆ ಬೇಕು ಇನ್ನೂ ಆರು ತಿಂಗಳು

ವೈಟ್‌ಫೀಲ್ಡ್ ಮೆಟ್ರೊಗೆ 'ಗರ್ಡರ್' ಸವಾಲು

ವೈಟ್‌ಫೀಲ್ಡ್‌ನಲ್ಲಿ ನಿರ್ಮಾಣವಾಗಿರುವ ಮೆಟ್ರೊ ರೈಲು ಡಿಪೊನಿಂದ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಗಳ ನೋಟ
—ಪ್ರಜಾವಾಣಿ ಚಿತ್ರಗಳು/ರಂಜು ಪಿ.

• ವಿಜಯಕುಮಾರ್ ಎಸ್.ಕೆ.

ನಮ್ಮ ಮೆಟ್ರೊ — ಮುಂದೇನು? 1

ಬೆಂಗಳೂರು: ವೈಟ್‌ಫೀಲ್ಡ್ ಸಂಪರ್ಕಿಸುವ ಬಹುನಿರೀಕ್ಷಿತ ಮೆಟ್ರೊ ರೈಲು ಮಾರ್ಗದ ಕಾಮಗಾರಿಗೆ ಬೆನ್ನಿಗಾನಹಳ್ಳಿ ಬಳಿ ರೈಲ್ವೆ ಮಾರ್ಗದ ಮೇಲೆ ಕಬ್ಬಿಣದ ಸೇತುವೆ (ವೆಬ್ ಗರ್ಡರ್) ನಿರ್ಮಾಣ ಸವಾಲಾಗಿ ಪರಿಣಮಿಸಿದ್ದು, ಈ ಮಾರ್ಗದಲ್ಲಿ ಪೂರ್ಣ ಪ್ರಮಾಣದಲ್ಲಿ ಮೆಟ್ರೊ ರೈಲುಗಳ ಕಾರ್ಯಾಚರಣೆಗೆ ಇನ್ನೂ ಕನಿಷ್ಠ ಆರು ತಿಂಗಳು ಕಾಯಬೇಕಿದೆ.

ಎಲ್ಲವೂ ಅಂದುಕೊಂಡಂತೆಯೇ ಆಗಿದ್ದರೆ 2020ರಲ್ಲೇ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ದೊರಕಬೇಕಿತ್ತು. ಕೋವಿಡ್ ಕಾರಣದಿಂದ ಕಾಮಗಾರಿ ವಿಳಂಬವಾಗಿದ್ದರಿಂದ ಕಾಮಗಾರಿ ಪೂರ್ಣಗೊಳಿಸುವ ದಿನಾಂಕವನ್ನು 2021ರ ಆಗಸ್ಟ್‌ಗೆ ವಿಸ್ತರಿಸಲಾಗಿತ್ತು. ಬಳಿಕ 2022ರ ಜೂನ್‌ಗೆ ವಿಸ್ತರಿಸಲಾಯಿತು. ಅದು ಕೂಡ ಸಾಧ್ಯವಾಗದೆ, 2022ರ ಡಿಸೆಂಬರ್‌ಗೆ ಗಡುವು ನೀಡಲಾಗಿತ್ತು.

ಈ ಎಲ್ಲಾ ಗಡುವುಗಳೂ ಮುಕ್ತಾಯವಾಗಿದ್ದು, ಈಗ ಎರಡು ಹಂತದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ವೈಟ್‌ಫೀಲ್ಡ್‌ನಿಂದ ಗರುಡಾಚಾರ್ ಪಾಳ್ಯದ ತನಕ ಪರೀಕ್ಷಾರ್ಥ ಸಂಚಾರವನ್ನೂ ಬಿಎಂಆರ್‌ಸಿಎಲ್ ಆರಂಭಿಸಿದೆ.

ಬೆನ್ನಿಗಾನಹಳ್ಳಿ ಬಳಿ ರೈಲು ಮಾರ್ಗ ಮತ್ತು ಹೆಬ್ಬಾಳ ಕಡೆಗೆ ಸಾಗುವ ರಸ್ತೆ ಮೇಲ್ಸೇತುವೆಯ ಮೇಲ್ಭಾಗದಲ್ಲಿ 17 ಮೀಟರ್ ಎತ್ತರದಲ್ಲಿ (ನೆಲದಿಂದ) 'ವೆಬ್ ಗರ್ಡರ್' ಅಳವಡಿಸಿ ಮೆಟ್ರೊ ರೈಲಿಗೆ ಮಾರ್ಗ ನಿರ್ಮಾಣ ಮಾಡಬೇಕಿದೆ. ಈ ಕಾಮಗಾರಿ ಬಿಎಂಆರ್‌ಸಿಎಲ್‌ಗೆ ಸವಾಲಾಗಿದೆ. ಕಳೆದ ಶುಕ್ರವಾರ ಪ್ರಾರಂಭಿಸಲು ಉದ್ದೇಶಿಸಿದ್ದ ಕಾಮಗಾರಿಯನ್ನು ಸಂಪೂರ್ಣ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಕಾರಣ ಮುಂದೂಡಲಾಗಿದೆ.

ಸುರಕ್ಷತೆ ದೃಷ್ಟಿಯಿಂದ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದೆ. ಅದಕ್ಕೆ ಅನುಮತಿಯನ್ನೂ ನೈರುತ್ಯ ರೈಲ್ವೆಯಿಂದ ಪಡೆದುಕೊಳ್ಳಲಾಗಿತ್ತು. ಆದರೂ, ಪೂರ್ವ ಸಿದ್ಧತೆಗಳು ಪರಿಪೂರ್ಣವಾಗದ ಕಾರಣ ಕಾಮಗಾರಿ ಮುಂದೂಡಲಾಗಿದೆ. ವೆಬ್ ಗರ್ಡರ್ ಅಳವಡಿಕೆಯಾದರೆ ಉಳಿದ ಕಾಮಗಾರಿಗಳು ಚುರುಕಾಗಿ ನಡೆಯಲಿದೆ. ಒಮ್ಮೆ ಸಿವಿಲ್ ಕಾಮಗಾರಿ ಪೂರ್ಣಗೊಂಡರೆ, ಹಳಿ ಜೋಡಣೆ ಕಾಮಗಾರಿ ವೇಗವಾಗಿ ನಡೆಯಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಒಟ್ಟಾರೆ, ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಲೆಕ್ಕಾಚಾರ.



ಬೆನ್ನಿಗಾನಹಳ್ಳಿ ಬಳಿ ಕಬ್ಬಿಣದ ಗರ್ಡರ್‌ಗಳನ್ನು ಅಳವಡಿಕೆ ಮಾಡುತ್ತಿರುವುದು

ಮಾರ್ಚ್‌ನಲ್ಲಿ ಮೊದಲ ಹಂತ

ವೈಟ್‌ಫೀಲ್ಡ್‌ನಿಂದ ಕೆ.ಆರ್.ಪುರ ತನಕ ಈಗಾಗಲೇ ಪರೀಕ್ಷಾರ್ಥ ಸಂಚಾರ ಆರಂಭಿಸಲಾಗಿದ್ದು, ಈ ಎರಡು ನಿಲ್ದಾಣಗಳ ನಡುವೆ ಮಾರ್ಚ್‌ನಲ್ಲಿ ಮೆಟ್ರೊ ರೈಲು ಕಾರ್ಯಾಚರಣೆ ಆರಂಭಿಸಲು ಬಿಎಂಆರ್‌ಸಿಎಲ್ ಸಿದ್ಧತೆ ಮಾಡಿಕೊಂಡಿದೆ.

ನಿಲ್ದಾಣಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡರೆ ರೈಲ್ವೆ ಸುರಕ್ಷತಾ ಆಯುಕ್ತರ ಮೂಲಕ ಸುರಕ್ಷತೆ ಪರಿಶೀಲನೆ ನಡೆಸಲಾಗುತ್ತದೆ. ವೈಟ್‌ಫೀಲ್ಡ್‌ನಲ್ಲಿ ಮೆಟ್ರೊ ರೈಲು ಡಿಪೊ ನಿರ್ಮಾಣವಾಗಿದ್ದು, ಅಲ್ಲಿಂದ ರೈಲುಗಳು ಕೆ.ಆರ್.ಪುರದ ತನಕ ಬಂದು ವಾಪಸ್ ಹೋಗಲಿವೆ. ಕೆ.ಆರ್.ಪುರದಿಂದ ಬೈಯಪ್ಪನಹಳ್ಳಿಗೆ ಬಿಎಂಟಿಸಿ ಬಸ್‌ಗಳನ್ನು ಫೀಡರ್ ಸೇವೆಗೆ ನಿಯೋಜಿಸಿಕೊಳ್ಳಲು ಮೆಟ್ರೊ ಅಧಿಕಾರಿಗಳು ಆಲೋಚಿಸಿದ್ದಾರೆ. ಯಾವುದೇ ಅಡೆ–ತಡೆ ಎದುರಾಗದಿದ್ದರೆ ಮುಂದಿನ ಎರಡು ತಿಂಗಳಲ್ಲಿ ಕೆ.ಆರ್.ಪುರದಿಂದ ಬೈಯಪ್ಪನಹಳ್ಳಿ ಸಂಪರ್ಕ ಕಲ್ಪಿಸುವ ಮಾರ್ಗದ ಬಾಕಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

13 ಮೆಟ್ರೊ ನಿಲ್ದಾಣ

- ಬೆನ್ನಿಗಾನಹಳ್ಳಿ
- ಕೆ.ಆರ್.ಪುರಂ
- ಮಹದೇವಪುರ
- ಗರುಡಾಚಾರ್‌ಪಾಳ್ಯ
- ಹೂಡಿ ಜಂಕ್ಷನ್
- ಸೀತಾರಾಮಪಾಳ್ಯ
- ಕುಂದಲಹಳ್ಳಿ
- ನಲ್ಲೂರುಹಳ್ಳಿ
- ಶ್ರೀಸತ್ಯಸಾಯಿ ಆಸ್ಪತ್ರೆ
- ಪಟ್ಟಂದೂರು ಅಗ್ರಹಾರ
- ಕಾಡುಗೋಡಿ
- ಚನ್ನಸಂದ್ರ
- ವೈಟ್‌ಫೀಲ್ಡ್

ನಿಲ್ದಾಣ ಕಾಮಗಾರಿ ಬಾಕಿ

ವೈಟ್‌ಫೀಲ್ಡ್‌ನಿಂದ ಗರುಡಾಚಾರ್ ಪಾಳ್ಯದ ತನಕ ಪರೀಕ್ಷಾರ್ಥ ಸಂಚಾರ ಯಶಸ್ವಿಯಾಗಿದ್ದರೂ, ನಿಲ್ದಾಣ ನಿರ್ಮಾಣ ಕಾಮಗಾರಿ ಬಾಕಿ ಇದೆ. ವೈಟ್‌ಫೀಲ್ಡ್ ಡಿಪೊ ನಿರ್ಮಾಣ ಕಾಮಗಾರಿಯೂ ಭರದಿಂದ ಸಾಗಿದ್ದು, ಈ ಮಾರ್ಗದ ಎಲ್ಲಾ ನಿಲ್ದಾಣಗಳಲ್ಲೂ ಕಾಮಗಾರಿ ನಡೆಯುತ್ತಿದೆ. ನಿಲ್ದಾಣಗಳ ಸದ್ಯದ ಸ್ಥಿತಿ ನೋಡಿದರೆ ಸಿವಿಲ್ ಕಾಮಗಾರಿ ಪೂರ್ಣಗೊಳ್ಳಲು ಸಾಕಷ್ಟು ಸಮಯ ಬೇಕಾಗಲಿದೆ ಎನ್ನುತ್ತಾರೆ ಸ್ಥಳೀಯರು.

ಎಲ್ಲವೂ ನೇರಳೆ

ವೈಟ್‌ಫೀಲ್ಡ್ ಮಾರ್ಗದ ವಿಶೇಷ ಎಂದರೆ ಮೆಟ್ರೊ ರೈಲು ಮಾರ್ಗದ ಕಂಬಗಳಿಗೂ ಬಣ್ಣ ಬಳಿಯಲಾಗುತ್ತಿದೆ. ವೈಟ್‌ಫೀಲ್ಡ್ ಮತ್ತು ಕಾಡುಗೋಡಿ ಭಾಗದಲ್ಲಿ ಈಗಾಗಲೇ ಮೆಟ್ರೊ ಕಂಬಗಳಿಗೆ ಬಣ್ಣ ಬಳಿಯಲಾಗಿದ್ದು, ಕಂಬಗಳು ಬಗೆ ಬಗೆಯ ಚಿತ್ತಾರಗಳಿಂದ ಮಿರುಗುತ್ತಿವೆ.

ವೈಟ್‌ಫೀಲ್ಡ್‌ನಲ್ಲಿರುವ ಐ.ಟಿ ಕಂಪನಿಗಳು ಸ್ವಯಂ ಪ್ರೇರಿತವಾಗಿ ಮುಂದೆ ಬಂದು ಮೆಟ್ರೊ ರೈಲು ಮಾರ್ಗದ ಮೆರಗು ಹೆಚ್ಚಿಸುವ ಕೆಲಸ ಮಾಡುತ್ತಿವೆ. ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಬಳಸಿಯೂ ಈ ಕಾರ್ಯವನ್ನು ಕಂಪನಿಗಳು ಮಾಡುತ್ತಿವೆ. ಈ ರೀತಿಯ ಕಾರ್ಯಕ್ಕೆ ಮುಂದೆ ಬರುವ ಕಂಪನಿಗಳಿಗೆ ಅನುಮತಿ ನೀಡಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

₹8.92 ಕೋಟಿ ಮೌಲ್ಯದ 12 ಐಷಾರಾಮಿ ಕಾರು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಮಾರಾಟ ಹಾಗೂ ಖರೀದಿ ಸೋಗಿನಲ್ಲಿ ಮಾಲೀಕರನ್ನು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ನಿವಾಸಿ ಸೈಯದ್ ಜಿಬ್ರಾನ್ (28) ಹಾಗೂ ಹೈದರಾಬಾದ್‌ನ ಪರ್ವತಮ್ ಹೇಮಚಂದ್ರ (42) ಬಂಧಿತರು. ಇವರಿಂದ ₹ 8.92 ಕೋಟಿ ಮೌಲ್ಯದ 12 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಏಜೆಂಟ್‌ನಾಗಿದ್ದ ಜಿಬ್ರಾನ್, ಔಡಿ, ಬೆನ್ಜ್, ರೇಂಜ್ ರೋವರ್, ಮಹೀಂದ್ರ ಥಾರ್ ಸೇರಿ ಹಲವು ಐಷಾರಾಮಿ ಕಾರುಗಳ ಮಾಲೀಕರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಉತ್ತಮ ಬೆಲೆಗೆ ಕಾರು ಮಾರಾಟ ಮಾಡಿಸುವುದಾಗಿ ಹೇಳಿ ಮುಂಗಡ ಹಣ ಕೊಡುತ್ತಿದ್ದ. ಮಾಲೀಕರ ನಂಬಿಕೆ ಗಳಿಸಿ ಕಾರು ತೆಗೆದುಕೊಂಡು ಹೋಗುತ್ತಿದ್ದ' ಎಂದು ಹೇಳಿದರು.

'ಹಲವು ದಿನವಾದರೂ ಆರೋಪಿ ಬಾಕಿ ಹಣ ನೀಡುತ್ತಿರಲಿಲ್ಲ. ಕಾರು ಸಹ ವಾಪಸು ಕೊಡುತ್ತಿರಲಿಲ್ಲ. ಜಿಬ್ರಾನ್ ಕದ್ದು ತರುತ್ತಿದ್ದ ಕಾರುಗಳನ್ನು ಹೇಮಚಂದ್ರ ಖರೀದಿಸಿ, ಬೇರೆಯವರೆಗೆ ಮಾರುತ್ತಿದ್ದ' ಎಂದು ತಿಳಿಸಿದರು.

ಉದ್ಯಮಿಗೆ ಜೀವ ಬೆದರಿಕೆ: 'ಚೆನ್ನೈನ ಎಸ್. ರಾಜ್ ಎಂಬುವವರನ್ನು ಪ್ರವೀಣ್‌ಕುಮಾರ್ ಎಂಬುವವರ ಮೂಲಕ ಆರೋಪಿ ಜಿಬ್ರಾನ್ ಪರಿಚಯ ಮಾಡಿಕೊಂಡಿದ್ದ. ರಾಜ್ ಮಾಲೀಕತ್ವದ ಸುಮಾರು ₹ 1.70 ಕೋಟಿ ಮೌಲ್ಯದ ರೇಂಜ್ ರೋವರ್ ಸ್ಪೋರ್ಟ್ಸ್ ಕಾರು ಮಾರಿಸುವುದಾಗಿ ಹೇಳಿದ್ದ. ಮುಂಗಡವಾಗಿ ₹ 18 ಲಕ್ಷ ಕೊಟ್ಟು, ಕಾರು ತೆಗೆದುಕೊಂಡು ಹೋಗಿದ್ದ' ಎಂದು ಪ್ರತಾಪ್ ರೆಡ್ಡಿ ಹೇಳಿದರು.

'ನಿಗದಿತ ದಿನದೊಳಗೆ ಆರೋಪಿ ಬಾಕಿ ಹಣ ನೀಡಿರಲಿಲ್ಲ. ಕಾರು ಸಹ ವಾಪಸು ಕೊಟ್ಟಿರಲಿಲ್ಲ. ಇದರಿಂದ ಬೇಸತ್ತ ರಾಜ್, ಕಾರು ವಾಪಸು ನೀಡುವಂತೆ ಆರೋಪಿಗೆ ಹೇಳಿದ್ದರು. ಕಾರು ನೀಡುವುದಿಲ್ಲವೆಂದು ಆರೋಪಿ ಜೀವ ಬೆದರಿಕೆಯೊಡ್ಡಿದ್ದ. ನೊಂದ ರಾಜ್, ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಅದರ ತನಿಖೆ ಕೈಗೊಂಡಾಗಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದು ತಿಳಿಸಿದರು.

'ತಮಿಳುನಾಡು, ಆಂಧ್ರಪ್ರದೇಶ, ಕೇರಳ, ತೆಲಂಗಾಣ, ಕರ್ನಾಟಕದ ಹಲವು ಕಾರು ಮಾಲೀಕರನ್ನು ಆರೋಪಿಗಳು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಮತ್ತಷ್ಟು ಆರೋಪಿಗಳನ್ನು ಬಂಧಿಸಲು ತನಿಖೆ ಮುಂದುವರಿಸಲಾಗಿದೆ' ಎಂದರು.

ಜಂಗಲ್ ಲಾಡ್ಜಸ್‌ಗೆ ₹ 9 ಲಕ್ಷ ವಂಚನೆ: ನೌಕರ ಬಂಧನ

ಬೆಂಗಳೂರು: ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಕೊಠಡಿ ಕಾಯ್ದಿರಿಸಲು ಗ್ರಾಹಕರು ನೀಡಿದ್ದ ₹ 9.50 ಲಕ್ಷವನ್ನು ಸ್ವಂತಕ್ಕೆ ಬಳಸಿಕೊಂಡು ವಂಚಿಸಿದ್ದ ಆರೋಪದಡಿ ಮನೋಹರ್ ರಾಜ್ ಎಂಬುವವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜನಗರದ ಮನೋಹರ್ ರಾಜ್, ನಗರದ ಟ್ರಾನ್ಸ್ಯಾಕ್ಟ್ ಬಿಪಿಓ ಸರ್ವೀಸ್ ಇಂಡಿಯಾ ಕಂಪನಿಯ ಮಾರುಕಟ್ಟೆ ವಿಭಾಗದಲ್ಲಿ ಟೀಮ್ ಲೀಡರ್ ಆಗಿ ಕೆಲಸ ಮಾಡುತ್ತಿದ್ದ. ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಆಡಳಿತ ಅಧಿಕಾರಿ ಎಂ.ಕೆ. ಲಿಂಗರಾಜ್ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಪೊಲೀಸರು ಹೇಳಿದರು.

'ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಆಡಳಿತ ಮಂಡಳಿ, ಗ್ರಾಹಕರ ಸಹಾಯವಾಣಿ ಸ್ಥಾಪಿಸುವ ಸಂಬಂಧ ಟ್ರಾನ್ಸ್ಯಾಕ್ಟ್ ಬಿಪಿಓ ಸರ್ವೀಸ್ ಇಂಡಿಯಾ ಕಂಪನಿ ಜೊತೆ ನಾಲ್ಕು ತಿಂಗಳ ಒಪ್ಪಂದ ಮಾಡಿಕೊಂಡಿತ್ತು. ಕೊಠಡಿ ಕಾಯ್ದಿರಿಸಲು ಕರೆ ಮಾಡುತ್ತಿದ್ದ ಗ್ರಾಹಕರ ಜೊತೆ ಕಂಪನಿ ಸಿಬ್ಬಂದಿ ಮಾತನಾಡುತ್ತಿದ್ದರು. ಮುಂಗಡ ಹಣ ಪಡೆದು ಕೊಠಡಿಗಳನ್ನು ಕಾಯ್ದಿರಿಸುತ್ತಿದ್ದರು. ಇದಕ್ಕಾಗಿ ಸಿಬ್ಬಂದಿಗೆ ಯೂಸರ್ ನೇಮ್, ಪಾಸ್‌ವರ್ಡ್ ನೀಡಲಾಗಿತ್ತು.'

'ಯೂಸರ್ ನೇಮ್, ಪಾಸ್‌ವರ್ಡ್ ದುರ್ಬಳಕೆ ಮಾಡಿಕೊಂಡಿದ್ದ ಮನೋಹರ್, ತನ್ನನ್ನು ಸಂಪರ್ಕಿಸುತ್ತಿದ್ದ ಗ್ರಾಹಕರ ಜೊತೆ ವ್ಯವಹಾರ ನಡೆಸಿದ್ದ. ತಾನೇ ರಿಯಾಯಿತಿ ಘೋಷಿಸಿ, 12 ಗ್ರಾಹಕರಿಂದ ₹ 9.50 ಲಕ್ಷ ಪಡೆದಿದ್ದ. ಈ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದ. ಇತ್ತೀಚೆಗೆ ದಾಖಲೆಗಳ ಪರಿಶೀಲನೆ ನಡೆಸಿದಾಗ ಅಕ್ರಮ ಪತ್ತೆಯಾಗಿತ್ತು' ಎಂದು ತಿಳಿಸಿದರು.

'ಒಪ್ಪಂದದ ಅವಧಿ ಮುಗಿದ ಬಳಿಕವೂ ಆರೋಪಿ ಕೊಠಡಿ ಕಾಯ್ದಿರಿಸಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಈತನ ಕೃತ್ಯದಲ್ಲಿ ಬೇರೆ ಯಾರೆಲ್ಲ ಭಾಗಿಯಾಗಿದ್ದಾರೆಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

₹ 1.50 ಲಕ್ಷ ದೋಚಿದ ವಂಚಕ

ಬೆಂಗಳೂರು: ಎಕ್ಸಿಸ್ ಬ್ಯಾಂಕ್ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿದ್ದ ವಂಚಕರು ಗ್ರಾಹಕರೊಬ್ಬರ ಖಾತೆಯಿಂದ ₹ 1.50 ಲಕ್ಷ ದೋಚಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಂಪೇಗೌಡ ನಗರದ 30 ವರ್ಷದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಅರ್ಮಿತ್ ಸಿಂಗ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಡಿ. 8ರಂದು ಕರೆ ಮಾಡಿದ್ದ ಆರೋಪಿ, 'ನಿಮ್ಮ ಕ್ರೆಡಿಟ್ ಕಾರ್ಡ್‌ಗೆ ರಿವಾರ್ಡ್ ಪಾಯಿಂಟ್ ಬಂದಿದೆ. ಇದನ್ನು ಹಣದ ರೂಪದಲ್ಲಿ ನಿಮ್ಮ ಖಾತೆಗೆ ಜಮೆ ಮಾಡ ಲಾಗುವುದು. ಜಾಲತಾಣದ ಮೂಲಕ ಕ್ರೆಡಿಟ್ ಕಾರ್ಡ್ ಸಂಖ್ಯೆ ಹಾಗೂ ಇತರೆ ಮಾಹಿತಿಯನ್ನು ಭರ್ತಿ ಮಾಡಿ' ಎಂದಿದ್ದ. ಜೊತೆಗೆ, ಲಿಂಕ್ ಕಳುಹಿಸಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ಲಿಂಕ್ ತೆರೆದು ಮಾಹಿತಿ ಭರ್ತಿ ಮಾಡಿದ್ದ. ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಸಹ ನಮೂದಿಸಿದ್ದ. ನಂತರ, ಖಾತೆಯಿಂದ ಹಂತ ಹಂತವಾಗಿ ₹ 1.50 ಲಕ್ಷ ಕಡಿತವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೋವಿಡ್ ಎದುರಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಉಲ್ಬಣವಾದರೆ ಎದುರಿಸಲು ಬೇಕಿರುವ ಸಿದ್ಧತೆಗಳನ್ನು ಬಿಬಿಎಂಪಿ ಆರಂಭಿಸಿದ್ದು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗಳ ಸಂಖ್ಯೆಯ ಮಾಹಿತಿ ಸಂಗ್ರಹಿಸುತ್ತಿದೆ.

'30 ಹಾಸಿಗೆಗೂ ಮೇಲ್ಪಟ್ಟ 419 ಆಸ್ಪತ್ರೆಗಳು ಬಿಬಿಎಂಪಿ ವ್ಯಾಪ್ತಿಯಲ್ಲಿ ಇವೆ. ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯತೆಯ ಹಾಸಿಗೆಗಳ ವಿವರ ಕಲೆಹಾಕುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಆಸ್ಪತ್ರೆಗಳಲ್ಲಿ ಆಮ್ಲಜನಕ ಪೂರೈಕೆ ಮತ್ತು ಆಮ್ಲಜನಕ ಘಟಕಗಳ ಸ್ಥಿತಿಗಳನ್ನೂ ಪರಿಶೀಲಿಸುತ್ತಿದ್ದೇವೆ. ಎಲ್ಲಾ ನಾಗರಿಕರು ಬೂಸ್ಟರ್ ಡೋಸ್ ಪಡೆಯುವುದು ಸೂಕ್ತ' ಎಂದರು.

'ಆರೋಗ್ಯ ಕಾರ್ಯಕರ್ತರು, 60 ವರ್ಷ ಮೇಲ್ಪಟ್ಟವರು ಸೇರಿ 14 ಲಕ್ಷ ಜನ ಲಸಿಕೆ ಪಡೆದಿದ್ದಾರೆ. ಅರ್ಹರಲ್ಲಿ 8 ಲಕ್ಷ ಜನ ಮಾತ್ರ ಬೂಸ್ಟರ್ ಡೋಸ್ ಪಡೆದಿದ್ದಾರೆ. ಇನ್ನೂ 6 ಲಕ್ಷ ಮಂದಿ ಬೂಸ್ಟರ್ ಡೋಸ್ ಪಡೆಯಬೇಕಿದೆ. ಕನಿಷ್ಠ ಒಂದು ಲಕ್ಷ ಡೋಸ್ ಕೋವಿಶೀಲ್ಡ್, 40 ಸಾವಿರ ಡೋಸ್ ಕಾರ್ಬೆವಾಕ್ಸ್ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ' ಎಂದರು.

ಮಂಗಳೂರು ಸ್ಫೋಟ: ವರ್ಷಾಚರಣೆಗೆ ಬಿಗಿ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನಲ್ಲಿ ಇತ್ತೀಚೆಗೆ ಸಂಭವಿಸಿದ್ದ ಸ್ಫೋಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸರು, ಹೊಸ ವರ್ಷಾಚರಣೆ ಯೆಂದು ಪ್ರತಿಯೊಂದು ಸ್ಥಳದಲ್ಲೂ ಹೆಚ್ಚಿನ ಭದ್ರತೆ ಕೈಗೊಳ್ಳಲು ಸಿದ್ಧತೆ ನಡೆಸಿದ್ದಾರೆ.

ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಎಂ.ಜಿ. ರಸ್ತೆ, ಇಂದಿರಾನಗರ, ಕೋರಮಂಗಲ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲಿ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ.

ಕೇಂದ್ರ ವಿಭಾಗದ ಪೊಲೀಸರು, ಈ ಪ್ರದೇಶಗಳಲ್ಲಿ ಭದ್ರತೆ ಬಿಗಿಗೊಳಿಸಲಿದ್ದಾರೆ. ಇದಕ್ಕೆ ಅಕ್ಕ–ಪಕ್ಕದ ವಿಭಾಗದ ಪೊಲೀಸರು ಹಾಗೂ ಮೀಸಲು ಪಡೆ ಸಿಬ್ಬಂದಿ ಸಹಕಾರ ನೀಡಲಿದ್ದಾರೆ.

ಭದ್ರತೆ ತಯಾರಿ ಬಗ್ಗೆ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, 'ಮಂಗಳೂರು ಬಾಂಬ್ ಸ್ಫೋಟ ಎಲ್ಲರ ಕಣ್ಮುಂದಿದೆ. ಹೊಸ ವರ್ಷಾಚರಣೆ ವೇಳೆ ಇಂಥ ಘಟನೆಗಳಿಗೆ ಆಸ್ಪದ ನೀಡದಂತೆ, ಎಚ್ಚರಿಕೆ ವಹಿಸುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ. ಬಂದೋಬಸ್ತ್ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಬಾರ್, ಪಬ್, ಹೋಟೆಲ್ ಪರಿಶೀಲನೆ: 'ಹೊಸ ವರ್ಷಾಚರಣೆ ವೇಳೆ ಭದ್ರತೆಗಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಬಾರ್, ಪಬ್, ಹೋಟೆಲ್‌ನವರಿಗೆ ಸೂಚನೆ ನೀಡಲಾಗಿದೆ. ಅವಧಿ ಮೀರಿ ವಾಣಿಜ್ಯ ಚಟುವಟಿಕೆ ನಡೆಸಿದರೆ, ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ' ಎಂದು ಕಮಿಷನರ್ ಅವರು ಹೇಳಿದರು.

'ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ಉತ್ತಮ ನಡತೆಯ ಸಿಬ್ಬಂದಿ ನೇಮಕ ಮಾಡಿಕೊಳ್ಳುವಂತೆ ಕೆಲ ನಿಯಮಗಳನ್ನು ರೂಪಿಸಲಾಗಿದೆ. ಪ್ರತಿಯೊಂದು ಬಾರ್, ಪಬ್, ಹೋಟೆಲ್‌ನಲ್ಲಿ ಈಗಾಗಲೇ ಪರಿಶೀಲನೆ ನಡೆಸಲಾಗುತ್ತಿದೆ. ನಿಯಮ ಮೀರಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ' ಎಂದರು.

ಸಿನಿಮೀಯ ರೀತಿಯಲ್ಲಿ ಕೃತ್ಯ: ಇಬ್ಬರು ಆರೋಪಿಗಳ ಬಂಧನ

ಮಸಾಜ್ ನೆಪ: ತೃತೀಯ ಲಿಂಗಿ ಪ್ರಜ್ಞೆ ತಪ್ಪಿಸಿ ಕಳ್ಳತನ

ಪ್ರಜಾವಾಣಿ ವಾರ್ತೆ

ಶಿವ

ಶಮೀರ್

ಅಪರಾಧ ಸುದ್ದಿ

ಬೆಂಗಳೂರು: ಮಸಾಜ್ ಮಾಡಿಸಿಕೊಳ್ಳುವ ನೆಪದಲ್ಲಿ ತೃತೀಯ ಲಿಂಗಿಯೊಬ್ಬರ ಮನೆಗೆ ಹೋಗಿ ಪ್ರಜ್ಞೆ ತಪ್ಪಿಸಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪುದುಚೇರಿಯ ಶಿವ ಅಲಿಯಾಸ್ ಜೇಮ್ಸ್ (33) ಹಾಗೂ ಈಜಿಪುರದ ಶಮೀರ್ (32) ಬಂಧಿತರು. ತೃತೀಯ ಲಿಂಗಿಯೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಿ, ಇವರಿಂದ ₹ 2 ಲಕ್ಷ ನಗದು ಹಾಗೂ 30 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ನೆಲೆಸಿರುವ ತೃತೀಯ ಲಿಂಗಿ, ಮಸಾಜ್ ಪಾರ್ಲರ್ ನಡೆಸುತ್ತಿದ್ದಾರೆ. ಆರೋಪಿ ಶಿವ, ಮಸಾಜ್ ಮಾಡಿಸುವುದಕ್ಕಾಗಿ ಪಾರ್ಲರ್‌ಗೆ ಆಗಾಗ ಹೋಗಿ ಬರುತ್ತಿದ್ದ. ಮಸಾಜ್ ಮಾಡಿಸುವುದಕ್ಕಾಗಿ ಆರೋಪಿ, ಸ್ನೇಹಿತರ ಬಳಿ ಸಾಲ ಸಹ ಮಾಡಿಕೊಂಡಿದ್ದ' ಎಂದು ತಿಳಿಸಿದರು.

₹ 20 ಲಕ್ಷ ಜಮೆ ಸಂದೇಶ ನೋಡಿ ಸಂಚು: 'ಆರೋಪಿ ಶಿವ ಇತ್ತೀಚೆಗೆ ತೃತೀಯ ಲಿಂಗಿ ಮನೆಗೆ ಹೋಗಿದ್ದ. ಮಸಾಜ್ ಸಂದರ್ಭದಲ್ಲಿ ತೃತೀಯ ಲಿಂಗಿ ಮೊಬೈಲ್ ಸಂದೇಶ ಬಂದಿತ್ತು. ₹ 20 ಲಕ್ಷ ಖಾತೆಗೆ ಜಮೆಯಾದ ಮಾಹಿತಿ ಸಂದೇಶದಲ್ಲಿತ್ತು. ಅದನ್ನು ನೋಡಿದ್ದ ಶಿವ, ತೃತೀಯ ಲಿಂಗಿ ಮನೆಯಲ್ಲಿ ಕಳ್ಳತನ ಮಾಡಲು ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ಮಸಾಜ್ ನಂತರ ಮನೆಯಿಂದ ಹೊರಬಂದಿದ್ದ ಶಿವ, ಸ್ನೇಹಿತ ಶಮೀರ್‌ಗೆ ಕರೆ ಮಾಡಿ ಕಳ್ಳತನದ ಸಂಚು ವಿವರಿಸಿದ್ದ. ಇಬ್ಬರೂ ಸೇರಿ ಕಳ್ಳತನ ಮಾಡಲು ಸಿದ್ಧವಾಗಿದ್ದರು' ಎಂದು ತಿಳಿಸಿದರು.

ಪ್ರಜ್ಞೆ ತಪ್ಪಿಸಿ ಕೃತ್ಯ: 'ಗ್ರಾಹಕನ ಸೋಗಿನಲ್ಲಿ ಶಮೀರ್ ಒಬ್ಬನೇ ತೃತೀಯ ಲಿಂಗಿ ಮನೆಗೆ ಹೋಗಿದ್ದ. ಮಸಾಜ್ ಮಾಡಿಸಿಕೊಂಡ ನಂತರ, ಉಡುಗೊರೆಯೆಂದು ಪಾನೀಯ ನೀಡಿದ್ದ. ಅದನ್ನು ಕುಡಿಯುತ್ತಿದ್ದಂತೆ ತೃತೀಯ ಲಿಂಗಿ, ಪ್ರಜ್ಞೆ ತಪ್ಪಿ ಬಿದ್ದಿದ್ದರು' ಎಂದು ಪೊಲೀಸರು ಹೇಳಿದರು.

'ಡೆಬಿಟ್ ಕಾರ್ಡ್‌ಗಳ ಮೇಲೆಯೇ ತೃತೀಯ ಲಿಂಗಿ, ಪಾಸ್‌ವರ್ಡ್‌ಗಳನ್ನು ಬರೆದಿದ್ದರು. ಆರೋಪಿ ಶಿವ, ಕಾರ್ಡ್‌ಗಳನ್ನು ತೆಗೆದುಕೊಂಡು ಎಟಿಎಂ ಘಟಕಕ್ಕೆ ಹೋಗಿ ಹಣ ಡ್ರಾ ಮಾಡಿದ್ದ. ಮನೆಯಲ್ಲೇ ಇದ್ದ ಶಮೀರ್, ತೃತೀಯ ಲಿಂಗಿ ಮೊಬೈಲ್‌ಗೆ ಬರುತ್ತಿದ್ದ ಸಂದೇಶಗಳನ್ನು ಅಳಿಸಿ ಹಾಕುತ್ತಿದ್ದ. ಇದೇ ರೀತಿಯಲ್ಲೇ ಆರೋಪಿಗಳು ಹಂತ ಹಂತವಾಗಿ ಲಕ್ಷಾಂತರ ರೂಪಾಯಿ ಡ್ರಾ ಮಾಡಿಕೊಂಡಿದ್ದರು' ಎಂದರು.

'ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಕದ್ದುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಕೆಲ ಹೊತ್ತಿನ ನಂತರ ಎಚ್ಚರಗೊಂಡಿದ್ದ ತೃತೀಯ ಲಿಂಗಿ, ಕಳ್ಳತನ ನಡೆದಿದ್ದನ್ನು ಗಮನಿಸಿ ಠಾಣೆಗೆ ದೂರು ನೀಡಿದ್ದರು. ಶಮೀರ್ ಮೇಲೆಯೇ ಅವರು ಅನುಮಾನ ವ್ಯಕ್ತಪಡಿಸಿದ್ದರು' ಎಂದರು

'ಹಣ, ಚಿನ್ನಾಭರಣ ಸಮೇತ ತಮಿಳುನಾಡಿಗೆ ಹೋಗಿದ್ದಆರೋಪಿಗಳು, ಮೋಜು ಮಸ್ತಿ ಮಾಡಿದ್ದರು' ಎಂದು ತಿಳಿಸಿದರು.

ಜಾಮೀನು ಮೇಲೆ ಹೊರಬಂದು ಕಳವು

ಬೆಂಗಳೂರು: ಜಾಮೀನು ಮೇಲೆ ಜೈಲಿನಿಂದ ಹೊರಬಂದು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿ ಸಂತೋಷ್ ಎಂಬುವವರನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

' 'ಸ್ಥಳೀಯ ನಿವಾಸಿ ಸಂತೋಷ್ (42), ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ. ಈತನಿಂದ ₹ 15 ಲಕ್ಷ ಮೌಲ್ಯದ 280 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದ ಮನೆಗಳನ್ನು ಗುರುತಿಸುತ್ತಿದ್ದ ಆರೋಪಿ, ರಾತ್ರಿ ಬಾಗಿಲು ಮೀಟಿ ಒಳಗೆ ನುಗ್ಗುತ್ತಿದ್ದ. ಪೊಲೀಸರಿಗೆ ಪುರಾವೆ ಸಿಗಬಾರದೆಂದು ಕೈಗವಸು ಧರಿಸಿ ಆಭರಣ ಹುಡುಕುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರು ಸೇರಿ ರಾಜ್ಯದ 18 ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿ ಕೃತ್ಯ ಎಸಗಿದ್ದ. ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದಿದ್ದ ಈತನಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಶಿಕ್ಷೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದ ಆರೋಪಿ, ಜಾಮೀನು ಮೇಲೆ ಹೊರಬಂದು ಹಳೇ ಚಾಳಿ ಮುಂದುವರಿಸಿದ್ದ. ಕದ್ದ ಆಭರಣಗಳನ್ನು ಅಡವಿಟ್ಟು ಹಣ ಸಂಪಾದಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂಪುಟ ವಿಸ್ತರಣೆ: ವರಿಷ್ಠರ ಜತೆ ಸಿ.ಎಂ ಚರ್ಚೆ

ಒಂದನೇ ಪುಟದಿಂದ...

ವರಿಷ್ಠರ ನಿರ್ಧಾರವನ್ನು ಯಾವಾಗ ನಿರೀಕ್ಷಿಸುತ್ತೀರಿ ಎಂಬ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, 'ಇದೇ ಮೊದಲ ಬಾರಿಗೆ ಸಂಪುಟ ವಿಸ್ತರಣೆ ಬಗ್ಗೆ ವಿವರವಾದ ಚರ್ಚೆ ನಡೆಸಿದ್ದೇವೆ. ವರಿಷ್ಠರು ಶೀಘ್ರ ನಿರ್ಧಾರ ಕೈಗೊಳ್ಳುವ ಭರವಸೆ ಇದೆ. ಈ ಬಗ್ಗೆ ನಾನು ಸಕಾರಾತ್ಮಕವಾಗಿದ್ದೇನೆ' ಎಂದು ಹೇಳಿದರು.

'ಖಾಲಿ ಇರುವ ಸಂಪುಟದ ಐದು ಸ್ಥಾನಗಳಿಗೆ ಹೆಚ್ಚಿನ ಆಕಾಂಕ್ಷಿಗಳಿದ್ದಾರೆ. ಹಾಗಾಗಿ, ಹೈಕಮಾಂಡ್ ಸಂಪುಟ ವಿಸ್ತರಣೆಗೆ ಅನುಮತಿ ನೀಡಲು ಒಲವು ತೋರುವ ಸಾಧ್ಯತೆ ಕಡಿಮೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ವಿಧಾನಸಭಾ ಚುನಾವಣೆಗೆ ಕೇವಲ 4 ತಿಂಗಳು ಬಾಕಿ ಇದ್ದು, ಸಂಪುಟ ವಿಸ್ತರಣೆ ಮೂಲಕ ಆಕಾಂಕ್ಷಿಗಳ ಬಂಡಾಯ ಎದುರಿಸಲು ಪಕ್ಷದ ನಾಯಕರು ಬಯಸುವುದಿಲ್ಲ' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

ಮೀಸಲಾತಿ ಕುರಿತು ಚರ್ಚೆ: ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆ ಕುರಿತು ಮುಖ್ಯಮಂತ್ರಿ ಅವರು ಪಕ್ಷದ ಮುಖಂಡರಿಗೆ ವಿವರಿಸಿದರು.

ಇದಕ್ಕೆ ಸ್ಪಂದಿಸಿದ ವರಿಷ್ಠರು, ಮೀಸಲಾತಿ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಸಹಜ ನ್ಯಾಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹೊಸ ಸಮುದಾಯಗಳನ್ನು ಸೇರಿಸುವ ಮೊದಲು ವಿವಿಧ ವರ್ಗಗಳಲ್ಲಿ ಅಸ್ತಿತ್ವದಲ್ಲಿರುವ ಸಮುದಾಯಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿರುವುದಾಗಿ ಬೊಮ್ಮಾಯಿ ಪ್ರತಿಕ್ರಿಯಿಸಿದರು.

ಸರ್ವಪಕ್ಷ ಸಭೆ: 'ಮೀಸಲಾತಿಗೆ ಸಂಬಂಧಿಸಿದಂತೆ ಶೀಘ್ರ ಸರ್ವಪಕ್ಷ ಸಭೆ ಬೆಂಗಳೂರಿನಲ್ಲಿ ನಡೆಸಲಾ ಗುವುದು. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಮಧ್ಯಂತರ ವರದಿಯ ಕುರಿತುಸಭೆಯಲ್ಲಿ ವಿವರವಾಗಿ ಚರ್ಚಿಸಲಾಗುವುದು. ತಜ್ಞರ ಅಭಿಪ್ರಾಯವನ್ನೂ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ತಿಳಿಸಿದರು.

ಜೋಡಿಗುಬ್ಬಿ ವಿಪ್ರವೃಂದದ ದಶಮಾನೋತ್ಸವ ಸಮಾರಂಭ

'ಮಕ್ಕಳ ಪ್ರತಿಭಾ ವಿಕಾಸಕ್ಕೆ ಪ್ರೋತ್ಸಾಹ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಗೀತ, ಕ್ರೀಡೆ, ಕುಶಲ ಕಲೆಗಳನ್ನು ಕಲಿಸುವ ಮೂಲಕ ಅವರಲ್ಲಿನ ಪ್ರತಿಭಾ ವಿಕಾಸಕ್ಕೆ ಪ್ರೋತ್ಸಾಹ ನೀಡಬೇಕು' ಎಂದು ಗಮಕ ವಿದ್ವಾಂಸೆ ನಿರ್ಮಲಾ ಪ್ರಸನ್ನ ಹೇಳಿದರು.

ನಗರದ ಶೇಷಾದ್ರಿ ರಸ್ತೆ ಬಬ್ಬೂರು ಕಮ್ಮೆ ಸಮುದಾಯ ಭವನದಲ್ಲಿ ಭಾನುವಾರ ನಡೆದ ಜೋಡಿಗುಬ್ಬಿ ವಿಪ್ರ ವೃಂದದ ದಶಮಾನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬದುಕಿನ ಒತ್ತಡಗಳಿಂದ ಹೊರ ಬರಲು ಹಾಗೂ ಅವರ ಪ್ರತಿಭೆಯನ್ನು ಹೊರಹೊಮ್ಮಿಸಲು ವಿವಿಧ ಚಟುವಟಿಕೆಗಳು ಸಹಾಯಕವಾಗಲಿದ್ದು, ಈ ಕುರಿತು ಪೋಷಕರು ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

'ನನ್ನೂರು ಹೊನ್ನೂರು' ಬಳಗದ ವಾರ್ಷಿಕ ಸ್ಮರಣ ಸಂಚಿಕೆಯನ್ನು ಡಾ ಶ್ಯಾಮಲಾ ಪ್ರಕಾಶ್ ದಂಪತಿ ಹಾಗೂ ಹೊಸ ವರ್ಷದ 'ದಿನ ದರ್ಶಿಕೆ'ಯನ್ನು ಗಾಯಿತ್ರಿ ಮೋಹನ್ ದಂಪತಿ ಬಿಡುಗಡೆ ಮಾಡಿದರು. ಎಸ್ಸೆಸ್ಸೆಲ್ಸಿ, ಪಿಯು ಹಾಗೂ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಜೋಡಿಗುಬ್ಬಿ ವಿಪ್ರ ವೃಂದದ ಅಧ್ಯಕ್ಷ ಜಿ.ಎನ್. ರಾಮಚಂದ್ರ ಮಾತನಾಡಿದರು. ಬಳಗದ ಸಂಸ್ಥಾಪಕ ಜಿ.ಎಚ್. ನರಸಿಂಹಯ್ಯ, ಉಪಾಧ್ಯಕ್ಷ ಎನ್. ಶ್ಯಾಮ್ ಸುಂದರ್, ಕಾರ್ಯದರ್ಶಿ ಜಿ.ವಿ. ವೆಂಕಟ ಸುಬ್ಬಯ್ಯ, ಸ್ಮರಣ ಸಂಚಿಕೆ ಸಂಪಾದಕ ಎ.ವಿ. ನಾಗೇಶ್ ಉಪಸ್ಥಿತರಿದ್ದರು. ಬಳಗದ ಸದಸ್ಯರಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು.

ಜೋಡಿಗುಬ್ಬಿ ವಿಪ್ರ ವೃಂದದ ದಶಮಾನೋತ್ಸವ ಸಮಾರಂಭದಲ್ಲಿ ವಾರ್ಷಿಕ ಸ್ಮರಣ ಸಂಚಿಕೆಯನ್ನು ಭಾನುವಾರ ಬಿಡುಗಡೆ ಮಾಡಲಾಯಿತು. ಗಾಯಿತ್ರಿ ಮೋಹನ್, ಜಿ.ಎನ್ ರಾಮಚಂದ್ರ, ಎ.ವಿ. ನಾಗೇಶ್, ಜಿ.ಎಚ್ ನರಸಿಂಹಯ್ಯ, ಎನ್. ಶ್ಯಾಮ್ ಸುಂದರ್, ಶ್ಯಾಮಲಾ ಪ್ರಕಾಶ್ ಇದ್ದರು.

'ಅಂಬೇಡ್ಕರ್ ನಿಗಮದಲ್ಲಿ ಅಕ್ರಮ: ಸತ್ಯಕ್ಕೆ ದೂರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ₹25 ಕೋಟಿ ಅಕ್ರಮ ನಡೆದಿದೆ ಎಂಬ ಆರೋಪ ಸತ್ಯಕ್ಕೆ ದೂರ' ಎಂದು ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್ ಪ್ರತಿಕ್ರಿಯೆ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮತನಾಡಿದ ಅವರು, '2020–21ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ 1,19,000ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಇದರಲ್ಲಿ ಸ್ವಯಂ ಉದ್ಯೋಗಕ್ಕಾಗಿ ನೇರ ಸಾಲ ಯೋಜನೆಯಡಿಯಲ್ಲಿ ಐದು ಸಾವಿರ ಫಲಾನುಭವಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ' ಎಂದರು.

ಡಿ. 22ರಂದು 'ಪ್ರಜಾವಾಣಿ ಪತ್ರಿಕೆಯಲ್ಲಿ 'ಅಂಬೇಡ್ಕರ್ ನಿಗಮ: ₹25 ಕೋಟಿ ಅಕ್ರಮ' ಎಂಬ ವರದಿ ಪ್ರಕಟವಾಗಿತ್ತು. ಅದರಲ್ಲಿ ಉಲ್ಲೇಖಿಸಲಾದ ಪ್ರಾಥಮಿಕ ತನಿಖೆಯ ಅಂಶಗಳಲ್ಲಿ ಹುರುಳಿಲ್ಲ ಎಂದು ಸುರೇಶ್ ಕುಮಾರ್ ಹೇಳಿದರು.

'ನಿಗಮದ 226ನೇ ನಿರ್ದೇಶಕರ ಮಂಡಳಿಯಲ್ಲಿ ಪ್ರಸ್ತಾಪಿಸಿ ಮಂಡಳಿಯ ನಿರ್ಣಯದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ನಿಗಮದ ಅಧ್ಯಕ್ಷರ ಸೂಚನೆಯ ಮೇರೆಗೆ ಮಂಜೂರಾತಿ ಆದೇಶಗಳನ್ನು ನೀಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಗೆ ಇದುವರೆಗೂ ₹14.16 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ' ಎಂದರು.

' ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್ ಕಳೆದ ಒಂದು ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ನಿಗಮದ ಆಡಳಿತ ಸುಧಾರಣೆ ಹಾಗೂ ಪಾರದರ್ಶಕತೆ ತರಲು ಜಾಗೃತ ಕೋಶ, ಕಾನೂನು ಕೋಶ, ಸಾಲ ಮರುಪಾವತಿ ಕೋಶ, ಇ-ಆಫೀಸ್ ಸೇರಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದಾರೆ' ಎಂದು ಕರ್ನಾಟಕ ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ಬಿ. ಚನ್ನಕೃಷ್ಣಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ ಮಂಗಳವಾರ, 27 ಡಿಸೆಂಬರ್ 2022 4

ಕ್ಷೇಮ ಕುಶಲ

ಹೊಸ ವರುಷಕ್ಕೆ ಆರೋಗ್ಯಸೂತ್ರ

ಆರೋಗ್ಯವಿದ್ದರೆ ವರ್ಷವೆಲ್ಲ ಹೊಸತನವೆ ತುಂಬಿರುತ್ತದೆ. ಆರೋಗ್ಯ ಪಾಲನೆಗೆ ಕೆಲವು ಸೂತ್ರಗಳನ್ನಾದರೂ ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳಲು ಹೊಸವರ್ಷ ನೆಪವಾಗಲಿ.

ಡಾ ಶ್ರೀನಿವಾಸ ಹರಪನಹಳ್ಳಿ

ಈ ವರ್ಷ ಮುಗಿಯಲು ಕೆಲವೇ ದಿನಗಳು ಬಾಕಿ ಇವೆ. ಹೊಸ ವರ್ಷಾಚರಣೆಗೆ ಕ್ಷಣಗಣನೆ ಆರಂಭವಾಗಿದೆ. ಒಂದೆಡೆ ಈ ವರ್ಷ ಸುಸೂತ್ರವಾಗಿ ಉರುಳಿದ ಸಂತಸವಿದ್ದರೆ ಮತ್ತೊಂದೆಡೆ ಮುಂದಿನ ವರ್ಷದ ಬಗ್ಗೆ ಕಾತರ, ಕನಸುಗಳ ನಿರೀಕ್ಷೆಯಿದೆ. ಈ ಹಿಂದಿನ ಎರಡು ವರ್ಷಗಳು ಹೇಗಿದ್ದವು ಎಂಬುದು ಜಗತ್ತಿಗೇ ಗೊತ್ತಿದೆ. ಕೊರೊನಾ ಈ ಅಮೂಲ್ಯ ವರ್ಷಗಳನ್ನು ಬಹುಮಟ್ಟಿಗೆ ತನ್ನ ಮುಷ್ಟಿಯಲ್ಲಿ ಇಟ್ಟುಕೊಂಡಿತ್ತು. ಈ ವರ್ಷದ ಆರಂಭದಲ್ಲಿ ಕೊರೊನಾ ತನ್ನ ಗತ್ತು ತೋರಿಸಿದರೂ ಹೆಚ್ಚು ಕಾಡಲಿಲ್ಲವೆನ್ನಬಹುದು. ಏಕೆಂದರೆ ಪ್ರಾರಂಭದಲ್ಲಿ ಕೊರೊನಾ ಪ್ರಕರಣ ಕಂಡರೂ ಅವೆಲ್ಲ ಸೌಮ್ಯ ಸ್ವರೂಪದ್ದಾಗಿತ್ತು. ಲಸಿಕಾ ಅಭಿಯಾನ, ದೇಹದಲ್ಲಿ ಪ್ರತಿರೋಧಕ ಕಾಯಗಳ ಉತ್ಪತ್ತಿಯಿಂದಾಗಿ ರೋಗ ಬಹುತೇಕ ಅಳಿವಿನ ಅಂಚಿಗೆ ಬಂದು ನಿಂತಿದೆ.

ಹಾಗೆಂದು ಮೈಮರೆಯುವ ಹಾಗಿಲ್ಲ. ಜಗತ್ತಿನ ಇನ್ನೂ ಅನೇಕ ಕಡೆ ಕೊರೊನಾ ಹೊಸ ಪ್ರಭೇದಗಳು ಕಾಣಿಸಿಕೊಳ್ಳುತ್ತಿವೆ. ಇಂದಿನ ಜೆಟ್ ಯುಗದಲ್ಲಿ ಇವುಗಳ ಹರಡುವಿಕೆಯೂ ವೇಗವಾಗಿಯೇ ಇರುತ್ತದೆ. ನಮ್ಮನ್ನು ಕಾಡಿದ ಕೊರೊನಾ ಜೀವನದ ಕೆಲವು ಪಾಠಗಳನ್ನು ಕಲಿಸಿದೆ. ಈ ಪಾಠಗಳನ್ನು ಮುಂದಿಟ್ಟುಕೊಂಡು ಹೊಸ ವರ್ಷವನ್ನು ಹರುಷದಿಂದಲೇ ಸ್ವಾಗತಿಸಲು ಸಜ್ಜಾಗುವುದು ಒಳ್ಳೆಯದು.

ನಾವೆಲ್ಲರೂ ಆರೋಗ್ಯವಂತರಾಗಿರಲು ಬಯಸುತ್ತೇವೆ. ಅದಕ್ಕನುಗುಣವಾಗಿ ಹೊಸ ವರ್ಷದ ಹೊಸ್ತಿಲಲ್ಲಿ ಕೆಲವು ಗುರಿಗಳನ್ನು ಇಟ್ಟುಕೊಳ್ಳುತ್ತೇವೆ. ಮುಂದಿನ ವರ್ಷಗಳಲ್ಲೂ ನಾವು ಹೇಗೆ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಮತ್ತು ಹಾಗೆ ಕಾಪಾಡಿಕೊಳ್ಳಲು ಇರುವ ಸವಾಲುಗಳೇನು ಎಂಬುದರ ಕುರಿತು ಕೊಂಚ ತಿಳಿದುಕೊಳ್ಳೋಣ.

ಶುಚಿತ್ವ ಪಾಲನೆ

ಕೊರೊನಾ ಕಲಿಸಿದ ಮೊದಲ ಪಾಠವೇ ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಳ್ಳುವುದು. ನಾವು ವೈಯಕ್ತಿಕವಾಗಿ ಇತರರೊಂದಿಗೆ ಹೇಗೆ ಬೆರೆಯುತ್ತೇವೆ ಎನ್ನುವುದರ ಮೇಲೆ ಸಾಂಕ್ರಾಮಿಕ ರೋಗಗಳ ಹರಡುವಿಕೆ ಅವಲಂಬಿಸಿವೆ. ಪರರ ವಸ್ತುಗಳನ್ನು ಬಳಸದೇ ಇರುವುದು, ಊಟ-ಪಾನೀಯಗಳ ಬಳಕೆಯಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಮುಂತಾದ ಕ್ರಮಗಳಿಂದ, ಮತ್ತೊಬ್ಬರ ಬೆವರು, ಜೊಲ್ಲು ಮತ್ತು ಕಫದ ಮೂಲಕ ಬರಬಹುದಾದ ರೋಗಗಳನ್ನು ತಡೆಗಟ್ಟಬಹುದು. ಇದರಿಂದ ಕೊರೊನಾ ಅಷ್ಟೇ ಅಲ್ಲ, ಮುಂದೆ ಬರಬಹುದಾದ ಇನ್ನಿತರ ಸಾಂಕ್ರಾಮಿಕ ರೋಗಗಳಿಂದಲೂ ದೂರವಿರಬಹುದು.

ವ್ಯಾಯಾಮ

ನಿಯಮಿತ ವ್ಯಾಯಾಮಕ್ಕೂ ಮತ್ತು ಆರೋಗ್ಯಕ್ಕೂ ಅವಿನಾಭಾವ ಸಂಬಂಧ. ವ್ಯಾಯಾಮವು ದೇಹದ ಮಾಂಸಖಂಡಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತದೆ. ಅಲ್ಲದೆ ವ್ಯಾಯಾಮದಿಂದ ಹೃದಯ ಮತ್ತು ಶ್ವಾಸಕೋಶದ ಕ್ಷಮತೆ ಹೆಚ್ಚುತ್ತದೆ. ಕೊರೊನಾಪೀಡಿತ ಅನೇಕ ರೋಗಿಗಳು ತಮ್ಮ ಶ್ವಾಸಕೋಶದ ಸಾಮರ್ಥ್ಯವನ್ನು ಮರಳಿ ಪಡೆಯಲು Spirometryಯಂತಹ ಲಘು ವ್ಯಾಯಾಮಗಳನ್ನು ಮಾಡುವುದು ನಮಗೆಲ್ಲಾ ಗೊತ್ತೇ ಇದೆ. ಕೆಲವು ಆಧುನಿಕ ಜಿಮ್‌ಗಳು ಕೇವಲ ಮಾಂಸಖಂಡಗಳ ಬಲವರ್ಧನೆ ಮತ್ತು ಸೌಂದರ್ಯಕ್ಕೆ ಒತ್ತು ಕೊಡುತ್ತವೆ. ಇದರಿಂದ ನೈಜಸೌಂದರ್ಯ ಅನಾವರಣಗೊಳ್ಳುವುದು ಅನುಮಾನ. ಬರಿ ಬಾಹ್ಯಸೌಂದರ್ಯದ ಆಮಿಷಕ್ಕೆ ಬಲಿಯಾಗದೆ ನೈಸರ್ಗಿಕವಾಗಿ ದೇಹದಾರ್ಢ್ಯವನ್ನು ಹೆಚ್ಚಿಸುವ ವಿಧಾನಗಳಿಗೆ ಹೊಂದಿಕೊಳ್ಳುವುದೇ ಉತ್ತಮ. ಯೋಗ, ಪ್ರಾಣಾಯಾಮ, ಈಜುಗಳಂಥವು ಸ್ವಾಭಾವಿಕವಾಗಿಯೇ ನಮ್ಮ ದೇಹವನ್ನು ಹುರಿಗೊಳಿಸುತ್ತವೆ. ಜಿಮ್ಮಿನ ಹವಾನಿಯಂತ್ರಿತ ಗಾಳಿಯ ಬದಲು ಮುಂಜಾನೆಯ ತಂಗಾಳಿಯಲ್ಲಿ ವಾಕಿಂಗ್ ಅಥವಾ ಜಾಗಿಂಗ್ ಮಾಡಿರಿ. ಆಗ ಪ್ರಕೃತಿಯ ಮಡಿಲಲ್ಲಿ ಹುದುಗಿರುವ ನಿಷ್ಕಲ್ಮಶ ಪ್ರೀತಿ ಅರಿವಿಗೆ ಬರುತ್ತದೆ.

ಸಮತೋಲಿತ ಆಹಾರ

ಉತ್ತಮ ಆರೋಗ್ಯಕ್ಕೆ ವ್ಯಾಯಾಮದಷ್ಟೆ ಆಹಾರವೂ ಮುಖ್ಯ. ಪೌಷ್ಟಿಕಾಂಶಗಳುಳ್ಳ ಸಮತೋಲಿತ ಆಹಾರದಿಂದ ದೇಹದ ರಾಸಾಯನಿಕ ಕ್ರಿಯೆಗಳು ಸರಾಗವಾಗಿ ನಡೆಯುತ್ತವೆ. ಅಷ್ಟೇ ಅಲ್ಲ; ಮಾಂಸಖಂಡಗಳ ಬಲವರ್ಧನೆ ಮತ್ತು ಪ್ರತಿರೋಧ ಕಾಯಗಳ ಮತ್ತು ಕಿಣ್ವಗಳ ಉತ್ಪತ್ತಿಗೂ ಸಹಾಯ ಮಾಡುತ್ತವೆ. ಆದರೆ ಪೌಷ್ಟಿಕಾಂಶಗಳ ನೆಪದಲ್ಲಿ ಕೆಲವು ಪೌಡರ್, ಲೇಹ್ಯಗಳ ಸೇವನೆ ಬಗ್ಗೆ ಎಚ್ಚರದಿಂದಿರಿ. ಇನ್ನು ಫಾಸ್ಟ್ ಫುಡ್ ಮತ್ತು ಜಂಕ್ ಫುಡ್‌ಗಳಿಂದ ದೂರವಿರಿ. ಇದು ಆಹಾರದ ಸೇವನೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

ಕುಟುಂಬದೊಂದಿಗೆ ಬೆರೆಯಿರಿ

ಸಾಧ್ಯವಾದಷ್ಟು ಮಟ್ಟಿಗೆ ಸಾವಯವ, ರಾಸಾಯನಿಕರಹಿತ ಆಹಾರವನ್ನು ಸೇವಿಸಬೇಕು. ಆರೋಗ್ಯವಂತರಾಗಿರಲು ಇನ್ನೊಂದು ಸೂತ್ರವೆಂದರೆ ಕುಟುಂಬದ ಜೊತೆ, ಸ್ನೇಹಿತರ ಜೊತೆ ಸಮಯವನ್ನು ಕಳೆಯುವುದು. ಲಾಕ್‌ಡೌನ್ ಸಮಯದಲ್ಲಿ ಇದರ ಮಹತ್ವ ಅರಿವಿಗೆ ಬಂದಿರಬಹುದು. ಪ್ರೀತಿಪಾತ್ರರೊಂದಿಗೆ ಒಂದಾಗಿ ಬೆರೆಯುವ ಕ್ಷಣಗಳಿಂದ ದೇಹದಲ್ಲಿ ಸಂತೋಷಸೂಚಕ ರಸವಾಹಿಗಳು ಹೆಚ್ಚು ಸ್ರವಿಸುತ್ತವೆ.

ಹೊಸ ಹವ್ಯಾಸ

ಪ್ರತಿ ವರ್ಷವೂ ಹೊಸ ಹವ್ಯಾಸಗಳನ್ನು ರೂಢಿಗೊಳಿಸಿಕೊಳ್ಳುವುದು ಒಳ್ಳೆಯದು. ಅದು ಪ್ರವಾಸ ಆಗಿರಬಹುದು; ಆಟ ಆಗಿರಬಹುದು ಅಥವಾ ಪುಸ್ತಕಗಳ ಓದು, ಕಲೆಯಲ್ಲಿ ಆಸಕ್ತಿಯಂಥ ಹವ್ಯಾಸಗಳೇ ಆಗಿರಬಹುದು.

ಇಂದಿನ ಯುಗದಲ್ಲಿ ಜಿಮ್ ಮತ್ತು ಸಂಸ್ಕರಿಸಿದ ಆಹಾರಕ್ಕೆ ದಾಸರಾಗಿದ್ದೇವೆ. ನಮ್ಮ ಜೀವನಶೈಲಿ ಯಾಂತ್ರಿಕವಾದಷ್ಟು ರೋಗಗಳಿಗೆ ತುತ್ತಾಗುತ್ತೇವೆ. ಹಿತ-ಮಿತವಾದ ಪ್ರಕೃತಿದತ್ತ ಆಹಾರ, ಸರಳ-ಒತ್ತಡರಹಿತ ಜೀವನಶೈಲಿ ಮತ್ತು ದೇಹ- ಮನಸ್ಸುಗಳಿಗೆ ಮುದ ನೀಡುವ ಹವ್ಯಾಸಗಳಿಂದ ಹೊಸ ವರ್ಷವನ್ನು ಸ್ವಾಗತಿಸೋಣ. ಪ್ರೊಟೀನ್ ಪೌಡರ್, ಸಂಸ್ಕರಿಸಿದ ಆಹಾರ ಪದಾರ್ಥಗಳು, ದಿಢೀರ್ ತೂಕವನ್ನು ಕಳೆದುಕೊಳ್ಳಲು ಪ್ರಚೋದಿಸುವ ಆಫರ್‌ಗಳು ಮತ್ತು ಆಧುನಿಕತೆಯ ಹೆಸರಿನಲ್ಲಿ ನಡೆಯುವ ಸ್ವೇಚ್ಛಾಚಾರಗಳಿಂದ ದೂರವಿರೋಣ.

ಈ ಆರೋಗ್ಯಸೂತ್ರಗಳು ನಮ್ಮನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರನ್ನಾಗಿಸುತ್ತವೆ. ಇದು ಬದುಕು ಒಡ್ಡುವ ಸವಾಲುಗಳನ್ನು ಎದುರಿಸುವ ತಾಕತ್ತನ್ನೂ ನೀಡುವುದು ನಿಸ್ಸಂಶಯ.

ಚಳಿಗಾಲದ ಗಂಟಲುನೋವು

ಡಾ. ಪಲ್ಲವಿ ಹೆಗಡೆ



ಶೀತಗಾಳಿ, ಮೋಡಕವಿದ ವಾತಾವರಣ, ಮಳೆಯಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಗಂಟಲುನೋವು, ಸುಲಭವಾದ ಆರೈಕೆಗಳಿಂದ ವಾಸಿಯಾಗುವುದು. ಗಂಟಲುನೋವಿನ ಜೊತೆಗೆ, ಸತತವಾಗಿ 101ಡಿಗ್ರಿ. ಸೆ. ತೀವ್ರ ತಾಪ, ವಾರ ಕಳೆದರೂ ನೋವು ಇಳಿಯದೆ, ಸ್ವರವು ಹೊರಡದೆ, ಮಾತನಾಡಲು ಕಷ್ಟವೆನಿಸುವುದು, ಬಾಯಿ ತೆರೆಯಲು ಕಷ್ಟವಾಗುವುದು, ಉಸಿರಾಟದ ಸಮಸ್ಯೆ, ಒಣಕೆಮ್ಮು, ನಾಲಿಗೆ-ಗಂಟಲು-ಬಾಯಿ ಒಣಗುವುದು, ಗಂಟಲು-ಕಣ್ಣು ಉರಿಯುವುದು, ತುಟಿ-ಗಂಟಲು-ಕಿರುನಾಲಿಗೆ--ಬಾಯಿಯ ಮೇಲ್ಭಾಗ ಕೆಂಪಾಗಬಹುದು.

ಕೆನ್ನೆ-ಮುಖದ ಬಾವು, ತಲೆಭಾರ-ನೋವು, ಕುತ್ತಿಗೆ- ಗಂಟಲು ಪ್ರದೇಶದಲ್ಲಿ ಗಂಟುಗಳು, ಮೈನೋವು, ಕಿವಿನೋವು, ನೆಗಡಿ, ಸೀನುವುದು, ಎಂಜಲು ನುಂಗಲು ಕಷ್ಟವೆನಿಸುವುದು, ಜೊಲ್ಲು ಸುರಿಯುವುದು, ಕುಡಿಯಲು-ತಿನ್ನಲು ಅಸಾಧ್ಯವೆನಿಸುವಷ್ಟು ತೀವ್ರವಾದ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇವೆಲ್ಲವೂ ವೈದ್ಯರ ಸಹಾಯದಿಂದ ವಾಸಿಯಾಗಬಹುದು. ಕೆಲವು ತೀವ್ರತರವಾದ ಸ್ಥಿತಿಯು ಪ್ರಾಣಘಾತಕ. ಗಂಟಲು ನೋವಿಗೆ ಕಾರಣ ಹಾಗೂ ಪರಿಹಾರಗಳ ಬಗ್ಗೆ ತಿಳಿಯೋಣ.

- ಸೈಕ್ಲೋನ್ ಪರಿಣಾಮ ಶೀತಗಾಳಿ, ವಾಯುಭಾರ ಕುಸಿತ, ಮಳೆ- ಮೋಡದ ವಾತಾವರಣ, ಆರ್ದ್ರತೆಯನ್ನು ಅನುಭವಿಸುತ್ತಿದ್ದೇವೆ. ಇಂತಹ ಪರಿಸರದಲ್ಲಿ ಮುಖವನ್ನು ಎದುರಿಗೆ ಒಡ್ಡಿ ಪ್ರಯಾಣಿಸುವುದು, ತೆರೆದ ಪ್ರದೇಶದಲ್ಲಿ ಮಲಗುವುದು, ಮಳೆಯಲ್ಲಿ ನೆನೆಯುವುದು - ಇವುಗಳಿಂದ ಗಂಟಲುನೋವಿಗೆ ಒಳಗಾಗುವವರು ಹೆಚ್ಚು. ಕಿವಿ, ಮೂಗು, ಬಾಯಿ, ತಲೆಯು ಮುಚ್ಚುವಂತೆ ಬೆಚ್ಚಗೆ ಮಾಸ್ಕ್- ಸ್ಕಾರ್ಫ್-ಟೋಪಿ ಧರಿಸುವುದು ಉತ್ತಮ ಅಭ್ಯಾಸ. ಬೆಚ್ಚಗಿನ ಬಟ್ಟೆ, ದಪ್ಪವಾದ ಹಾಸಿಗೆ-ಹೊದಿಕೆಗಳ ಉಪಯೋಗವು ಸೂಕ್ತ. ಕಿಟಕಿ-ಬಾಗಿಲನ್ನು ಮುಚ್ಚಿದ ನಿರ್ವಾತ ಕೋಣೆಯಲ್ಲಿ ವಾಸಿಸುವುದು, ಮಲಗುವುದು ಕ್ಷೇಮ.
- ಮನೆಯೊಳಗೆ, ಕಚೇರಿಯಲ್ಲಿ ಅರಿಶಿನ, ಸಾಂಬ್ರಾಣಿ, ತುಪ್ಪಗಳ 'ಧೂಪನ'ದಿಂದ ಆರ್ದ್ರತೆಯನ್ನು, ಉಷ್ಣತೆಯನ್ನು ಕಾಪಾಡಬಹುದು. ಧೂಪನದಿಂದ ಸೂಕ್ಷ್ಮಾಣು ಜೀವಿಗಳಿಂದ ರಕ್ಷಣೆ ಪಡೆಯಬಹುದು.
- ಅರಿಶಿನದ ಒಣಗಿದ ಕೊಂಬನ್ನು ತುಪ್ಪದಲ್ಲಿ ಅದ್ದಿಕೊಂಡು ಬೆಂಕಿಗೆ ಹಿಡಿದು, ಉರಿಯಲು ತೊಡಗಿದಾಗ ಆರಿಸಿ ಅದರಿಂದ ಹೊಮ್ಮುವ ಧೂಮವನ್ನು ಉಸಿರಾಟದೊಂದಿಗೆ ಸೇದುವುದು- ಗಂಟಲಿನ ಬಾವು, ಬಿಗಿತದಿಂದ ಉಂಟಾಗುವ ನೋವನ್ನು ಉಪಶಮನಗೊಳಿಸುತ್ತದೆ. ಕಣ್ಣು ಕೆಂಪಾಗಿದ್ದಾಗ, ಗಂಟಲಿನ ಉರಿ, ಕಣ್ಣುರಿ, ಬಾಯಿಹುಣ್ಣು ಇಂತಹ ಪಿತ್ತದ ಲಕ್ಷಣಗಳಿದ್ದಾಗ ಈ ಧೂಮವನ್ನು ಸೇವಿಸಬಾರದು. ಸಮಸ್ಯೆಯು ಉಲ್ಬಣಿಸುತ್ತದೆ.
- ನಿತ್ಯವೂ ಮುಂಜಾನೆ ಹಲ್ಲುಜ್ಜುವಾಗ ಕಹಿ-ಒಗರು-ರುಚಿಯ ದಂತಮಂಜನಗಳನ್ನು ಉಪಯೋಗಿಸುವುದು ಉತ್ತಮ ದಿನಚರಿ. ಗಂಟಲಲ್ಲಿ ಕಫವು ಕಟ್ಟಿಕೊಂಡು ಉಂಟಾಗುವ ಬಾವು-ನೋವು- ಬಿಗಿತಗಳನ್ನು ನಿವಾರಿಸುತ್ತದೆ. ಗಂಟಲುನೋವಿದ್ದಾಗಲೂ ಇಂತಹ ಹಲ್ಲುಪುಡಿಯಿಂದ ಹಲ್ಲುಜ್ಜುವುದರಿಂದ ಬೇಗನೇ ಶಮನವನ್ನು ಕಾಣಬಹುದು.
- ಬಾಯಿಯನ್ನೂ ತೆರೆಯಲಾಗದಷ್ಟು ಗಂಟಲು-ನೋವಿದ್ದಾಗ ಹಲ್ಲುಜ್ಜುವ ಬದಲು, ಜೇನುತುಪ್ಪವನ್ನು ಬೆರಳಿನಿಂದ ಹಲ್ಲಿಗೆ ತಿಕ್ಕಿ, ಚೊಕ್ಕಗೊಳಿಸುವುದು ಸುಖಕರ.
- ಶೀತ-ಮಳೆಯ ವಾತಾವರಣದಲ್ಲಿ ಬಿಸಿನೀರಿನಿಂದ ಬಾಯಿಮುಕ್ಕಳಿಸುವುದು ಗಂಟಲುನೋವು ನಿವಾರಕ. ಗಟ್ಟಿಕಫವು ಶೇಖರಣೆಯಾಗಿದ್ದರೆ ಚಿಟಿಕೆ ಸೈಂಧವ-ಲವಣ/ ಪಿಂಕ್-ಸಾಲ್ಟ್/ ಕಲ್ಲುಪ್ಪು ಸೇರಿಸಬಹುದು. ಉರಿಯೂತ, ಗಂಟಲು ಕೆಂಪಾಗಿದ್ದಾಗ ಇದನ್ನು ಮಾಡುವುದು ಸರಿಯಲ್ಲ.
- ಸ್ನಾನದ ಮೊದಲು, ಕಿವಿಗೆ-ಮೂಗಿಗೆ-ತಲೆಗೆ-ಪೂರ್ಣಶರೀರಕ್ಕೆ ಬೆಚ್ಚಗಿನ ಎಳ್ಳೆಣ್ಣೆಯನ್ನು ಹಚ್ಚುವುದು, ಹನಿಗಳನ್ನು ಬಿಡುವುದು ಉಪಯುಕ್ತ. ಮನೆಯಾಚೆ ಹೋಗುವಾಗ ಕಿವಿಗೆ-ಮೂಗಿಗೆ ಬೆಚ್ಚಗಿನ ಎಣ್ಣೆಯನ್ನು ಸವರಿಕೊಳ್ಳುವುದು. ಈ ಅಭ್ಯಾಸವು ವಾತಾವರಣದ ವ್ಯತ್ಯಾಸದಿಂದ ದೇಹದ ಮೇಲಾಗುವ ಪರಿಣಾಮವನ್ನು ತಡೆಯುತ್ತದೆ. ಚರ್ಮ-ಶರೀರದ ಉಷ್ಣತೆಯನ್ನು, ಆರ್ದ್ರತೆಯನ್ನು ಕಾಪಾಡುತ್ತದೆ. ಗಂಟಲುನೋವು, ನೆಗಡಿ, ಸೀನುವುದು, ಮೂಗುಕಟ್ಟುವುದು, ಉಸಿರಾಡಲು ಕಷ್ಟ, ಕಿವಿನೋವು ಮೊದಲಾದ ತೊಂದರೆಗಳನ್ನು ನಿವಾರಿಸುತ್ತದೆ.
- ಗಂಟಲುಬಾವು-ನೋವಿದ್ದಾಗ ತಲೆಸ್ನಾನವನ್ನು ಮಾಡದೆ ಇರುವುದು ಉತ್ತಮ.
- ಶೀತ-ಆರ್ದ್ರಕಾಲದಲ್ಲಿ ಹೆಚ್ಚು ಹೆಚ್ಚು ದ್ರವಾಹಾರ ಸೇವನೆ, ಮೊಸರು- ಮಜ್ಜಿಗೆ- ಹಾಲಿನ ತಣ್ಣಗಿನ ಉತ್ಪನ್ನಗಳನ್ನು ಸೇವಿಸುವುದರಿಂದ ಜೀರ್ಣಶಕ್ತಿಯು ಮತ್ತಷ್ಟು ಹಾಳಾಗುತ್ತದೆ. ಆದ್ದರಿಂದ ತಾಜಾ-ಬಿಸಿಯಾದ ಆಹಾರಸೇವನೆಯೊಂದಿಗೆ ಚೆನ್ನಾಗಿ ಕುದಿಸಿದ ಬಿಸಿನೀರು ಕುಡಿಯುವುದು ಹಿತಕರ. ಜೀರಿಗೆ/ ಶುಂಠಿ/ ಕೊತ್ತಂಬರಿಬೀಜ/ ಸೋಂಪು/ ಏಲಕ್ಕಿಯಂತಹ ಜೀರ್ಣಕಾರಿ ಆಹಾರೋಪಯೋಗಿ ಪದಾರ್ಥಗಳನ್ನು ನೀರಿಗೆ/ ಹಾಲಿಗೆ ಹಾಕಿ ಕುದಿಸಿ ಕುಡಿಯುವುದು ಉಪಕಾರಿ. ಗಂಟಲುನೋವಿದ್ದಾಗಲೂ ಇಂತಹ ಆಹಾರ-ಪಾನ ಸೂಕ್ತ.
- ಕಫವು ಬಿಗಿದು ಗಂಟಲುಬಾವು-ನೋವಿದ್ದಾಗ ಶುಂಠಿ-ಜೀರಿಗೆ ನೀರುಬಿಸಿಯಾದ ಆಹಾರದಲ್ಲಿ ಸೂಕ್ತ.
- ಗಂಟಲು ಕೆಂಪಾಗಿ, ಒಣಕೆಮ್ಮು, ಉರಿಯಿದ್ದಾಗ ಬಿಸಿ ಆಹಾರದಲ್ಲಿ ಬೆಣ್ಣೆ, ಹಾಲು-ಸಕ್ಕರೆ, ಬಿಸಿಪಾಯಸ, ಖೀರು ಸೇವನೆ ಹಿತಕರ.
- ರಾತ್ರಿಯ ಆಹಾರದಲ್ಲಿ ಮೊಸರನ್ನು ಸೇವಿಸುವುದು, ಮಜ್ಜಿಗೆ ಕುಡಿಯುವುದು, ಬಾಳೆಹಣ್ಣು, ಕಿತ್ತಳೆ ಮೊದಲಾದ ಕಫವನ್ನು ಹೆಚ್ಚಿಸುವ ಹಣ್ಣುಗಳ ಸೇವನೆಯಿಂದ ಗಂಟಲುನೋವು ಕಾಡಬಹುದು. ತಲೆಭಾರ, ಮುಖ-ಗಂಟಲು ಬಾವು ಮೊದಲಾದ ತೊಂದರೆಗಳೂ ಜೊತೆಗೂಡಬಹುದು. ಈ ಸಂದರ್ಭದಲ್ಲಿ ರಾತ್ರಿಯ ಆಹಾರವನ್ನು ಒಂದು ಹೊತ್ತು ಬಿಡುವುದರಿಂದ, ಉಪವಾಸದಿಂದ ಹಿತ ಕಾಣಬಹುದು.
- ರಾತ್ರಿಯ ಆಹಾರವು ತಡವಾದಷ್ಟೂ ಗಂಟಲಿನ ಸಮಸ್ಯೆಗಳು ಜಾಸ್ತಿ. ಗಂಟಲುನೋವಿದ್ದಾಗಲೂ ತಡವಾಗಿ ರಾತ್ರಿಯ ಆಹಾರವನ್ನು ಸೇವಿಸುವುದರಿಂದ ಸಮಸ್ಯೆಯು ಉಲ್ಬಣಿಸುತ್ತದೆ. ಇಂತಹವರು ಸಂಜೆ 6-7 ಗಂಟೆಯೊಳಗೆ ತಾಜಾ-ಬಿಸಿ-ಜೀರ್ಣಕಾರಿ ಆಹಾರ ಸೇವಿಸಿ, ನಂತರ ಮಲಗುವವರೆಗೆ ಏನನ್ನೂ ಸೇವಿಸದಿರುವುದು ಗುಣಕಾರಿ.
- ತಣ್ಣಗಿನ ಹಣ್ಣಿನ ರಸ, ತಣ್ಣೀರು, ತಣ್ಣಗಿನ ಆಹಾರ, ಐಸ್-ಕ್ರೀಂ, ಮಿಲ್ಕ್-ಶೇಕ್, ಕೇಕ್, ಪೇಸ್ಟರಿ-ಮೊದಲಾದ ಸೇವನೆಯಿಂದ ಗಂಟಲುನೋವು ಬರುವುದು ಸಾಮಾನ್ಯ. ಈ ಕಾರಣಗಳಿದ್ದಾಗ ಒಂದೆರಡು ಹೊತ್ತು ಆಹಾರವನ್ನು ಸೇವಿಸದೆ ಬಿಸಿನೀರು, ಶುಂಠಿ ಮತ್ತು ಬೆಲ್ಲ ಹಾಕಿ ಕುದಿಸಿದ ನೀರು, ಜೀರಿಗೆ ಮತ್ತು ಬೆಲ್ಲ ಹಾಕಿ ಕುದಿಸಿದ ನೀರು ಸೇವಿಸಿ ಗುಣಹೊಂದಬಹುದು.
- ಗಂಟಲುಬಾವು-ಕಫ ಬಿಗಿದು ನೋವು ಇದ್ದಾಗ ಬಿಸಿಯಾದ ಲೇಪನವು ಹಿತಕಾರಿ. ಶುಂಠಿಯನ್ನು ಹಾಲಿನಲ್ಲಿ ತೇಯ್ದು/ ಪೇಸ್ಟ್ ಮಾಡಿ ಬಿಸಿಮಾಡಿ ಗಂಟಲಿನ ಹೊರಗೆ ಹಚ್ಚುವುದು ಶಮನವನ್ನು ತರುತ್ತದೆ. ಮೇಲೆ ತಿಳಿಸಿದ ಆರೈಕೆಗಳು ಒಂದೆರಡು ದಿನಗಳಲ್ಲಿಯೇ ಶಮನವನ್ನು ತರುವಂತಹವು. ಇಷ್ಟಾಗಿಯೂ ಕಡಿಮೆಯಾಗದಿದ್ದರೆ, ತೀವ್ರತರನಾದ ಲಕ್ಷಣಗಳು, ವಾರ ಕಳೆದರೂ ವಾಸಿಯಾಗದ ಗಂಟಲುಬೇನೆಗೆ ವೈದ್ಯರ ಸಲಹೆ ಪಡೆಯಿರಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

16) ಭಾರತ ಮತ್ತು ಪಾಕಿಸ್ತಾನದ ನಡುವೆ ಎಳೆದಿರುವ ರೇಖೆ ಯಾವುದು?
ಉತ್ತರ:- ರ್‍ಯಾಡ್‌ಕ್ಲಿಫ್ ಲೈನ್

17) ರಾಧಾನಾಥ್ ಸಿಕ್ದರ್ ಯಾರು?
ಉತ್ತರ:- ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ.

18) ಭಾರತದ ದಕ್ಷಿಣದ ತುತ್ತತುದಿ ಯಾವುದು?
ಉತ್ತರ:- ನಿಕೋಬಾರ್ ದ್ವೀಪದಲ್ಲಿ ಇಂದಿರಾ ಪಾಯಿಂಟ್ ಭಾರತದ ದಕ್ಷಿಣದ ತುತ್ತತುದಿಯಾಗಿದೆ.

19) ಯೂರೋಪಿಯನ್ ರಾಷ್ಟ್ರಗಳಲ್ಲಿ ಭಾರತದ ಯಾವೆಲ್ಲಾ ವಸ್ತುಗಳಿಗೆ ಬಹಳ ಬೇಡಿಕೆಯಿತ್ತು?
ಉತ್ತರ:- ಭಾರತದ ಸಾಂಬಾರ್ ಪದಾರ್ಥಗಳಾದ ಮೆಣಸು, ದಾಲ್ಚಿನಿ, ಏಲಕ್ಕಿ, ಶುಂಠಿ ಮೊದಲಾದ ವಸ್ತುಗಳಿಗೆ ಯೂರೋಪಿನಲ್ಲಿ ಬಹಳ ಬೇಡಿಕೆಯಿತ್ತು.

20) ಮೊದಲ ಆಂಗ್ಲೋ-ಮರಾಠ ಯುದ್ಧ ಬಗ್ಗೆ ಬರೆಯಿರಿ
ಉತ್ತರ: ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ (ರಘುನಾಥರಾವ್) ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775-1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್‌ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರಿಸಲಾಗದೆ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು.
ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು

ಅಥವಾ

ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ
ಉತ್ತರ:- 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು. ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ನಿಂತಿತು.

21) ಭಾರತ ಮತ್ತು ಚೀನಾದ ನಡುವೆ ಗಡಿವಿವಾದ ಇದ್ದರೂ ಕೂಡಾ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮ ಪಡಿಸಿಕೊಂಡಿವೆ. (ಮಾರ್ಚ್ 2019ರ ಪ್ರಶ್ನೆ)
ಉತ್ತರ:- ಭಾರತದ ಧೋರಣೆಯ ವಿರುದ್ಧ ಚೈನಾ-ಟಿಬೆಟನ್ನು ವಶಪಡಿಸಿಕೊಂಡಿತು. 1962ರಲ್ಲಿ ಚೀನಾ ದೇಶವು ಭಾರತವನ್ನು ಆಕ್ರಮಿಸಿತು.
ಹಾಗೂ ಯುದ್ಧದಲ್ಲಿ ಭಾರತ ಸೋಲು ಅನುಭವಿಸಿತು. ನಮ್ಮ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶವನ್ನು ಚೈನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಭಾರತ- ಚೈನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪಪರಿಣಾಮ ಬೀರುತ್ತಿದೆ. ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ಮಧ್ಯೆ ಮನಸ್ತಾಪವಿದೆ. ಭಾರತ ಚೈನಾದ ಮಧ್ಯೆ ಇರುವ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ. ಹೀಗಾಗಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಗಡಿ ರೇಖೆ ನಿಖರವಾಗಿಇಲ್ಲ. ಭಾರತ ಮತ್ತು ಚೀನಾದ ನಡುವೆ,ಗಡಿಯಲ್ಲಿ ದೋಕ್ಲಾಮ್, ತವಾಂಗ್, ಆಕ್ಸಯ್ ಚೀನಾ ಮೊದಲಾದ ಸಮಸ್ಯೆಗಳಿದ್ದರೂ ನಮ್ಮ ಉತ್ತರ ಭಾಗದಲ್ಲಿರುವ ಬೃಹತ್ ನೆರೆಯ ರಾಷ್ಟ್ರವಾದ ಚೀನಾದೊಡನೆ ಇತಿಹಾಸದ ಉದ್ದಕ್ಕೂ ಈ ರಾಷ್ಟ್ರಗಳು ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡಿವೆ. ಅಕ್ಟೋಬರ್ 1949ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ. ಪಂಚಶೀಲ ಹಾಗೂ ಹಿಂದಿ-ಚೀನೀ ಭಾಯಿ ಭಾಯಿ ತತ್ವದ ಆಧಾರದಲ್ಲಿ ಪರಸ್ಪರ ಭಾರತ-ಚೀನಾ ಸಂಬಂಧವನ್ನು ಬೆಳೆಸಿಕೊಳ್ಳಲು ಯತ್ನಿಸಲಾಯಿತು.

ಅಥವಾ

22) ಭಾರತದಲ್ಲಿರುವ ಮೆಕ್ಕಲು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ
ಉತ್ತರ:- ನದಿಗಳು ಪರ್ವತಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ. ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ್, ಹರಿಯಾಣ ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪಿಯುಸಿ ರಸಾಯನವಿಜ್ಞಾನ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರಸಾಯನವಿಜ್ಞಾನ

ಪಿಯುಸಿ

ಬಿಟ್ಟಸ್ಥಳ ತುಂಬಿ

1) ಒಂದೇ ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಆಲ್ಕೇನ್‌ಗಳನ್ನು ....ಎನ್ನುವರು..
ಉತ್ತರ:- ಆಲ್ಕೈ ಲಿಡೀನ್ ಅಥವಾ ಆಲ್ಕೈಲೀನ್ ಡೈ ಹ್ಯಾಲೈಡ್‌ಗಳು

2) ಶಸ್ತ್ರಚಿಕಿತ್ಸೆಯಲ್ಲಿ '............ನ್ನು ಅರೆವಳಿಕೆಯಾಗಿಯೂ (ಅನಸ್ತೇಷಿಯಾ) ಬಳಸುತ್ತಾರೆ.
ಉತ್ತರ:- ಹ್ಯಾಲೋಥೇನ್

3) ಶುದ್ದವಾದ ಆಲ್ಕೈಲ್ ಹಾಲೈಡ್‌ಗಳು ವರ್ಣರಹಿತವಾಗಿರುತ್ತವೆ ಆದರೆ ....ಗಳು ಬೆಳಕಿಗೆ ತೆರೆದಿಟ್ಟಾಗ ಬಣ್ಣವನ್ನು ಪಡೆಯುತ್ತವೆ.
ಉತ್ತರ:- ಬ್ರೋಮೈಡ್‌ಗಳು ಮತ್ತು ಅಯೋಡೈಡ್

4) ಆವಿಯಾಗುವ ಹ್ಯಾಲೋಜನ್ ಸಂಯುಕ್ತಗಳು ....ಯನ್ನು ಹೊಂದಿವೆ.
ಉತ್ತರ:- ಸುವಾಸನೆ

5) ಕೆಲವು ಸಂಯುಕ್ತಗಳು ಸಮತಲಧ್ರುವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್ ಅಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸುವ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ ....ಎನ್ನುವರು.
ಉತ್ತರ:- ದ್ಯುತಿ ಪಟುತ್ವ ಸಂಯುಕ್ತಗಳು

6) ಕೆಲವೊಮ್ಮೆ ಆಲ್ಕೈಲ್ ಕ್ಲೋರೈಡ್/ಬ್ರೋಮೈಡ್ ಅನ್ನು ಶುಷ್ಕ ಅಸಿಟೋನ್‌ನಲ್ಲಿ Nalನೊಂದಿಗೆ ಕ್ರಿಯೆ ನಡೆಸಿ ಅಲ್ಕೈಲ್ ಅಯೋಡೈಡ್‌ಗಳನ್ನು ತಯಾರಿಸುತ್ತದೆ. ಈ ಕ್ರಿಯೆಯನ್ನು ....ಎನ್ನುವರು.
ಉತ್ತರ:- ಫಿಂಕಲ್‌ಸ್ಟೀನ್ ಕ್ರಿಯೆ

7) ಆಲ್ಕೈಲ್ ಕ್ಲೋರೈಡ್ /ಬ್ರೋಮೈಡ್‌ಗಳನ್ನು ಲೋಹೀಯ ಫ್ಲೋರೈಡ್‌ಗಳಾದ AgF.HgF2 CoF2 CxÀaÁ SbF3 ಸಾನಿಧ್ಯದಲ್ಲಿ ಕಾಯಿಸಿ, ಆಲ್ಕೈಲ್ ಫ್ಲೋರೈಡ್‌ಗಳನ್ನು ಉತ್ತಮವಾಗಿ ಸಂಶ್ಲೇಷಿಸಬಹುದು. ಈ ರಾಸಾಯನಿಕ ಕ್ರಿಯೆಯನ್ನು ....ಎನ್ನುವರು.
ಉತ್ತರ:- ಸ್ವಾರ್ಟ್ಸ ಕ್ರಿಯ

8) ಹ್ಯಾಲೋ ಆಲ್ಕೇನ್‌ಗಳು ....ದ್ರಾವಕದಲ್ಲಿ ಕರಗುತ್ತದೆ.
ಉತ್ತರ:- ಸಾವಯವ

9) ಕೇಂದ್ರ ಚತುಮುಖೀಯ ಕಾರ್ಬನ್ ಪರಮಾಣುವಿನ ಸುತ್ತ ನಾಲ್ಕು ವಿಭಿನ್ನ ಗುಂಪುಗಳು (ವೆಲೆನ್ಸಿ) ಜೋಡಣೆಯಾಗಿದ್ದರೆ, ಅಂತಹ ಕಾರ್ಬನ್‌ನ್ನು ....ಎನ್ನುವರು.
ಉತ್ತರ:- ಅಸಮ್ಮಿತಿ ಕಾರ್ಬನ್ ಅಥವಾ ಸ್ಟಿರಿಯೋ ಕೇಂದ್ರ

10) ಬಹುತೇಕ ಸಾವಯವ ಕ್ಲೋರೈಡ್, ಬ್ರೋಮೈಡ್ ಮತ್ತು ಅಯೋಡೈಡ್‌ಗಳು ಕೆಲವು ಲೋಹಗಳೊಂದಿಗೆ ವರ್ತಿಸಿ ....ಬಂಧಗಳಿರುವ ಸಂಯುಕ್ತಗಳನ್ನು ಉಂಟುಮಾಡುತ್ತವೆ.
ಉತ್ತರ:- ಕಾರ್ಬನ್-ಲೋಹೀಯ

11) ಸಾವಯವ ಲೋಹೀಯ ಸಂಯುಕ್ತಗಳ ಪ್ರಮುಖ ವಿಧವಾದ ಆಲ್ಕೈಲ್ ಮೆಗ್ನೀಷಿಯಂ ಹ್ಯಾಲೈಡ್‌ಅನ್ನು.............ಗಳು ಎಂದು ಹೆಸರಿಸುತ್ತಾರೆ.
ಉತ್ತರ:- ಗ್ರಿಗ್ನಾರ್ಡ್ ಕಾರಕ

12) ಆಲ್ಕೈಲ್ ಮತ್ತು ಆರೈಲ್ ಹ್ಯಾಲೈಡುಗಳ ಒಂದು ಮಿಶ್ರಣವನ್ನು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿದಾಗ .... ಗಳನ್ನು ಉಂಟುಮಾಡುತ್ತದೆ.
ಉತ್ತರ:- ಆಲ್ಕೈಲ್ ಆರೀನ್

13) ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್‌ಸಂಯುಕ್ತಗಳನ್ನು ....ಎನ್ನುವರು
ಉತ್ತರ:- ಬಹುಹ್ಯಾಲೋಜನ್ ಸಂಯುಕ್ತಗಳು

14) ಫೀನಾಲ್ ಅನ್ನು ....ಎಂದು ಸಹ ಕರೆಯುತ್ತಾರೆ.
ಉತ್ತರ:- ಕಾರ್ಬಾಲಿಕ್ ಆಮ್ಲ

15) ಮಿಥೇನ್ ಮತ್ತು ಈಥೇನ್‌ಗಳಿಂದಾದ ಕ್ಲೋರೋಫ್ಲೂರೋಕಾರ್ಬನ್ ಸಂಯುಕ್ತಗಳನ್ನು ......ಗಳು ಎನ್ನುವರು.
ಉತ್ತರ:- ಫ್ರಿಯಾನ್

16) ಕೈಗಾರಿಕೆಯಲ್ಲಿ ಸಾಮಾನ್ಯವಾಗಿ ಬಳಸುವ ಫ್ರಿಯಾನ್ ಇದನ್ನು ....ಕ್ರಿಯೆಗೆ ಒಳಪಡಿಸಿ ತಯಾರಿಸುತ್ತಾರೆ
ಉತ್ತರ:- ಟೆಟ್ರಾಕ್ಲೊರೋ ಮಿಥೇನ್ ಸ್ವಾಟ್ಸ್

17) ಹೆಚ್ಚಿನ ಪ್ರಮಾಣದ ಫ್ರಿಯಾನ್‌ಗಳನ್ನು ಶೀತಕಗಳಲ್ಲಿ ಬಳಸಲಾಗುತ್ತದೆ. ಕ್ರಮೇಣವಾಗಿ ವಾತಾವರಣದ ಮೂಲಕ ಸ್ತರಗೋಳದಲ್ಲಿ ಪ್ರಸರಣಗೊಳ್ಳುತ್ತದೆ. ಸ್ತರಗೋಳದಲ್ಲಿ ಫ್ರೀಯಾನುಗಳು ಮುಕ್ತ ಮಾತೃಕೆ ಸರಪಣಿ ಕ್ರಿಯೆಯಗಳನ್ನು ಆರಂಭಿಸುವುದರಿಂದ ಸ್ವಾಭಾವಿಕ .... ಸಮತೋಲನವನ್ನು ಹಾಳುಮಾಡುತ್ತವೆ.
ಉತ್ತರ:- ಒಝೋನ್

18) ....ರಲ್ಲಿ ಕ್ಲೋರಿನೀಕರಣಗೊಂಡ ಪ್ರಪ್ರಥಮ ಸಾವಯವ ಕೀಟನಾಶಕ ಡಿ.ಡಿ.ಟಿಯನ್ನು ತಯಾರಿಸಲಾಯಿತು.
ಉತ್ತರ:- 1873

19) 1939ರಲ್ಲಿ ಸ್ವಿಟ್ಜರ್ಲೆಂಡ್ ಗೀಜಿ ಔಷಧಿ ತಯಾರಿಕಾ ಘಟಕದಲ್ಲಿ ಪರಿಣಾಮಕಾರಿ ಕೀಟನಾಶಕತೆಯನ್ನು ಡಿ.ಡಿ.ಟಿಯನ್ನು ಪೌಲ್ ಮುಲ್ಲರ್ ಕಂಡುಹಿಡಿದರು. ಈ ಆವಿಷ್ಕಾರಕ್ಕಾಗಿ ಪೌಲ್ ಮುಲ್ಲರ್ 1948ರಲ್ಲಿ ....ನೊಬೆಲ್ ಬಹುಮಾನವನ್ನು ಪಡೆದರು.
ಉತ್ತರ:- ವೈದ್ಯಕೀಯ ಮತ್ತು ಶಾರೀರಿಕ ವಿಜ್ಞಾನದ

20) ಡಿ.ಡಿ.ಟಿಯು ಪ್ರಾಣಿಗಳಲ್ಲಿ ಬೇಗ ಚಯಾಪಚಯಗೊಳ್ಳದೆ ....ಅಂಗಾಂಶಗಳಲ್ಲಿ ಸಂಗ್ರಹವಾಗುತ್ತ, ಸಂಚಯನಗೊಳ್ಳುತ್ತದೆ. ಹೀಗೆ ಆಹಾರದ ಮೂಲಕ ಡಿ.ಡಿ.ಟಿ ಸೇವನೆ ಮಾಡುತ್ತ ಹೋದರೆ ಪ್ರಾಣಿಗಳ ದೇಹದಲ್ಲಿ ನಿರಂತರವಾಗಿ ಶೇಖರಗೊಳ್ಳುತ್ತದೆ.
ಉತ್ತರ:- ಕೊಬ್ಬಿನ

ಪ್ರಜಾವಾಣಿ
ಮಂಗಳವಾರ • ಡಿಸೆಂಬರ್ 27, 2022

ಅಭಿವೃದ್ಧಿಗೊಳ್ಳುತ್ತಿರುವ ಕೆರೆಯ ನೋಟ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಹೆಬ್ಬಾಳ ಕಣಿವೆಯಲ್ಲಿ ಬಿಬಿಎಂಪಿ ವ್ಯಾಪ್ತಿಯ ಕೊನೆ ಕೆರೆ • 6 ತಿಂಗಳಲ್ಲಿ ಅಭಿವೃದ್ಧಿ

ಹೂವಿನಹಾಣೆ ಕೆರೆಗೆ ಮರುಜೀವ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಲುಷಿತಗೊಂಡಿದ್ದ 187 ಎಕರೆ ವಿಸ್ತೀರ್ಣದ ರಾಮಪುರ, ಮಾರಗೊಂಡನಹಳ್ಳಿ, ಹೂವಿನಹಾಣೆ ಕೆರೆ ಕೊನೆಗೂ ಪುನರುಜ್ಜೀವನಗೊಳ್ಳುತ್ತಿದ್ದು, ಕಾಮಗಾರಿ ಭರದಿಂದ ಸಾಗಿದೆ.

ಬೆಂಗಳೂರಿನ ಅಂಚಿನಲ್ಲಿರುವ ಈ ಕೆರೆ ಅತ್ಯಂತ ವಿಸ್ತಾರವಾಗಿದೆ. ಹೆಬ್ಬಾಳ ಕಣಿವೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೊನೆಯ ಕೆರೆ ಇದಾಗಿದೆ. ಕೆರೆ ತುಂಬಿದರೆ ಮುಂದೆ ಎಲೆಮಲ್ಲಪ್ಪ ಕೆರೆಗೆ ನೀರು ಹರಿಯಲಿದೆ. ಸುತ್ತಮುತ್ತಲ ಹತ್ತಾರು ಗ್ರಾಮಗಳಿಗೆ ಜೀವನಾಡಿಯಾಗಿದ್ದ ಈ ಜಲಕಾಯವು ನಗರ ಬೆಳೆದಂತೆಲ್ಲಾ ಕಲುಷಿತ ನೀರು ಹರಿದು ಹಾಳಾಗಿತ್ತು. ಕೊಳಚೆ ನೀರು ತುಂಬಿಕೊಂಡು ಇಡೀ ಕೆರೆಯ ನೀರು ಮಲಿನವಾಗಿತ್ತು. ಅಲ್ಲದೇ ಗಿಡಗಂಟಿಗಳು ಬೆಳೆದು ಕೆರೆ ಸ್ವರೂಪವೇ ಬದಲಾಗಿತ್ತು.

ಮಾರಗೊಂಡನಹಳ್ಳಿಯ ನಾಗರಾಜ ರೆಡ್ಡಿ ಅವರ ಸತತ ಹೋರಾಟದ ಫಲವಾಗಿ ಈಗ ಈ ಕೆರೆ ಅಭಿವೃದ್ಧಿ ಕಾಣುತ್ತಿದೆ. ಈ ಹಿಂದೆಯೇ ಒತ್ತುವರಿ ತೆರವುಗೊಳಿಸಿದ್ದ ಬಿಬಿಎಂಪಿ ಈಗ ₹35 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

ಕೆರೆಗೆ ಸೇರುತ್ತಿದ್ದ ಕೊಳಚೆ ನೀರು ತಪ್ಪಿಸಿ ಮಳೆ ನೀರನ್ನಷ್ಟೇ ಹರಿಸುವ ಕಾಮಗಾರಿಯನ್ನು ನಡೆಸುತ್ತಿದೆ. ಕೆರೆಗೆ ಶೌಚ ನೀರು ಹರಿದು ಬರಲು ಸಾಧ್ಯವಿರುವ ಎರಡೂ ಕಡೆಗಳಲ್ಲೂ ಒಳಚರಂಡಿ ನೀರಿನ ಮಾರ್ಗ ಬದಲಿಸಲಾಗುತ್ತಿದೆ. ವಿಸ್ತಾರವಾದ ಈ ಕೆರೆಯ ಸುತ್ತಲೂ ಪಾದಚಾರಿಗಳಿಗೆ ಮತ್ತು ವಾಯುವಿಹಾರಿಗಳಿಗೆ ಅನುಕೂಲ ಆಗುವಂತೆ ನಡಿಗೆ ಪಥ ನಿರ್ಮಿಸಲಾಗುತ್ತಿದೆ. ಕೆರೆಯಲ್ಲಿ ಎರಡು ಕಡೆ ದ್ವೀಪದ ರೀತಿಯ ಎತ್ತರದ ಪ್ರದೇಶಗಳಿದ್ದು, ಅವುಗಳನ್ನೂ ಅಭಿವೃದ್ಧಿಪಡಿಸಿ ಕೆರೆಯ ಸೌಂದರ್ಯ ಹೆಚ್ಚಿಸಲಾಗುತ್ತಿದೆ.

187 ಎಕರೆ ವಿಸ್ತೀರ್ಣದ ಕೆರೆಯಲ್ಲಿ 150 ಎಕರೆಯಷ್ಟು ಜಾಗದಲ್ಲಿ ನೀರು ನಿಲ್ಲಲು ಅವಕಾಶ ಮಾಡಲಾಗಿದೆ. ಉಳಿದ ಜಾಗದಲ್ಲಿ ನಡಿಗೆ ಪಥ ಸೇರಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್ ಶಿವಲಿಂಗಪ್ಪ ಸಾಹುಕಾರ್ ಮಾಹಿತಿ ನೀಡಿದರು.

‘ಒಂದು ವರ್ಷದಿಂದ ನಡೆಯುತ್ತಿರುವ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಕನಿಷ್ಠ ಆರು ತಿಂಗಳು ಕಾಲಾವಕಾಶ ಬೇಕಾಗಲಿದೆ. ಸತತ ಮಳೆ ಸುರಿದಿದ್ದರಿಂದ ಕಾಮಗಾರಿ ವಿಳಂಬವಾಗಿದೆ. ಸ್ವಲ್ಪ ಮಳೆ ಬಿದ್ದರೂ ಕೆರೆಯ ಒಡಲಿಗೆ ವಾಹನಗಳಾಗಲಿ, ಯಂತ್ರಗಳಾಗಳನ್ನಾಗಲಿ ಇಳಿಸಲು ಸಾಧ್ಯವಾಗುವುದಿಲ್ಲ. ಮಳೆ ಬಿಡುವು ನೀಡಿದರೆ 6 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ಅವರು ವಿವರಿಸಿದರು.

ಅಚಲ ಹೋರಾಟಕ್ಕೆ ದೊರೆತ ಪ್ರತಿಫಲ

ಪ್ರಧಾನ ಮಂತ್ರಿ ಕಚೇರಿ ತನಕ ಪತ್ರ ಬರೆದು ಕಚೇರಿಯಿಂದ ಅಲೆದಾಡಿದ ಸಮಾಜ ಸೇವಕರೊಬ್ಬರ ಪ್ರಯತ್ನದ ಫಲವಾಗಿ ಕೆರೆ ಈಗ ಮರುಜೀವ ಪಡೆದುಕೊಳ್ಳುತ್ತಿದೆ.

ಈ ಕೆರೆಯೊಂದಿಗೆ ಆಡಿ ಬೆಳೆದ ಮಾರಗೊಂಡನಹಳ್ಳಿ ನಾಗರಾಜ ರೆಡ್ಡಿ, ಕೆರೆ ಉಳಿಸುವ ಪ್ರಯತ್ನಕ್ಕೆ ಮುಂದಾದರು. ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ ಲಿಮಿಟೆಡ್‌ನಲ್ಲಿ (ಸ್ಯಾಂಡಲ್ ಸೋಪ್ ಫ್ಯಾಕ್ಟರಿ) ಉದ್ಯೋಗಿಯಾಗಿದ್ದ ಇವರು 2013ರಲ್ಲಿ ನಿವೃತ್ತಿಯಾದ ಬಳಿಕ ಕೆರೆ ಉಳಿಸುವ ಕೆಲಸಕ್ಕೇ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ತಹಶೀಲ್ದಾರ್ ಕಚೇರಿಯಿಂದ ಆರಂಭವಾಗಿ, ರಾಜ್ಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಕಚೇರಿಗಳನ್ನು ಸಂಪರ್ಕ ಮಾಡಿ ಕೆರೆ ಉಳಿಸುವ ಕಾಯಕವನ್ನು ನಾಗರಾಜ ರೆಡ್ಡಿ ಮಾಡಿದ್ದರು. ಕೆರೆಗೆ ಮರುಜೀವ ಕೊಡಿಸಲೇಬೇಕೆಂದು ಛಲ ತೊಟ್ಟಿದ್ದು, ಇವರು ಕಳೆದ ಒಂಬತ್ತು ವರ್ಷಗಳಿಂದ ಇದೇ ಕಾರ್ಯದಲ್ಲಿ ತೊಡಗಿದ್ದಾರೆ. ಅವರ ಶ್ರಮಕ್ಕೆ ಫಲ ದೊರೆತಿದ್ದು, ಕೆರೆ ಪುನರುಜ್ಜೀವನದ ಅವರ ಕನಸು ನನಸಾಗುವ ಹೊಸ್ತಿಲಿನಲ್ಲಿದೆ.

‘ನಾವು ಆಡಿ ಬೆಳೆದ ಕೆರೆ ನಮ್ಮ ಕಣ್ಣೆದುರಿಗೇ ಹಾಳಾಗಿರುವುದನ್ನು ಕಂಡು ಬೇಸರವಾಯಿತು. ಗ್ರಾಮ ಪಂಚಾಯಿತಿಯಿಂದ ಆದಿಯಾಗಿ ಸಂಬಂಧಿಸಿದ ಎಲ್ಲಾ ಕಚೇರಿಗಳಿಗೂ ಅರ್ಜಿಗಳನ್ನು ಹಿಡಿದು ಓಡಾಡಿದೆ. ಈಗ ಕೆರೆ ಪುನರುಜ್ಜೀವನಗೊಳ್ಳುತ್ತಿರುವುದು ಸಂತಸದ ವಿಷಯ. ರೈತನ ಮಗನಾಗಿ ಕೆರೆ ಉಳಿಸಿದ ಸಾರ್ಥಕ ಭಾವ ನನ್ನಲ್ಲಿ ಉಳಿದಿದೆ. ಪ್ರಕೃತಿಯನ್ನು ನಾವು ಸಂರಕ್ಷಿಸಿದರೆ ಪ್ರಕೃತಿ ನಮ್ಮನ್ನು ಸಂರಕ್ಷಿಸುತ್ತದೆ ಎಂಬುದನ್ನು ನಂಬಿದ್ದೇನೆ. ಆದ್ದರಿಂದಲೇ ಈ ಹೋರಾಟ ನಡೆಸಿದೆ’ ಎಂದು ನಾಗರಾಜ ರೆಡ್ಡಿ ಹೇಳುತ್ತಾರೆ.

ಕಲುಷಿತಗೊಂಡು ಹಾಳಾಗಿದ್ದ ಕೆರೆಯ ಚಿತ್ರ

ಅಂಕಿ–ಅಂಶ

187 ಎಕರೆ, ಕೆರೆಯ ವಿಸ್ತೀರ್ಣ

₹35 ಕೋಟಿ
ಕೆರೆ ಅಭಿವೃದ್ಧಿಗೆ ಬಿಬಿಎಂಪಿ ಮಾಡುತ್ತಿರುವ ವೆಚ್ಚ

150 ಎಕರೆ, ಕೆರೆಯಲ್ಲಿ ನೀರು ನಿಲ್ಲುವ ಪ್ರದೇಶ

ಇತಿಹಾಸದ ಮರು ದರ್ಶನ ಅಗತ್ಯ: ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಹಳಷ್ಟು ಸಂದರ್ಭಗಳಲ್ಲಿ ರಾಜಕೀಯ ಕರಪತ್ರಗಳ ರೀತಿಯಲ್ಲಿ ಇತಿಹಾಸ ರಚನೆಯಾಗಿದೆ. ಆದ್ದರಿಂದ ಇತಿಹಾಸದ ದರ್ಶನ ಮತ್ತು ಮರು ದರ್ಶನದ ಅಗತ್ಯವಿದೆ’ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

‘ಇತಿಹಾಸ ದರ್ಪಣ’ ಆಯೋಜಿಸಿದ್ದ ಡಾ. ವಿಜಯ್ ಪೂಣಚ್ಚ ತಂಬಂಡ ಅವರ ಮೂರು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಮಾಯಣ, ಮಹಾಭಾರತಗಳು ನಮ್ಮ ಇತಿಹಾಸ ಎಂದು ನಂಬಿದ್ದೇವೆ. ಆದರೆ, ನಿಜವಾಗಿಯೂ ರಾಮ ಇದ್ದನೇ, ರಾಮ ಅಲ್ಲಿ ಬಾಣ ಬಿಟ್ಟನೇ ಎಂಬ ರೀತಿಯ ಐತಿಹಾಸಿಕತೆಯ ಗೋಜಿಗೆ ನಾವು ಹೋಗಲಿಲ್ಲ’ ಎಂದರು.

‘ಪಾಶ್ಚಿಮಾತ್ಯರ ಪ್ರಭಾವದಿಂದ ಇತಿಹಾಸ ರಚನೆ ಮಾಡುವ ಕ್ರಮಗಳನ್ನು ಭಾರತದಲ್ಲೂ ಬೆಳಸಿಕೊಳ್ಳಲಾಯಿತು. ಇವು ಅನೇಕ ಸಂದರ್ಭಗಳಲ್ಲಿ ಇತಿಹಾಸಕ್ಕೆ ಹತ್ತಿರುವ ಆಗಿರುವುದಕ್ಕಿಂತ ರಾಜಕೀಯ ಪ್ರೇರಿತವೇ ಆಗಿರುತ್ತವೆ’ ಎಂದರು.

‘ಇಂದಿನ ಆರ್ಥಿಕ ನೀತಿ ನಿರೂಪಣೆ, ವಿದೇಶಾಂಗ ವ್ಯವಹಾರಗಳು, ರಾಜಕೀಯ, ಸಾಮಾಜಿಕ ಸೇರಿ ಎಲ್ಲಾ ಕ್ಷೇತ್ರದಲ್ಲಿಯೂ ಇತಿಹಾಸ ಪ್ರಭಾವ ಬೀರುತ್ತದೆ. ಈ ಎಲ್ಲಾ ಕಾರಣಗಳಿಂದ ಸತ್ಯಕ್ಕೆ ಹತ್ತಿರವಾದ ಇತಿಹಾಸದ ಮರು ದರ್ಶನ ಅಗತ್ಯವಿದೆ. ಅದನ್ನು ನೀಗಿಸುವ ನಿಟ್ಟಿನಲ್ಲಿ ಲೇಖಕ ವಿಜಯ್ ಪೂಣಚ್ಚ ಅವರು ಮಾಡಿರುವ ಪ್ರಯತ್ನ ಅರ್ಥಪೂರ್ಣ’ ಎಂದು ಹೇಳಿದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, ‘ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರ ನಾವು ಸ್ವಾತಂತ್ರ್ಯ ಹೋರಾಟಗಾರರನ್ನು ಹುಡುಕಿ ಸ್ಮರಿಸಿಕೊಳ್ಳುವ ಸ್ಥಿತಿ ಉಂಟಾಗಿರುವುದು ದುರಂತ. ಇದು ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅಪಮಾನ’ ಎಂದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಸಮ–ಕುಲಪತಿ ಪ್ರೊ. ಎಸ್.ಚಂದ್ರಶೇಖರ್ ಮಾತನಾಡಿ, ‘ವಸಾಹತು ಇತಿಹಾಸಕಾರರು ತಮ್ಮ ಎಲ್ಲಾ ವಿರೋಧಿ ಭಾರತೀಯ ರಾಜರುಗಳನ್ನು ಹೇಯವಾಗಿ ಚಿತ್ರಿಸುವ ಮೂಲಕ ಅವರ ತೇಜೋವಧೆ ಮಾಡುವ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಇತಿಹಾಸ ರಚನೆಯ ಸಂದರ್ಭದಲ್ಲಿ ವಸಾಹತು ಆಕರಗಳನ್ನು ಬಳಸಿಕೊಳ್ಳುವ ಕ್ರಮ ಒಂದೇ ಬಗೆಯದ್ದಾಗಿರಬೇಕೆ ವಿನಃ ಬೇಕಾದ್ದನ್ನು ಮಾತ್ರ ತೆಗೆದುಕೊಳ್ಳುವಂತಾಗಬಾರದು’ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ‘ಇತಿಹಾಸ ದರ್ಪಣ’ದ ಸಂಪಾದಕ ಡಾ. ಹಂ.ಗು.ರಾಜೇಶ್ ಉಪಸ್ಥಿತರಿದ್ದರು.



ಪುಸ್ತಕಗಳನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಬಿಡುಗಡೆ ಮಾಡಿದರು. ಚಾಣಕ್ಯ ವಿ.ವಿಯ ಸಂಶೋಧಕ ಪ್ರೊ.ಮತಿಘಟ್ಟ ಎಸ್.ಚೈತ್ರ, ಹಂಪಿ ಕನ್ನಡ ವಿ.ವಿ ಕುಲಪತಿ ಸ.ಚಿ ರಮೇಶ, ಸಂಸದರಾದ ಡಿ.ವಿ.ಸದಾನಂದಗೌಡ, ತೇಜಸ್ವಿ ಸೂರ್ಯ, ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿ.ವಿಯ ವಿಶ್ರಾಂತ ಸಮಕುಲಪತಿ ಎಸ್. ಚಂದ್ರಶೇಖರ್, ಕನ್ನಡ ವಿ.ವಿಯ ಚರಿತ್ರೆ ವಿಭಾಗದ ಮುಖ್ಯಸ್ಥ ಡಾ. ವಿಜಯ್ ಪೂಣಚ್ಚ ತಂಬಂಡ ಇದ್ದರು –ಪ್ರಜಾವಾಣಿ ಚಿತ್ರ

ಬಿಡುಗಡೆಯಾದ ಪುಸ್ತಕಗಳು

- **ಪುಸ್ತಕ:** ರಾಜೇಂದ್ರನಾಮೆ ಮರು ಓದು

ಪುಟ: 310
ಬೆಲೆ: ₹ 900
ಪ್ರಕಾಶಕರು: ಕನ್ನಡ ವಿ.ವಿ ಹಂಪಿ

- **ಪುಸ್ತಕ:** ಅಮರಸುಳ್ಯ ಸಂಗ್ರಾಮ 1837

ಪುಟ: 706
ಬೆಲೆ: ₹ 1,600
ಪ್ರಕಾಶಕರು: ಕನ್ನಡ ವಿ.ವಿ ಹಂಪಿ

- **ಪುಸ್ತಕ:** ಕಾಡುಮಕ್ಕಳ ಕೂಗು

ಪುಟ: 469
ಬೆಲೆ: ₹ 400
ಪ್ರಕಾಶಕರು: ವೇದಿಕೆ ಪ್ರಕಾಶನ

* ಮೂರು ಪುಸ್ತಕಗಳ ಲೇಖಕ: ವಿಜಯ್ ಪೂಣಚ್ಚ ತಂಬಂಡ

ಮೂವರು ಸಾಧಕರಿಗೆ ಶಂಕರ್‌ನಾಗ್ ಪ್ರಶಸ್ತಿ ಪ್ರದಾನ

ಮನಸು ಅರಳಿಸುವ ಕೆಲಸ ಆಗಲಿ: ಮಂಡ್ಯ ರಮೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಸಮಾಜದಲ್ಲಿ ಜನರ ಮನಸ್ಸು ಕೆರಳಿಸುವ ಕೆಲಸಗಳು ನಡೆಯುತ್ತಿವೆ. ಆದ್ದರಿಂದ ರಂಗಭೂಮಿ ಜನರ ಮನಸ್ಸು ಅರಳಿಸುವ ಕೆಲಸ ಮಾಡಬೇಕು’ ಎಂದು ನಟ ಮಂಡ್ಯ ರಮೇಶ್ ಸಲಹೆ ನೀಡಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ರಂಗಪಯಣ ಆಯೋಜಿಸಿದ್ದ ಶಂಕರ್‌ನಾಗ್ ನಾಟಕೋತ್ಸವದಲ್ಲಿ ಮೂವರು ಸಾಧಕರಿಗೆ ‘ಶಂಕರ್‌ನಾಗ್ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ರಂಗಭೂಮಿಯಿಂದ ಸೂಕ್ಷ್ಮ ಸಂವೇದನೆ ಉಳಿಯಲಿದೆ. ಮಕ್ಕಳನ್ನು ಹೆಚ್ಚುಹೆಚ್ಚು ನಾಟಕ ವೀಕ್ಷಿಸುವಂತೆ ಪ್ರೋತ್ಸಾಹಿಸಬೇಕಿದೆ. ಸೂಕ್ಷ್ಮ ಸಂವೇದನೆ ಕಲಿಸುವ ರಂಗಶಿಕ್ಷಣಕ್ಕೆ ಆದ್ಯತೆ ನೀಡಬೇಕಿದೆ’ ಎಂದರು.

‘ನಗರಗಳಲ್ಲಿ ಬರೀ ಕಟ್ಟಡ ನಿರ್ಮಿಸುವುದು ಅಲ್ಲ. ಪ್ರತಿ ಬಡಾವಣೆಯಲ್ಲೂ ನಾಟಕ ಶಾಲೆ ಇರಬೇಕು. ಬೇರೆ ಕ್ಷೇತ್ರದಂತಯೇ ಕಲಾವಿದರ ಕ್ಷೇತ್ರದಲ್ಲೂ ಹೊಟ್ಟೆಕಿಚ್ಚು ಹೆಚ್ಚಾಗಿದೆ. ಕೊರೊನಾಕ್ಕಿಂತಲೂ ಅಹಂ ಅಪಾಯಕಾರಿ’ ಎಂದು ಮಂಡ್ಯ ರಮೇಶ್ ಎಚ್ಚರಿಸಿದರು.

‘ಶಂಕರ್‌ನಾಗ್ ನಿಧನರಾಗಿ ಮೂರು ದಶಕ ಕಳೆದರೂ ಜನರ ಮನಸ್ಸಿನಲ್ಲಿ ಅವರು ಚಿರಸ್ಥಾಯಿಯಾಗಿದ್ದಾರೆ. ಅದೇ ಕಲಾವಿದನ ದೊಡ್ಡ ಸಾಧನೆ. ನಾನೂ ಶಂಕರ್‌ನಾಗ್ ಅಭಿಮಾನಿ. ಬರೀ ನಟನೇ ಮಾತ್ರವಲ್ಲದೆ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿ ಆಗಿದ್ದರು’ ಎಂದು ಹೇಳಿದರು.

ನಟ ರಮೇಶ್ ಭಟ್ ಮಾತನಾಡಿ, ‘ರವೀಂದ್ರ ಕಲಾಕ್ಷೇತ್ರದ ಸ್ಥಳದಲ್ಲೇ ಶಂಕರ್‌ನಾಗ್ ಅವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರಂಗ ಪ್ರಯೋಗ ನಡೆಸಿದ್ದರು. ಆರಂಭದಲ್ಲಿ ಅದಕ್ಕೆ ಅಪಸ್ವರ ಬಂದರೂ ಕ್ರಮೇಣ ಪ್ರೇಕ್ಷಕರು ಅದನ್ನು ಸ್ವೀಕರಿಸಿದ್ದರು. ಶಂಕರ್‌ನಾಗ್ ಅವರು ಎಲ್ಲ ಕಲಾವಿದರನ್ನೂ ಒಗ್ಗೂಡಿಸಿದ್ದರು’ ಎಂದರು.

‘ನಾನಾ ಕಾರಣಗಳಿಂದಾಗಿ 18 ವರ್ಷದಿಂದ ಈಚೆಗೆ ನಾನು ರಂಗಭೂಮಿಯಲ್ಲಿ ಸಕ್ರಿಯವಾಗಿಲ್ಲ. ನಗರದ ಹೃದಯ ಭಾಗಕ್ಕೆ ನಾಟಕ ವೀಕ್ಷಣೆಗೆಂದು ಬರುವ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗಿದೆ. ಬಡಾವಣೆಗಳಲ್ಲಿ ನಾಟಕೋತ್ಸವ ಆಯೋಜಿಸುವ ಬಗ್ಗೆಯೂ ಚಿಂತಿಸಬೇಕು’ ಎಂದು ಸಲಹೆ ನೀಡಿದರು.

ಕಲಾವಿದರಾದ ಸಿ.ಎಂ.ನರಸಿಂಹಮೂರ್ತಿ, ವೈ.ಜಿ.ಉಮಾ, ತಾಯಿ ಲೋಕೇಶ್ ಅವರಿಗೆ ಶಂಕರ್‌ನಾಗ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಂಗ ನಿರ್ದೇಶಕ ಕೆ.ಎಸ್.ಡಿ.ಎಲ್. ಚಂದ್ರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತ್‌ರಾವ್ ಪಾಟೀಲ್ ಇದ್ದರು.

ನಗರದಲ್ಲಿ ‘ರಂಗ ಪಯಣ’ ಆಯೋಜಿಸಿದ್ದ ಶಂಕರ್‌ನಾಗ್ ನಾಟಕೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕಲಾವಿದರಾದ ನರಸಿಂಹಮೂರ್ತಿ, ಉಮಾ ವೈ.ಜಿ. ಮತ್ತು ತಾಯಿ ಲೋಕೇಶ್ ಅವರಿಗೆ ಶಂಕರ್ ನಾಗ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಂಗ ಕಲಾವಿದೆ ನಯನ ಸೂಡ, ನಿರ್ದೇಶಕ ಕೆಎಸ್‌ಡಿಎಲ್ ಚಂದ್ರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತ ರಾವ್ ಪಾಟೀಲ್, ನಟ ಮಂಡ್ಯ ರಮೇಶ್, ನಟ ರಮೇಶ್ ಭಟ್ ಇದ್ದರು –ಪ್ರಜಾವಾಣಿ ಚಿತ್ರ

ಆರು ಹೊಸ ಖಾಸಗಿ ವಿ.ವಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದಲ್ಲಿ ಆರು ಹೊಸ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಮಸೂದೆಗಳಿಗೆ ಸೋಮವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬೆಂಗಳೂರಿನಲ್ಲಿ ಸಪ್ತಗಿರಿ ವಿಶ್ವವಿದ್ಯಾಲಯ, ಟಿ.ಜಾನ್ ವಿಶ್ವವಿದ್ಯಾಲಯ, ಆಚಾರ್ಯ ವಿಶ್ವವಿದ್ಯಾಲಯ, ರಾಜ್ಯ ಒಕ್ಕಲಿಗರ ಸಂಘದಿಂದ ವಿಶ್ವವಿದ್ಯಾಲಯ, ದಾವಣಗೆರೆಯಲ್ಲಿ ಜಿ.ಎಂ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ಕಿಷ್ಕಿಂದಾ ವಿಶ್ವವಿದ್ಯಾಲಯಗಳ ಸ್ಥಾಪನೆಯ ಮಸೂದೆ ಮಂಡನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಹೇಳಿದರು.

ಈ ಆರೂ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಇದೇ ಅಧಿವೇಶನದಲ್ಲಿ ಪ್ರತ್ಯೇಕ ಮಸೂದೆಗಳನ್ನು ಮಂಡಿಸಲಾಗುತ್ತದೆ.

ಅಧಿಕಾರಿಗಳಿಗೆ ಸಿಎಂ ಸೂಚನೆ: 2017 ಕ್ಕೂ ಮುನ್ನ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರಗಿದ್ದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿಗಳ ಖಾತೆಗಳನ್ನು ಇ–ಆಸ್ತಿ ತಂತ್ರಾಂಶದಲ್ಲಿ ದಾಖಲಿಸಿ, ‘ಇ–ಖಾತೆ’ ನೀಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಳೆದ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅನುಮೋದನೆ ನೀಡಲಾಗಿತ್ತು. ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಿದ ನಂತರ ಅವುಗಳ ಇ–ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ–ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ನೀಡಲು ಸಂಪುಟದಲ್ಲಿ ನಿರ್ಣಯಿಸಲಾಯಿತು. ಇದರಿಂದ ರಾಜ್ಯದ ಒಟ್ಟು 302 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 175 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ–ಖಾತೆ ನೀಡಿಕೆಗೆ ಇದ್ದ ಅಡೆ–ತಡೆಗಳು ಬಗೆಹರಿಯಲಿವೆ.

ಕೋವಿಡ್ ಹೆಸರಿನಲ್ಲಿ ಸಾರ್ವಜನಿಕರನ್ನು ಭಯಪಡಿಸುವ ರೀತಿಯಲ್ಲಿ ಅನಗತ್ಯ ನಿರ್ಬಂಧಗಳನ್ನು ಹೇರುವುದು ಬೇಡ. ಕೋವಿಡ್ ನಿಯಮಗಳ ಪಾಲನೆಗೆ ಆದ್ಯತೆ ನೀಡಬೇಕು ಎಂದೂ ಬೊಮ್ಮಾಯಿ ಸಭೆಯಲ್ಲಿ ಸಲಹೆ ನೀಡಿದರು ಎಂದು ಗೊತ್ತಾಗಿದೆ.

‘ಜಲ್ಲಿಕಲ್ಲು, ಜಲ್ಲಿಪುಡಿ: ಗುತ್ತಿಗೆದಾರರು ಧರಣಿ ಹಿಂಪಡೆಯಬೇಕು’

ಬೆಳಗಾವಿ: ‘ಜಲ್ಲಿಕಲ್ಲು, ಜಲ್ಲಿಪುಡಿ, ಎಂ- ಸ್ಯಾಂಡ್ ಇತರೆ ಗಣಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಗುತ್ತಿಗೆದಾರರ ಬೇಡಿಕೆಗಳು ಹಾಗೂ ಗಣಿ ಚಟುವಟಿಕೆ ಪ್ರಕ್ರಿಯೆಯಲ್ಲಿ ಸುಧಾರಣೆ ಕುರಿತಂತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಗಣಿ ಗುತ್ತಿಗೆದಾರರು ತಕ್ಷಣ ಧರಣಿ ಹಿಂಪಡೆದು ಸಹಕರಿಸಬೇಕು’ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಮನವಿ ಮಾಡಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ‘ಜಲ್ಲಿ ಕಲ್ಲು, ಜಲ್ಲಿ ಪುಡಿ ಇತರೆ ನಿರ್ಮಾಣ ಅಗತ್ಯ ಸಾಮಗ್ರಿ ತಯಾರಿಕೆಯ ಗುತ್ತಿಗೆದಾರರು ಕೆಲವು ದಿನಗಳಿಂದ ಧರಣಿ ನಡೆಸುತ್ತಿರುವುದರಿಂದ ಅಭಾವ ಸೃಷ್ಟಿಯಾಗಿದೆ. ನಿಯಮ ಉಲ್ಲಂಘನೆ ಇತರೆ ಕಾರಣಕ್ಕೆ 2017 ರಲ್ಲಿ ಗುತ್ತಿಗೆದಾರರಿಗೆ ಒಂದಕ್ಕೆ ಐದು ಪಟ್ಟಿನಂತೆ ₹ 6 ಸಾವಿರ ಕೋಟಿ ದಂಡ ವಿಧಿಸಲಾಗಿದೆ. ಇದಕ್ಕೆ ಗುತ್ತಿಗೆದಾರರ ಆಕ್ಷೇಪವಿದೆ’ ಎಂದರು.

‘ಗಣಿ ಇಲಾಖೆಯಲ್ಲಿ ಸುಧಾರಣೆಗೆ ಸಚಿವ ಸಂಪುಟ ಉಪಸಮಿತಿ ಈಗಾಗಲೇ ವರದಿ ಸಲ್ಲಿಸಿದೆ. ಡ್ರೋನ್ ಸರ್ವೆ ನಡೆಸಿ ಗಣಿ ಚಟುವಟಿಕೆ ನಡೆಸಲಾಗುತ್ತಿದ್ದು, ವೈಜ್ಞಾನಿಕ ಸರ್ವೆಯಿಂದಾಗಿ ರಾಜಸ್ವ ಮೊತ್ತ ₹6 ಸಾವಿರ ಕೋಟಿಯಿಂದ ₹10 ಸಾವಿರ ಕೋಟಿಗೆ ಏರಿಕೆಯಾಗುವ ನಿರೀಕ್ಷೆಯಿದೆ. ಹೀಗಿರುವಾಗ ಒಂದಕ್ಕಿಂತ 5 ಪಟ್ಟು ದಂಡ ವಿಧಿಸಲಾಗಿದೆ. ಹಲವು ಗುತ್ತಿಗೆ ಪರವಾನಗಿ ಅವಧಿ ಮುಕ್ತಾಯವಾಗಿದೆ. ದಂಡ ಮೊತ್ತವನ್ನು 1:1 ಅನುಪಾತದಲ್ಲಿ ವಿಧಿಸಲು ಸರ್ಕಾರ ಪರಿಶೀಲಿಸಬೇಕು. ಈ ಬಗ್ಗೆ ಮೂರೂ ಪಕ್ಷಗಳ ಸಭೆ ನಡೆಸಿದರೆ ಸಮಸ್ಯೆ ಪರಿಹಾರ ಆಗಬಹುದು’ ಎಂದರು.

‘ನಾನು ಸಂಪುಟ ಉಪಸಮಿತಿ ಅಧ್ಯಕ್ಷನಾಗಿದ್ದು, ವಿಸ್ತೃತವಾಗಿ ಚರ್ಚಿಸಲಾಗಿದೆ. 1:5 ದಂಡ ವಿಧಿಸಿರುವುದರಿಂದ ₹5ಸಾವಿರ ಕೋಟಿಯಿಂದ ₹6 ಕೋಟಿ ಆದಾಯ ಸಂಗ್ರಹವಾಗಲಿದೆ. ಹರಾಜು ದರ ಹಾಗೂ ಗುತ್ತಿಗೆ ದರದಲ್ಲಿ ವ್ಯತ್ಯಾಸವಿದ್ದು, ಈ ಬಗ್ಗೆಯೂ ಚರ್ಚಿಸಲಾಗಿದೆ. ಶೀಘ್ರ ಸಭೆ ಕರೆದು ಸಮಾಲೋಚಿಸಲಾಗುವುದು’ ಎಂದರು.

ಬೆಳಗಾವಿಯ ಸುವರ್ಣ ವಿಧಾನಸೌಧದ ಬಳಿ ಇರುವ ಬಸ್ತವಾಡದಲ್ಲಿ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದವರು ಸೋಮವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು. – ಪ್ರಜಾವಾಣಿ ಚಿತ್ರ

ಪಿಂಚಣಿ ವಂಚಿತ ನೌಕರರಿಂದ ಅರೆಬೆತ್ತಲೆ ಪ್ರತಿಭಟನೆ

ಬೆಳಗಾವಿ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದವರು ಸುವರ್ಣ ವಿಧಾನಸೌಧ ಬಳಿ ಇರುವ ಬಸ್ತವಾಡದಲ್ಲಿ ಸೋಮವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ರಾಜ್ಯದ ಖಾಸಗಿ ಶಾಲೆಗಳಲ್ಲಿ 2006ರ ಏ.1ರ ಮುನ್ನ ನೇಮಕಗೊಂಡಿದ್ದ ನೌಕರರನ್ನು ನಂತರ ಅನುದಾನಕ್ಕೆ ಒಳಪಡಿಸಲಾಗಿದೆ. ಅವರು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ್ದ ಸೇವೆಯನ್ನೂ ಪರಿಗಣಿಸಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು. 2006ರ ನಂತರ ನೇಮಕಗೊಂಡವರಿಗೂ ಒಪಿಎಸ್ ಜಾರಿಯಾಗಬೇಕು. ಸರ್ಕಾರಿ ನೌಕರರಿಗೆ ನೀಡುತ್ತಿರುವ ವೈದ್ಯಕೀಯ ಸೌಲಭ್ಯಗಳನ್ನು ಅನುದಾನಿತ ನೌಕರರಿಗೂ ವಿಸ್ತರಿಸಬೇಕು’ ಎಂದರು.

ವಿಧಾನ ಪರಿಷತ್ ಸದಸ್ಯರಾದ ಹನುಮಂತ ನಿರಾಣಿ, ಎಸ್.ವಿ.ಸಂಕನೂರ, ಆಯನೂರು ಮಂಜುನಾಥ ಪ್ರತಿಭಟನಾ ಸ್ಥಳಕ್ಕಾಗಮಿಸಿ, ನೌಕರರ ಅಹವಾಲು ಆಲಿಸಿದರು. ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಜಿ.ಹನುಮಂತಯ್ಯ, ಪ್ರಧಾನ ಕಾರ್ಯದರ್ಶಿ ಮುತ್ತುರಾಜ ಮತ್ತಿಕೊಪ್ಪ, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಎಂ.ಮಾಮೂಲದಾರ ಇದ್ದರು.

ಪರಿಷತ್ ಸದಸ್ಯರಿಗೆ ತಲಾ ₹ 25 ಕೋಟಿ ಅನುದಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನ ಪರಿಷತ್‌ನ ಎಲ್ಲ ಸದಸ್ಯರಿಗೂ ಅಭಿವೃದ್ಧಿ ಕಾಮಗಾರಿಗಳಿಗಾಗಿ ತಲಾ ₹ 25 ಕೋಟಿ ಅನುದಾನ ನೀಡಬೇಕು ಎಂದು ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ ವಿಧಾನ ಪರಿಷತ್‌ನಲ್ಲಿ ಸೋಮವಾರ ಒತ್ತಾಯಿಸಿದರು.

ಪ್ರಶ್ನೋತ್ತರ ಕಲಾಪದ ಬಳಿಕ ವಿಷಯ ಪ್ರಸ್ತಾಪಿಸಿದ ಅವರು, ‘ವಿಧಾನ ಸಭೆಯ ಸದಸ್ಯರಿಗೆ ತಲಾ ₹ 50 ಕೋಟಿಯವರೆಗೂ ಅನುದಾನ ನೀಡಲಾಗಿದೆ. ಆದರೆ, ವಿಧಾನ ಪರಿಷತ್ ಸದಸ್ಯರಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಯಾವುದೇ ಅನುದಾನ ಒದಗಿಸಿಲ್ಲ. ಇದರಿಂದ ಜನರ ಪ್ರಶ್ನೆಗಳಿಗೆ ಉತ್ತರ ನೀಡುವುದು ಕಷ್ಟವಾಗುತ್ತಿದೆ’ ಎಂದರು.

‘ಸ್ಥಳೀಯ ಸಂಸ್ಥೆಗಳ ಸದಸ್ಯರಿಂದ ಆಯ್ಕೆಯಾಗಿ ಬಂದ 25 ಸದಸ್ಯರು ವಿಧಾನ ಪರಿಷತ್‌ನಲ್ಲಿದ್ದೇವೆ. ಜನರ ಬೇಡಿಕೆಗಳಿಗೆ ಸ್ಪಂದಿಸಲು ಎಲ್ಲ ಪಕ್ಷಗಳ ಸದಸ್ಯರಿಗೂ ಸಾಧ್ಯವಾಗುತ್ತಿಲ್ಲ. ಕನಿಷ್ಠ ₹ 25 ಕೋಟಿ ಅನುದಾನ ನೀಡಬೇಕು’ ಎಂದು ವಿಧಾನ ಪರಿಷತ್‌ನ 58 ಸದಸ್ಯರು ಸಹಿ ಮಾಡಿರುವ ಮನವಿಯನ್ನು ಪ್ರದರ್ಶಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕೂಡ ಈ ಬೇಡಿಕೆಯನ್ನು ಬೆಂಬಲಿಸಿದರು. ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸಭೆ ನಡೆಸಿ ನಿರ್ಧಾರ ಕೈಗೊಳ್ಳುವಂತೆ ಸಭಾಪತಿ ಬಸವರಾಜ ಹೊರಟ್ಟಿ ಸರ್ಕಾರಕ್ಕೆ ಸೂಚಿಸಿದರು.

ಎಸ್.ಎಸ್. ಮಲ್ಲಿಕಾರ್ಜುನ್ ಬಂಧನಕ್ಕೆ ಆಗ್ರಹ

ಬೆಳಗಾವಿ: ಫಾರ್ಮ್‌ಹೌಸ್‌ನಲ್ಲಿ ವನ್ಯಜೀವಿಗಳು ಪತ್ತೆಯಾಗಿರುವ ಪ್ರಕರಣದಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ದಾವಣಗೆರೆ ಜಿಲ್ಲಾ ಘಟಕದ ಕಾರ್ಯಕರ್ತರು ಸುವರ್ಣಸೌಧದ ಪ್ರವೇಶ ದ್ವಾರದ ಮೆಟ್ಟಿಲುಗಳ ಮುಂದೆ ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಕಾಡುಗಳ್ಳ ವೀರಪ್ಪನ್ ಹೋಲುವ ಚಿತ್ರದ ಮಾದರಿಯಲ್ಲೇ ಮಲ್ಲಿಕಾರ್ಜುನ್ ಅವರ ಭಾವಚಿತ್ರದ ಫಲಕಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಇಲಾಖೆ ಅನುಮತಿ ಪಡೆಯದೆ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಬಿಜೆಪಿ ಮುಖಂಡ ಯಶವಂತರಾವ್ ಜಾಧವ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ‘ವನ್ಯಜೀವಿಗಳನ್ನು ಹತ್ಯೆ ಮಾಡಿರುವ ಮಲ್ಲಿಕಾರ್ಜುನ್ ಅವರನ್ನು ತಕ್ಷಣವೇ ಬಂಧಿಸಬೇಕು’ ಎಂದು ಘೋಷಣೆಗಳನ್ನು ಹಾಕಿದರು.

ಹಿಂದೂ ಸಮಾಜದ ಜಾಗೃತಿಯೇ ‘ಅಚ್ಛೇ ದಿನ್’

ಶಿವಮೊಗ್ಗ: ‘ದೇಶಕ್ಕೆ ಅಚ್ಛೇ ದಿನ್ (ಒಳ್ಳೆಯ ದಿನ) ಎಲ್ಲಿ ಬಂದಿದೆ ಎಂದು ಕೆಲವರು ಪ್ರಶ್ನಿಸುತ್ತಾರೆ. ಸಂಸತ್ತಿನಲ್ಲಿ ದೇಶ ಹಾಗೂ ಧರ್ಮದ ಬಗ್ಗೆ ನಡೆಯುತ್ತಿರುವ ಚರ್ಚೆ, ಗಡಿಗಳ ಸುರಕ್ಷತೆ ಹಾಗೂ ಅಯೋಧ್ಯೆ ಸೇರಿ ಹಿಂದೂ ಶ್ರದ್ಧಾ ಕೇಂದ್ರಗಳ ಪರ ದೊರೆತಿರುವ ನ್ಯಾಯ ಇವೆಲ್ಲವೂ ದೇಶಕ್ಕೆ ಅಚ್ಛೇ ದಿನ್ ಬಂದಿರುವ ದ್ಯೋತಕ’ ಎಂದು ಭೋಪಾಲ್‌ನ ಬಿಜೆಪಿ ಸಂಸದೆ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಹಿಂದೂ ಜಾಗರಣಾ ವೇದಿಕೆ ಕರ್ನಾಟಕ ದಕ್ಷಿಣ ಪ್ರಾಂತ್ಯದ ಮೂರನೇ ತ್ರೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಮುಂದೆ ಎಂಥ ಸಂದರ್ಭ ಬರುತ್ತದೋ ಗೊತ್ತಿಲ್ಲ. ಆತ್ಮರಕ್ಷಣೆಗಾಗಿ ನಾವು ದಾಳಿ ಮಾಡಬೇಕಾಗುತ್ತದೆ. ನಮ್ಮ ಹೆಣ್ಣು ಮಕ್ಕಳ ಸಂರಕ್ಷಣೆಗಾಗಿ ತರಕಾರಿ ಕತ್ತರಿಸುವ ಚಾಕುಗಳನ್ನು ಇನ್ನಷ್ಟು ಹರಿತವಾಗಿಸಿ ಸಿದ್ಧವಾಗಿಟ್ಟುಕೊಳ್ಳಿ’ ಎಂದರು.

ಸಂಕ್ಷಿಪ್ತ ಸುದ್ದಿ

₹400 ಕೋಟಿ ಅನುದಾನ: ಸಿ.ಎಂ ಬೊಮ್ಮಾಯಿ

ಮುಗಳಖೋಡ(ಬೆಳಗಾವಿ ಜಿಲ್ಲೆ): ‘ಮಾಳಿ/ಮಾಲಗಾರದಂತಹ ಸಣ್ಣ ವೃತ್ತಿಪರ ಸಮುದಾಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹400 ಕೋಟಿ ಅನುದಾನ ಮೀಸಲಿಡಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದಲ್ಲಿ ಸೋಮವಾರ ನಡೆದ ಅಖಿಲ ಕರ್ನಾಟಕ ಮಾಳಿ,ಮಾಲಗಾರ ಸಮುದಾಯದ ರಾಜ್ಯಮಟ್ಟದ ದ್ವಿತೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಕಂಬಾರ, ಕುಂಬಾರ, ಪತ್ತಾರ, ಕ್ಷೌರಿಕ, ನೇಕಾರ ಸೇರಿದಂತೆ ಹಲವು ಸಣ್ಣ ಸಮಯದಾಯಗಳು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ. ಸರ್ಕಾರ ಸದಾ ನಿಮ್ಮೊಂದಿಗೆ ಇರುತ್ತದೆ. ಈ ಸಮುದಾಯಗಳಿಗೆ ಮುಂದಿನ ಬಜೆಟ್‌ನಲ್ಲಿ ಮಾರುಕಟ್ಟೆ ಸೌಲಭ್ಯ ಒದಗಿಸಲಾಗುವುದು. ಮಾಳಿ/ಮಾಲಗಾರ ಸಮುದಾಯಗಳ ಅಭಿವೃದ್ಧಿಗೆ ನಿಗಮ ಸ್ಥಾಪಿಸಲಾಗುವುದು. ಅದರ ಮೂಲಕ ಮಕ್ಕಳಿಗೆ ಉತ್ತಮ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ಯುವಕರಿಗೆ ಸ್ವಯಂ ಉದ್ಯೋಗ ನೀಡಲಾಗುವುದು’ ಎಂದು ತಿಳಿಸಿದರು.

ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ, ‘ತರಕಾರಿ ಬೆಳೆಗಾರರು ಹಾಗೂ ಮಾರಾಟಗಾರರಾದ ಮಾಳಿ ಸಮುದಾಯದವರು ಇಲ್ಲದಿದ್ದರೆ, ನಿತ್ಯ ಜೀವನ ನಡೆಸುವುದು ಕಷ್ಟ’ ಎಂದರು.

ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ತೇರದಾಳ ಶಾಸಕ ಸಿದ್ದು ಸವದಿ, ಬಿಜೆಪಿ ಮುಖಂಡ ಮಹಾಂತೇಶ ಕವಟಗಿಮಠ ಮಾತನಾಡಿದರು. ಮುಗಳಖೋಡ ಜಿಡಗಾ ಮಠದ ಪೀಠಾಧಿಪತಿ ಡಾ.ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಡಾ.ಸಿ.ಬಿ.ಕುಲಿಗೋಡ ಅಧ್ಯಕ್ಷತೆ ವಹಿಸಿದ್ದರು.

ಶಾಸಕರ ಖರೀದಿ ಪ್ರಕರಣ: ಸಿಬಿಐಗೆ ವರ್ಗ

ಹೈದರಾಬಾದ್: ಬಿಆರ್‌ಎಸ್ ಪಕ್ಷದ ಶಾಸಕರ ಖರೀದಿ ಯತ್ನ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ತೆಲಂಗಾಣ ಹೈಕೋರ್ಟ್ ಸೋಮವಾರ ಆದೇಶಿಸಿದೆ. ತೆಲಂಗಾಣ ಸರ್ಕಾರ ನೇಮಿಸಿದ್ದ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಹೈಕೋರ್ಟ್ ರದ್ದುಪಡಿಸಿದ್ದು, ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರಿಗೆ ಹಿನ್ನಡೆಯಾಗಿದೆ. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ಸರ್ಕಾರ ನಿರ್ಧರಿಸಿದೆ.

ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲು ಕೋರಿ ಮೂವರು ಆರೋಪಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ಹೈಕೋರ್ಟ್ ವಿಚಾರಣೆ ನಡೆಸಿತು. ಪ್ರಕರಣದಲ್ಲಿ ಹೆಸರು ಕೇಳಿಬಂದಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿಚಾರಣೆಗೆ ಎಸ್‌ಐಟಿ ಇತ್ತೀಚೆಗೆ ಸಮನ್ಸ್ ನೀಡಿತ್ತು.

‘ಬೆಂಗಳೂರು ಹಾಲು ಒಕ್ಕೂಟದಲ್ಲಿ ಅಕ್ರಮ ನಡೆದಿಲ್ಲ’

ಬೆಳಗಾವಿ: ‘ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಲ್ಲಿನ ನೇಮಕಾತಿ ಮತ್ತು ಕಾಮಗಾರಿಗಳಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಪ್ರತಿಪಾದಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ಟಿ.ಎ. ಶರವಣ ಮತ್ತು ಕೆ.ಎ. ತಿಪ್ಪೇಸ್ವಾಮಿ ಅವರು ಸೋಮವಾರ ಮಂಡಿಸಿದ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ‘ಇಲಾಖೆಯಲ್ಲಿ ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮಗಳು ನಡೆದಿವೆ ಎಂದು ಲೋಕಸಭಾ ಸದಸ್ಯರೊಬ್ಬರು ದೂರು ಸಲ್ಲಿಸಿದ್ದರು. ಈ ಬಗ್ಗೆ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ ಅವರಿಂದ ತನಿಖೆ ನಡೆಸಲಾಗಿದೆ’ ಎಂದು ವಿವರಿಸಿದರು.

‘ಕಾನೂನು ಬದ್ಧವಾಗಿ ನೇಮಕಾತಿಗಳು ನಡೆದಿವೆ. ತನಿಖಾ ವರದಿಯನ್ನು ಸದಸ್ಯರಿಗೂ ನೀಡಲಾಗುವುದು. ಕಾಮಗಾರಿಗಳ ಬಗ್ಗೆ ನಿರ್ದಿಷ್ಟ ಪ್ರಕರಣಗಳ ಬಗ್ಗೆ ಯಾವುದೇ ರೀತಿಯ ದೂರುಗಳು ಬಂದಿಲ್ಲ’ ಎಂದರು.

ಚುಕ್ಕಿ ಚಿತ್ರಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ

ಎಲ್ಲ ಸಮುದಾಯಗಳ ಪ್ರತಿನಿಧಿ ಡಾ.ರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸಮುದಾಯಗಳೂ ಡಾ.ರಾಜ್‌ಕುಮಾರ್ ಅವರನ್ನು ತಮ್ಮ ಪ್ರತಿನಿಧಿಯ ಸ್ಥಾನದಲ್ಲಿ ಕಾಣುವ ಕಾರಣಕ್ಕಾಗಿಯೇ ಅಗಲಿಕೆಯ ನಂತರವೂ ಅವರ ಅಭಿಮಾನಿಗಳ ಸಂಖ್ಯೆ ಕರಗಿಲ್ಲ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರತಿಪಾದಿಸಿದರು.

ರಾಯಚೂರಿನ ಮ್ಯಾದಾರ್ ಲಲಿತ ಕಲಾ ಪ್ರತಿಷ್ಠಾನ, ನಾಡೋಜ ಡಾ.ಬರಗೂರು ಪ್ರತಿಷ್ಠಾನ ಸೋಮವಾರ ಹಮ್ಮಿಕೊಂಡಿದ್ದ ಕಲಾವಿದ ಎಚ್.ಎಚ್. ಮ್ಯಾದಾರ್ ಚಿತ್ರಿಸಿರುವ ಡಾ.ರಾಜ್‌ಕುಮಾರ್ ಚುಕ್ಕಿ ಚಿತ್ರಗಳ ಪ್ರದರ್ಶನ ಮತ್ತು ‘ಅಮೂಲ್ಯ ಮುತ್ತು’ ಚುಕ್ಕಿ ಚಿತ್ರ ಸಂಪುಟ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.



ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಎಚ್‌.ಎಚ್‌. ಮ್ಯಾದಾರ್ ಅವರು ಚಿತ್ರಿಸಿದ ‘ಡಾ. ರಾಜ್‌ಕುಮಾರ್ ಅವರ ಚುಕ್ಕಿ ಚಿತ್ರಗಳ ಪ್ರದರ್ಶನವನ್ನು ರಾಘವೇಂದ್ರ ರಾಜ್‌ಕುಮಾರ್, ಬರಗೂರು ರಾಮಚಂದ್ರಪ್ಪ, ಹಂಸಲೇಖ ವೀಕ್ಷಿಸಿದರು. —ಪ್ರಜಾವಾಣಿ ಚಿತ್ರ.

ರಾಜ್ ಅವರದು ಅಭಿನಯದ ಪ್ರಭುತ್ವತೆ, ಸಾರ್ವಜನಿಕ ವಿಶ್ವಾಸಾರ್ಹತೆ, ಸಾಮಾಜಿಕ ಕ್ರಿಯಾಶೀಲತೆಗಳಿಂದ ಕೂಡಿದ ಮೇರು ವ್ಯಕ್ತಿತ್ವ. ಅವರ ಒಳಗಿನ ಕಲಾವಿದನಿಗೆ ತಕ್ಕ ವೈವಿಧ್ಯಮಯ ಪಾತ್ರಗಳು ಒಲಿದುಬಂದವು. ಸಿಕ್ಕ ಪಾತ್ರಗಳಿಗೆಜೀವತುಂಬಿದರು.ಸರಳತೆ,ವಿನಯವಂತಿಕೆ, ಹಿರಿಯ ಬಗೆಗಿನ ಅವರ ಗೌರವ, ಹೃದಯವಂತಿಕೆ, ಸಮುದಾಯದ ಕಷ್ಟಗಳಿಗೆ ಮಿಡಿಯುತ್ತಿದ್ದ ಅವರ ಗುಣ ಅವರನ್ನು ಆಕಾಶದ ಎತ್ತರಕ್ಕೆ ತೆಗೆದುಕೊಂಡುಹೋದವು ಎಂದರು.

ಗೋಕಾಕ್ ಚಳವಳಿಯಲ್ಲಿ ಅವರು ನೇತೃತ್ವ ವಹಿಸಿದ್ದರಿಂದ ಹೋರಾಟ ಹೊಸ ಸ್ವರೂಪ ಪಡೆಯಿತು. ರಾಜ್ಯದ ಎಲ್ಲೆಡೆ ಸುತ್ತಿದರು. ಹಾಗೆ ಸುತ್ತುವಾಗಲೂ ಹಿರಿಯರನ್ನು ಕಂಡರೆ ಕಾರಿನಿಂದ ಇಳಿದು ನಮಿಸುತ್ತಿದ್ದರು. ರಾಜ್ಯದ ಬಹುತೇಕ ರಂಗಮಂದಿರಗಳಿಗೆ ಅವರು ಹಾಡು, ಸಂಗೀತ ಕಾರ್ಯಕ್ರಮಗಳ ಮೂಲಕ ಹಣ ದೊರಕಿಸಿದರು. ಪೊಲೀಸರ ಕಲ್ಯಾಣಕ್ಕೆ ₹ 67 ಲಕ್ಷ ಹೊಂದಿಸಿದ್ದರು. ಶಕ್ತಿಧಾಮಕ್ಕೆ ₹ 45 ಲಕ್ಷ ನೀಡಿದರು. ಕಷ್ಟದಲ್ಲಿನ ಜನರ ಕಂಡು ಮರುಗುತ್ತಿದ್ದರು ಎಂದು ಸ್ಮರಿಸಿದರು.

ನಟ ರಾಘವೇಂದ್ರ ರಾಜ್‌ಕುಮಾರ್ ಚುಕ್ಕಿ ಚಿತ್ರ ಸಂಪುಟ ಬಿಡುಗಡೆ ಮಾಡಿದರು. ಚಿತ್ರ ಕಲಾವಿದ ಪ.ಸ.ಕುಮಾರ್ ಪ್ರದರ್ಶನ ಉದ್ಘಾಟಿಸಿದರು. ಸಂಗೀತ ನಿರ್ದೇಶಕ ಹಂಸಲೇಖ ಅಧ್ಯಕ್ಷತೆ ವಹಿಸಿದ್ದರು.

ಅಧಿಸೂಚನೆ ಹೊರಡಿಸಿದ ಸರ್ಕಾರ • ಕಠಿಣ ನಿಯಮಗಳಿಗೆ ತಿಲಾಂಜಲಿ

ಶಿಕ್ಷಕರ ವರ್ಗಾವಣೆ ಕಾಯ್ದೆ ಅಧಿಕೃತ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020 ಜಾರಿಗೊಳಿಸಿ, ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ. ಡಿ.28ರಿಂದಲೇ ವರ್ಗಾವಣೆ ಪ್ರಕ್ರಿಯೆ ಆರಂಭವಾಗಲಿದ್ದು, ಫೆ.28ಕ್ಕೆ ಮುಕ್ತಾಯವಾಗಲಿವೆ.

ಹಲವು ವರ್ಷಗಳಿಂದ ಬಿಗಿಯಾದ ನೀತಿಗೆ ಒಳಪಟ್ಟಿದ್ದ ಶಿಕ್ಷಕರ ವರ್ಗಾವಣೆ ನಿಯಮಗಳು ಸರಳೀಕರಣವಾಗಿದ್ದು, ಶಿಕ್ಷಕಸ್ನೇಹಿ ವರ್ಗಾವಣೆಗೆ ಅಧಿಕೃತ ಮುದ್ರೆ ಬಿದ್ದಿದೆ. ವರ್ಗಾವಣಾ ವೇಳಾ ಪಟ್ಟಿಯೂ ಬಿಡುಗಡೆಯಾಗಿದೆ.

ಕಾಯ್ದೆ ತಿದ್ದುಪಡಿಯ ಕರಡು ಅಧಿಸೂಚನೆಗೆ ಸಲ್ಲಿಕೆಯಾದ ಪ್ರಮುಖ ಆಕ್ಷೇಪಣೆಗಳನ್ನೂ ಮನ್ನಣೆ ನೀಡಿರುವ ಸರ್ಕಾರ, 10ರಿಂದ 20 ವರ್ಷ ಸೇವೆ ಸಲ್ಲಿಸಿ ಪದೋನ್ನತಿ ಪಡೆದ ಶಿಕ್ಷಕರ ಕೋರಿಕೆಯಂತೆ ಸೇವಾಅಂಕಗಳನ್ನು ನೀಡಿದೆ. ಗ್ರಾಮೀಣ ಪ್ರದೇಶದಲ್ಲಿ (ಸಿ ವಲಯ) ಸೇವೆ ಸಲ್ಲಿಸಿದವರಿಗೆ ಪ್ರತಿ ವರ್ಷಕ್ಕೆ ಮೂರು ಅಂಕಗಳು, ಅರೆನಗರದ (ಬಿ ವಲಯ) ಶಿಕ್ಷಕರಿಗೆ ಎರಡು ಅಂಕಗಳು ಹಾಗೂ ನಗರ ಪ್ರದೇಶಗಳ (ಎ ವಲಯ) ಶಿಕ್ಷಕರಿಗೆ ಒಂದು ಸೇವಾ ಅಂಕಗಳನ್ನು ನೀಡಲು ಸಮ್ಮತಿಸಲಾಗಿದೆ.

28ರಿಂದಲೇ ವರ್ಗಾವಣೆ ಆರಂಭ

ಹೆಚ್ಚುವರಿ ಶಿಕ್ಷಕರ ಕರಡು ಪಟ್ಟಿಯನ್ನು ಡಿ.28ರಂದು ಪ್ರಕಟಿಸಲಾಗುತ್ತಿದೆ. ಜ.12 ಖಾಲಿ ಹುದ್ದೆಗಳ ಪಟ್ಟಿ ಪ್ರಕಟ, ಜ. 17 ವಲಯ ಹಂತದಲ್ಲಿ ಕೌನ್ಸೆಲಿಂಗ್ ಆರಂಭವಾಗಲಿವೆ. ಜ.6ರಿಂದ ತಾಂತ್ರಿಕ ಸಹಾಯಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಿ, 24ರಂದು ಮುಕ್ತಾಯವಾಗಲಿವೆ. ಸಾಮಾನ್ಯ ಕೋರಿಕೆ ವರ್ಗಾವಣೆಗಳು ಜ.2ರಿಂದ ಆರಂಭವಾಗಿ ಫೆ.4ಕ್ಕೆ ಮುಕ್ತಾಯವಾಗಲಿವೆ. ಜ.6ರಿಂದ ಪ್ರಾಥಮಿಕ ಶಿಕ್ಷಕರ ಹಾಗೂ 9ರಿಂದ ಪ್ರೌಢಶಾಲಾ ಶಿಕ್ಷಕರ ಜಿಲ್ಲಾ ಹಂತದ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಲಿದ್ದು, ಫೆ. 13ಕ್ಕೆ ಪೂರ್ಣಗೊಳ್ಳಲಿವೆ. ವಿಭಾಗೀಯ ಹಂತದ ವರ್ಗಾವಣೆಗಳು ಪ್ರಾಥಮಿಕ ಶಿಕ್ಷಕರಿಗೆ ಫೆ.14ರಿಂದ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಫೆ.18ರಿಂದ ಆರಂಭವಾಗಲಿವೆ. ಅಂತರ್ ವಿಭಾಗೀಯ ವರ್ಗಾವಣೆಗಳು ಫೆ. 21ರಿಂದ ಆರಂಭವಾಗಿ 28ಕ್ಕೆ ಪೂರ್ಣಗೊಳ್ಳಲಿವೆ.

ಯಾವುದೇ ಒಂದು ಘಟಕ ಹಾಗೂ ವೃಂದದಲ್ಲಿ ಕನಿಷ್ಠ 10 ವರ್ಷ ಅಥವಾ ಎಲ್ಲ ವೃಂದಗಳು ಸೇರಿ 15 ವರ್ಷ ಕೆಲಸ ಮಾಡಿದ ಶಿಕ್ಷಕರಿಗೆ ಶೇ 25ರಷ್ಟು ಮಿತಿಯ ಒಳಗೆ ಖಾಲಿ ಹುದ್ದೆಗಳಿರುವ ವಲಯಗಳಿಗೆ ವರ್ಗಾವಣೆ ಮಾಡಲು ಅವಕಾಶ ಇರುತ್ತದೆ. ವಲಯಗಳ ವರ್ಗಾವಣೆ ಪೂರ್ಣಗೊಂಡ ನಂತರ ಹೊರ ಜಿಲ್ಲೆಗಳ ವರ್ಗಾವಣೆ ಕೋರಿಕೆಗಳನ್ನು ಪರಿಗಣಿಸಲು ಅವಕಾಶ ನೀಡಲಾಗಿದೆ.

ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳು (371 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ಹೋಗಬಯಸುವವರಿಗೆ ವಿಶೇಷ ಆದ್ಯತೆ ದೊರೆಯಲಿದೆ.

ಸಾರ್ವತ್ರಿಕ ವರ್ಗಾವಣೆ ವೇಳೆ ಒಟ್ಟು ವೃಂದ ಬಲದ ಶೇಕಡ 11ರಷ್ಟು ಮಿತಿಯ ಒಳಗೆ ಮಾತ್ರ ವರ್ಗಾವಣೆ ಮಾಡಲು ಅವಕಾಶ ನೀಡಲಾಗಿದೆ. ವಿಶೇಷ ಆದ್ಯತೆಯಡಿ ವರ್ಗಾವಣೆ ಬಯಸುವವರಿಗೆ ಈ ನಿಯಮ ಅನ್ವಯವಾಗದು. ಉಳಿದೆಲ್ಲ ನಿಯಮಗಳು ಈಗಾಗಲೇ ಕಾಯ್ದೆಯಲ್ಲಿರುವಂತೆ ಮುಂದುವರಿಯಲಿವೆ ಎಂದು ಸರ್ಕಾರ ಅಧಿಸೂಚನೆಯಲ್ಲಿ ವಿವರಿಸಿದೆ.

ವಿದೇಶಗಳತ್ತ ಉಕ್ರೇನ್ ಸಂತ್ರಸ್ತ ವಿದ್ಯಾರ್ಥಿಗಳು

ಒಂದನೇ ಪುಟದಿಂದ...

ನಿರೀಕ್ಷೆ ಹುಸಿ: ಜಾರ್ಜಿಯಾಕ್ಕೆ ತೆರಳಿರುವ ವಿಜಯಪುರದ ವೈದ್ಯಕೀಯ ವಿದ್ಯಾರ್ಥಿನಿ ವಿವಿಧಾ ಅವರ ತಂದೆ ಅಲ್ಲಮಪ್ರಭು ಮಲ್ಲಿಕಾರ್ಜುನಮಠ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ವಿಶೇಷ ಪ್ರಕರಣ ಎಂದು ಪರಿಗಣಿಸಿ ವಿದ್ಯಾರ್ಥಿಗಳಿಗೆ ಇಲ್ಲಿಯೇ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂಬ ಭರವಸೆ ಇತ್ತು. ಆದರೆ, ಎನ್‌ಎಂಸಿ ಅನುಕೂಲ ಮಾಡಿಕೊಡಲಿಲ್ಲ' ಎಂದರು.

'ಉಕ್ರೇನ್‌ನಲ್ಲಿ ಮೂರು ವರ್ಷಗಳಿಗೆ ₹ 45 ಲಕ್ಷ ಖರ್ಚಾಗಿತ್ತು. ಆದರೆ, ಇದೀಗ ಜಾರ್ಜಿಯಾಕ್ಕೆ ₹ 30 ಲಕ್ಷ ಅವಶ್ಯಕತೆ ಇದೆ. ಇದರಿಂದ ನಮಗೆ ಆರ್ಥಿಕವಾಗಿ ದೊಡ್ಡ ಹೊರೆ ಬಿದ್ದಿದೆ' ಎಂದೂ ಅಳಲು ತೋಡಿಕೊಂಡರು.

28 ದೇಶಗಳಲ್ಲಿ ಶಿಕ್ಷಣಕ್ಕೆ ಅವಕಾಶ

ಯುದ್ಧದ ಪರಿಣಾಮ ವೈದ್ಯಕೀಯ ಶಿಕ್ಷಣ ಅರ್ಧಕ್ಕೆ ಮೊಟಕುಗೊಳಿಸಿ ಸ್ವದೇಶಕ್ಕೆ ಮರಳಿದ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಉಕ್ರೇನ್ ಅವಕಾಶ ಕಲ್ಪಿಸಿದೆ. ಭಾರತ ಹೊರತು ಪಡಿಸಿ 28 ದೇಶಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಪೋಲೆಂಡ್, ಆಸ್ಟ್ರಿಯಾ, ಫ್ರಾನ್ಸ್, ಜಾರ್ಜಿಯಾ, ಕಜಕಿಸ್ತಾನ್, ಲಿಥುವೇನಿಯಾ, ಸ್ಲೊವಾಕಿಯಾ, ಸ್ಪೇನ್, ಉಜ್ಬೇಕಿಸ್ತಾನ್, ಅಮೆರಿಕ, ಇಟಲಿ, ಬೆಲ್ಜಿಯಂ, ಈಜಿಪ್ಟ್, ಗ್ರೀಸ್, ರುಮೇನಿಯಾ, ಸ್ವೀಡನ್, ಇಸ್ರೇಲ್, ಇರಾನ್, ಬಲ್ಗೇರಿಯಾ, ಜರ್ಮನಿ, ಟರ್ಕಿ, ಹಂಗೇರಿ, ಜೆಕ್ ಗಣರಾಜ್ಯ, ಅಜರ್‌ಬೈಜಾನ್, ಕ್ರೊವೇಷಿಯಾ ಸೇರಿದಂತೆ ತಮಗೆ ಅನುಕೂಲವಾಗುವ ದೇಶದಲ್ಲಿ ವೈದ್ಯಕೀಯ ಶಿಕ್ಷಣ ಮುಂದುವರಿಸಬಹುದು. ವಿದ್ಯಾರ್ಥಿಗಳು ವ್ಯಾಸಂಗ ಮುಗಿಸಿದ ಬಳಿಕ ಉಕ್ರೇನ್‌ನ ಮೂಲ ವಿವಿಗಳಲ್ಲಿ ಪದವಿ ಪಡೆಯಬಹುದಾಗಿದೆ.

ವಿಧಾನಸಭೆ ಚುನಾವಣೆಗೆ ₹300 ಕೋಟಿ

ಒಂದನೇ ಪುಟದಿಂದ...

- ವೇತನ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ಉಪಯೋಗಕ್ಕಾಗಿ ನಾಲ್ಕು ವಾಹನ ಖರೀದಿಸಲು ₹75 ಲಕ್ಷ
- ಮೈಸೂರಿನ ಶಕ್ತಿಧಾಮ ಸಂಸ್ಥೆಗೆ ₹2.5 ಕೋಟಿ, ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಕ್ಕೆ ₹36 ಕೋಟಿ
- ರಾಷ್ಟ್ರೀಯಯುವಜನೋತ್ಸವಕ್ಕೆ₹10 ಕೋಟಿ, ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಗೆ ₹60 ಕೋಟಿ
- ಯಾದಗಿರಿ ಜಿಲ್ಲೆಯಲ್ಲಿ ಸಿಎಂ ಅಧ್ಯಕ್ಷತೆಯಲ್ಲಿ 50 ಸಾವಿರ ಹಕ್ಕು ಪತ್ರ ವಿತರಣೆ ಕಾರ್ಯಕ್ರಮಕ್ಕೆ ₹7 ಕೋಟಿ
- ಸಿಎಂಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಗೆ ₹256 ಕೋಟಿ
- ಗಿರೀಶ್ ಕಾರ್ನಾಡ್ ರಚಿತ ಕ್ರಾಸಿಂಗ್ ಟು ತಾಳಿಕೋಟಾ ನಾಟಕ ಪ್ರದರ್ಶನಕ್ಕೆ ₹15 ಲಕ್ಷ ಹಾಗೂ ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳಿಗೆ ಧನಸಹಾಯ ನೀಡಲು ₹9.27 ಕೋಟಿ
- ನಟ ಪುನೀತ್ ರಾಜಕುಮಾರ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಕಾರ್ಯಕ್ರಮಕ್ಕೆ ₹5 ಕೋಟಿ
- ಮೈಸೂರು ದಸರಾ ಆಚರಣೆಗಾಗಿ ₹9.50 ಕೋಟಿ, ಚಿಕ್ಕಮಗಳೂರು ಹಬ್ಬಕ್ಕೆ ₹50 ಲಕ್ಷ

ದೇವಸ್ಥಾನ, ಸಮುದಾಯಗಳಿಗೆ ಅನುದಾನ

- ಈಡಿಗ/ಬಿಲ್ಲವ ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಕೋಶ ರಚಿಸಲು ₹10 ಕೋಟಿ
- ಸೇವಾಲಾಲ ಮತ್ತು ಮರಿಯಮ್ಮ ದೇವಸ್ಥಾನಗಳ ಪುನರ್ ನಿರ್ಮಾಣ, ಬಂಜಾರ ಸಾಂಸ್ಕೃತಿಕ ಪಾರಂಪರಿಕ ಕೇಂದ್ರ ನಿರ್ಮಾಣಕ್ಕೆ ₹10 ಕೋಟಿ
- ವಿಶ್ವಗಾಣಿಗರ ಸಮುದಾಯ ಚಾರಿಟೆಬಲ್ ಟ್ರಸ್ಟ್‌ನ ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಅಭಿವೃದ್ಧಿಗೆ ₹3.50 ಕೋಟಿ
- ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಚಿಕ್ಕನಲ್ಲೂರು ದೇವಸ್ಥಾನದಲ್ಲಿ ಸಮುದಾಯ ಭವನಕ್ಕೆ ₹2 ಕೋಟಿ
- ಹಿರಿಯೂರಿನ ಅಖಿಲ ಭಾರತ ಗಾಣಿಗರ ಕ್ಷೇಮಾಭಿವೃದ್ಧಿ ಸಂಘದ ಸಮುದಾಯ ಭವನಕ್ಕೆ ₹2 ಕೋಟಿ
- ಮಾದಾಪುರದಲ್ಲಿ ಕೊಡವ ಸಮಾಜದ ಸಮುದಾಯಭವನದ ನಿರ್ಮಾಣಕ್ಕೆ ₹1 ಕೋಟಿ
- ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ಕಾಮಗಾರಿ ಪೂರ್ಣಗೊಳಿಸಲು ₹41.09 ಕೋಟಿ
- ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಲ್ಲಿ ಹೊಸ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ₹3 ಕೋಟಿ ಹಾಗೂ ಹಾವೇರಿ ಜಿಲ್ಲೆಯ ಬಂಕನಾಥೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ₹50 ಲಕ್ಷ

ಜಿ–20 ಶೃಂಗಸಭೆಗೆ ₹32.29 ಕೋಟಿ

ಬೆಂಗಳೂರಿನಲ್ಲಿ ನಡೆದ ಜಿ–20 ಶೃಂಗಸಭೆಗೆ ರಾಜ್ಯ ಸರ್ಕಾರ ₹32.29 ಕೋಟಿಯನ್ನು ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ.

ಶೃಂಗಸಭೆಯ ಕಾರ್ಯಕಲಾಪಗಳಿಗಾಗಿ ₹26 ಕೋಟಿ, ಭದ್ರತಾ ಉಪಕರಣ ಖರೀದಿಸಲು ₹3.59 ಕೋಟಿ, ವಾಹನಗಳನ್ನು ಖರೀದಿಸಲು ₹1.40 ಕೋಟಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮತ್ತು ಇತರೆ ವೆಚ್ಚಕ್ಕಾಗಿ ₹82.38 ಲಕ್ಷಗಳನ್ನು ನೀಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಪಂ. ಉಲ್ಲಾಸ ಕಶಾಳ್ಕರ್‌ಗೆ ಡಾ.ಮನಸೂರ ಪ್ರಶಸ್ತಿ



ಪಂ. ಉಲ್ಲಾಸ್ ಕಶಾಳ್ಕರ್

ಧಾರವಾಡ: ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಹಿಂದೂಸ್ತಾನಿ ಗಾಯಕ ಪುಣೆಯ ಪಂ.ಉಲ್ಲಾಸ್ ಕಶಾಳ್ಕರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹1ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಯುವ ಪ್ರಶಸ್ತಿಗೆ ಧಾರವಾಡದ ತಬಲಾ ವಾದಕ ಶ್ರೀಧರ ಮಾಂಡ್ರೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಡಿ.31 ರಂದು 5.30ಕ್ಕೆ ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರ ಸಂಗೀತ ಕಛೇರಿ ನಡೆಯಲಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಪ್ರಭಾಕರ ಕೋರೆಗೆ 'ಜೀವಮಾನ ಸಾಧನೆ' ಪ್ರಶಸ್ತಿ



ಬೆಳಗಾವಿ: ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಭಾನುವಾರ ಸೊಲ್ಲಾಪುರ ವೀರಶೈವ ಲಿಂಗಾಯತ ಪ್ರತಿಷ್ಠಾನವು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಿತು.

ಗೌರವ ಸ್ವೀಕರಿಸಿ ಮಾತನಾಡಿದ ಕೋರೆ, 'ಸಪ್ತರ್ಷಿಗಳು ಬೆಳಗಾವಿಯಲ್ಲಿ ಆರಂಭಿಸಿದ ಕೆಎಲ್‌ಇ ಸಂಸ್ಥೆ ಇಂದು ಆಲದಮರವಾಗಿ ಬೆಳೆದು ನಿಂತಿದೆ. ಸಂಸ್ಥೆಯ ಶಾಲಾ–ಕಾಲೇಜುಗಳು, ಆಸ್ಪತ್ರೆಗಳು ಭಾರತ ಮಾತ್ರವಲ್ಲದೆ, ದೇಶದಾಚೆಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಶಿಕ್ಷಣ ಪ್ರತಿಯೊಬ್ಬರಿಗೆ ಸಿಗಬೇಕು ಎಂಬುದು ನಮ್ಮ ಉದ್ದೇಶ' ಎಂದು ಹೇಳಿದರು.

ಪರಿಶಿಷ್ಟ ಮೀಸಲು ಹೆಚ್ಚಳ: ಮಸೂದೆಗೆ ಒಪ್ಪಿಗೆ

ಒಂದನೇ ಪುಟದಿಂದ...

'ಮಸೂದೆಗೆ ರಾಜ್ಯಪಾಲರ ಸಹಿ ಆದ ಬಳಿಕ ನಿಯಮಗಳಲ್ಲಿ ಬದಲಾವಣೆ ಮಾಡಿ, ಮುಂಬರುವ ನೇಮಕಾತಿಗಳಲ್ಲಿ ಹೊಸ ಮೀಸಲಾತಿ ಜಾರಿಗೊಳಿಸಲಾಗುವುದು. ಸಂವಿಧಾನದ 9 ನೇ ವಿಧಿಗೆ ಸೇರಿಸುವ ಜವಾಬ್ದಾರಿ ನಮ್ಮದು' ಎಂದು ಸಚಿವರು ಹೇಳಿದರು.

'ಖಾಸಗಿಯಲ್ಲೂ ಮೀಸಲಾತಿ': ಖಾಸಗಿಯಲ್ಲಿ ಶೇ 98 ರಷ್ಟು ಉದ್ಯೋಗ ಇವೆ. ಖಾಸಗಿ ಕಂಪನಿಗಳಲ್ಲೂ ಮೀಸಲಾತಿ ಜಾರಿಗೊಳಿಸಿ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

> ಪರಿಶಿಷ್ಟಜಾತಿ, ಪಂಗಡಗಳಿಗೆ ಮೀಸಲಾತಿ ಹೆಚ್ಚಿಸಿದ್ದನ್ನು ಸ್ವಾಗತಿಸುತ್ತೇವೆ. ಎಲ್ಲ ಸಮಾಜಗಳನ್ನೂ ಒಟ್ಟಿಗೆ ಕರೆದೊಯ್ಯುವ ವ್ಯವಸ್ಥೆ ಆಗಬೇಕು, ಒಡೆಯುವ ಕೆಲಸ ಬೇಡ.
> **ಎಚ್.ಡಿ.ರೇವಣ್ಣ,** ಜೆಡಿಎಸ್ ಶಾಸಕ

> ಮಸೂದೆ ಸರ್ವಾನುಮತದಿಂದ ಒಪ್ಪಿಗೆ ಕೊಡಿ. ಕೇಂದ್ರದ ಜತೆ ಚರ್ಚಿಸಿ ಅನುಮೋದನೆ ಪಡೆಯುವ ಜವಾಬ್ದಾರಿ ನಮ್ಮದು.
> **ಬಿ.ಶ್ರೀರಾಮುಲು,** ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಯೋಜನಾ ವಿಭಾಗ, # 1–11–264 ಎರಡನೇ ಮಹಡಿ ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ e-mail: eekrrdarcr@gmail.com ರಾಯಚೂರು–584101
ಸಂ.:ಕಾನಿಅ/ಯೋ..ರಾ/ಪಿ.ಬಿ/2022–23/810 ದಿನಾಂಕ:22–12–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 2022–23ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ದೇವದುರ್ಗ ತಾಲೂಕಿನ ಕಾಮಗಾರಿಗಳನ್ನು KW-3, KW-4 ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ. ಟೆಂಡರ ಪ್ರಕ್ರಿಯೆಯ "ವರಗಳು ಈ ಕೆಳಕಂಡಂತಿವೆ
1) E.M.D: As per e-proc portal 2) ಟೆಂಡರ್ ಇಂಡೆಂಟ್ ನಂಬರಗಳು: 5508, 5514, 5509, 5539, 5507, 5515, 5511, 5512, 5513, 5516 3) e-procurement portal ನಲ್ಲಿ ಟಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, Date of commencement of downloading of bidding document 23–12–2022 4) ತಾಂತ್ರಿಕ ಬಿಡ್‌ಗಳನ್ನು online ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: last date to submit bid on E-portal 03-01-2023 (16.00 Hours) 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 04–01–2023 (16:30 Hour) 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ನಂತರ ತಿಳಿಸಲಾಗುವುದು. 7) ಟೆಂಡರ್ ಗುತ್ತಿಗೆದಾರರ ದರ್ಜೆ: 1ನೇ ದರ್ಜೆ 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು 9) ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು: https://www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಯೋಜನಾ ವಿಭಾಗ, ರಾಯಚೂರು
ವಾ.ಸಾ.ಸಂ.ಇ/ರಾಯಚೂರು/503/ಕ.ರಾ.ಎಂ.ಸಿ&ಎ/2022–23

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.
ಸಂ: ಕವಶಿಸಸ/ಸಕಾಇ/ಟೆಂಡರ್–21/2022–23 ದಿನಾಂಕ: 26.12.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಿರ್ವಹಿಸುತ್ತಿರುವ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ **ಸೌರವಿದ್ಯುತ್ ಉತ್ಪಾದನ ಘಟಕ, ಹೈಮಾಸ್ಟ್ ಲೈಟಿಂಗ್, ಸೋಲಾರ್ ವಿದ್ಯುತ್ ದೀಪ, ಸೋಲಾರ್ ವಾಟರ್ ಹೀಟರ್‌ಗಳು ಮತ್ತು ಯು.ಪಿ.ಎಸ್. ಅಳವಡಿಸುವ ಕಾಮಗಾರಿಗೆ** (Indent No. 3014/call-2 & 3015/call-2) ಇ–ಪೋರ್ಟಲ್ ಮುಖಾಂತರ **ದಿನಾಂಕ : 27.12.2022** ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕವನ್ನು 10.01.2023** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು ಕವಶಿಸಸಂ
DIPR/CP/3724/Yakshi/2022-23

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.
ಸಂ: ಕವಶಿಸಸ/ಕಾಅ–1/ಟೆಂಡರ್–22/2022–23 ದಿನಾಂಕ: 26.12.2022
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಮಂಡ್ಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಡಾ.ಬಾಬು ಜಗಜೀವನರಾಂ ಭವನ ನಿರ್ಮಾಣ ಕಾಮಗಾರಿಗೆ** (ಟೆಂಡರ್ ಇಂಡೆಂಟ್ ಸಂಖ್ಯೆ 3073) ಇ–ಪೋರ್ಟಲ್ ಮುಖಾಂತರ **ದಿನಾಂಕ : 27.12.2022**ರಂದು ಟೆಂಡರ್‌ಗಳನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ : 27.01.2023** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ : ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು ಕವಶಿಸಸಂ
DIPR/CP/3723/Yakshi/2022-23

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವಲಯ, 'ವಿದ್ಯುತ್ ಭವನ', ಎಂ.ಆರ್.ಎಸ್., ಶಿವಮೊಗ್ಗ – 577 203.
ದೂರವಾಣಿ: 08182-220445, 220446 CIN: U40109 KA 2002 SGC 030425
ಕ್ರ ಸಂಖ್ಯೆ: ಮುಇಂ(ವಿ)/ಕಾನಿಇಂ(ಕಾ)/ಸಇಂ(ಕಾ)/ಕ-ಟೆಂಡರ್/22-23/ಸಿವೈಎಸ್-45 ದಿನಾಂಕ: 20.12.2022
ಟೆಂಡರ್ ಪ್ರಕಟಣೆ
ಮಂ.ವಿ.ಸ.ಕಂ.,ನ ಶಿವಮೊಗ್ಗ ವಲಯ ವ್ಯಾಪ್ತಿಯಲ್ಲಿರುವ ಸಿವಿಲ್ ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1855, 1856, 1857, 1858, 1859, 1860, 1861, 1862, 1863, 1865, 1866, 1887, 1888, 1889, 1891, 1899 & 1900 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖಾ ನೋಂದಾಯಿತ ಹಾಗೂ ಕಾರ್ಮಿಕ ಭವಿಷ್ಯ ನಿಧಿಯ, ಕಾರ್ಮಿಕರ ವಿಮಾ ರಾಜ್ಯ ನಿಗಮಗಳ ನೋಂದಣಿ, ಜಿ.ಎಸ್.ಟಿ. ಮತ್ತು ಕಾರ್ಮಿಕ ಇಲಾಖೆ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರನ್ನು ವಿದ್ಯುನ್ಮಾನ ಟೆಂಡರಿಂಗ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಮಾತ್ರ ಸ್ವೀಕರಿಸಲಾಗುವುದು. ವಿವರವಾದ ಟೆಂಡರ್ ಪ್ರಕಟಣೆ ಬಗ್ಗೆ ಮಾಹಿತಿಗಳನ್ನು ವೆಬ್ ಸೈಟ್: www.eproc.karnataka.gov.in ನಲ್ಲಿ ದಿನಾಂಕ 27.12.2022 ರಂದು ಅಥವಾ ತದನಂತರ ಲಾಗಿನ್ ಮಾಡಿ ವಿವರ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.
ಸಹಿ/- ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಶಿವಮೊಗ್ಗ
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ರೈಲು ಗಾಲಿ ಕಾರ್ಖಾನೆ
आज़ादी का अमृत महोत्सव
ಯಲಹಂಕ, ಬೆಂಗಳೂರು–560064. ದೂ. ಸಂ. 080–28072761/63
ವೆಬ್‌ಸೈಟ್: www.rwf.indianrailways.gov.in
ಇ–ಹರಾಜು ಪ್ರಕಟಣೆ ಸಂ. ಆರ್‌ಡಬ್ಲ್ಯುಎಫ್/ಜಿಎಸ್‌ಡಿ/ಸೇಲ್ಸ್ ಸೆಕ್ಷನ್/2022–23/03 ದಿನಾಂಕ : 19–12–2022
ಇ–ಟೆಂಡರ್ : ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು (ಪಿಸಿಎಂಎಂ) ರೈಲು ಗಾಲಿ ಕಾರ್ಖಾನೆ, ಯಲಹಂಕ ಬೆಂಗಳೂರು ಇವರು ಅನುಪಯುಕ್ತ ವಸ್ತುಗಳ (ಫೆರಸ್ / ನಾನ್–ಫೆರಸ್ / ವಿವಿಧ ಮತ್ತು ಇತರೆ) ಇ–ಹರಾಜು ಮಾರಾಟಕ್ಕಾಗಿ ವೆಬ್‌ಸೈಟ್ http://www.ireps.gov.in ಮೂಲಕ ಆನ್‌ಲೈನ್‌ನಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಇ–ಹರಾಜಿನ ದಿನಾಂಕಗಳು ಕೆಳಕಂಡಂತಿವೆ:
ಇ–ಹರಾಜಿನ ದಿನಾಂಕ : 10.01.2023, 18.01.2023, 25.01.2023, 07.02.2023, 15.02.2023, 23.02.2023, 07.03.2023, 14.03.2023, 21.03.2023, 28.03.2023, 12.04.2023, 20.04.2023, 28.04.2023, 11.05.2023, 19.05.2023. 26.05.2023, 06.06.2023, 14.06.2023, 22.06.2023, 04.07.2023, 12.07.2023, 20.07.2023, 03.08.2023, 11.08.2023, 23.08.2023, 05.09.2023, 13.09.2023, 21.09.2023, 04.10.2023, 12.10.2023, 20.10.2023, 03.11.2023, 10.11.2023, 24.11.2023, 05.12.2023, 13.12.2023, 21.12.2023
ಇ–ಹರಾಜು ಕೆಟಲಾಗ್‌ನಲ್ಲಿ ಸೂಚಿಸಿರುವ ಪ್ರಮಾಣವು ಕೇವಲ ಅಂದಾಜಿನದ್ದಾಗಿರುತ್ತದೆ. ಇ–ಹರಾಜು ಕೆಟಲಾಗ್‌ನ್ನು ಇ–ಹರಾಜಿನ ದಿನಾಂಕದ 7 ದಿನಗಳ ಮುಂಚಿತವಾಗಿ ನಮ್ಮ ವೆಬ್‌ಸೈಟ್ www.rwf.indianrailways.gov.in ಅಥವಾ www.ireps.gov.in ನಲ್ಲಿ ವೀಕ್ಷಿಸಬಹುದು.
ಉಪ ಮುಖ್ಯ ಸಾಮಗ್ರಿ ಪ್ರಬಂಧಕರು / ಡಿ ಮತ್ತು ಹರಾಜು ನಡೆಸುವ ಅಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪ್ರಾಜೆಕ್ಟ್ ಸೆಂಟ್ರಲ್–6, ಬಿಬಿಎಂಪಿ, ಬೆಂಗಳೂರು – 560002.
ಸಂಖ್ಯೆ: ಕಾಅ/ಪ್ರಾಸೆಂ–6/ಟೆಂಡರ್/05/2022–23 ದಿನಾಂಕ: 26–12–2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)–(ಅಲ್ಪಾವಧಿ)
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಪ್ರಾಜೆಕ್ಟ್ ಸೆಂಟ್ರಲ್–6, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	"ಬೊಮ್ಮನಹಳ್ಳಿ ವಲಯ ಸರಹದ್ದು, ಬೆಂಗಳೂರು ಇದರ ವಾರ್ಡ್ ಸಂಖ್ಯೆ. 174, 175, 184, 188, 189, 191, 192 ಮತ್ತು 196 ರಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನವೀಕರಣ ಮತ್ತು ಹೆಚ್ಚುವರಿ ಮಹಡಿ ನಿರ್ಮಾಣ"	214.88	3.22 ಲಕ್ಷಗಳು (ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಬಾಕಿಯನ್ನು ಬಿಡ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದಂತೆ ಪಾವತಿಸಬೇಕು)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ನಲ್ಲಿ ದಿನಾಂಕ: 27–12–2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 07–01–2023ರಂದು 17.30 ಗಂಟೆವರೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ– ಪ್ರಾಜೆಕ್ಟ್ ಸೆಂಟ್ರಲ್–6, ಬಿಬಿಎಂಪಿ ಇಲ್ಲಿ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 09–01–2023ರಂದು 16.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಪ್ರಾಜೆಕ್ಟ್ ಸೆಂಟ್ರಲ್ ಇಲ್ಲಿ ನಡೆಯುತ್ತದೆ. 4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕ: 13–01–2023ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ. 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 16–01–2023ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ – ಪ್ರಾಜೆಕ್ಟ್ ಸೆಂಟ್ರಲ್–6, ಬಿಬಿಎಂಪಿ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಪ್ರಾಜೆಕ್ಟ್ ಸೆಂಟ್ರಲ್–6, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ಇ–ಮೇಲ್: bmicapa@gmail.com, ದೂರವಾಣಿ: –080–22341230 / 35
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–03/15/2022–23 ದಿನಾಂಕ: 26–12–2022
ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]
ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ:380/4ರ 02ಎ–08ಗು ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ಶೈಕ್ಷಣಿಕ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ದಿ ಡಾಟರ್ಸ್ ಆಫ್ ಚಾರಿಟಿ ಆಫ್ ಸೇಂಟ್ ವಿನ್ಸೆಂಟ್ ದಿಪೌಲ್, ಬೆಂಗಳೂರು ರವರ ಪರವಾಗಿ ಅಧ್ಯಕ್ಷರಾದ ಸಿಸ್ಟರ್ ರೋಝು ಚಿರಯಿಲ್ ಬಿನ್ ವಾರಕಿ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು "ವ್ಯವಸಾಯ" ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.
1. ಈ ಊರಿನ ಮಕ್ಕಳು ಮತ್ತು ಸುತ್ತಮುತ್ತಲಿನ ಊರಿನ ಮಕ್ಕಳು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆಯಲು ನಮ್ಮ ಶಾಲೆಯನ್ನು ಉಪಯೋಗಿಸಬಹುದು.
2. ನಮ್ಮ ಸಂಸ್ಥೆ ದತ್ತಿ ಸಂಸ್ಥೆಯಾಗಿರುವುದರಿಂದ ಮತ್ತು ನಾವು ಶಾಲೆಯನ್ನು ಅತಿ ಕಡಿಮೆ ಬೆಲೆಗೆ ನಡೆಸುವುದರಿಂದ ಈ ಊರಿನ ಮಕ್ಕಳು ಮತ್ತು ಸುತ್ತಮುತ್ತಲಿನ ಊರಿನ ಬಡ ಮಕ್ಕಳಿಗೆ ಅತಿ ಕಡಿಮೆ ಬೆಲೆಗೆ ಉತ್ತಮ ಶಿಕ್ಷಣ ಸಿಗುವಂತಾಗುತ್ತದೆ.
3. ಇಲ್ಲಿನ ಸ್ಥಳೀಯ ಶಿಕ್ಷಕ/ಶಿಕ್ಷಕಿಯರಿಗೆ ಉದ್ಯೋಗದ ಅವಕಾಶ ದೊರೆಯುತ್ತದೆ ಇದರಿಂದ ಅವರ ಭೌತಿಕ ಜೀವನ ಮಟ್ಟ ಸುಧಾರಿಸುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
DIPR/CP/RO3716/AAPL/2022-23

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–1:ಟೆಂಡರ್–44/2022–23 ದಿನಾಂಕ: 19.12.2022
ಟೆಂಡರ್ ಪ್ರಕಟಣೆ ಸಂ.44/2022–23 ದಿನಾಂಕ: 19.12.2022
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:44/2022–23:ದಿನಾಂಕ 19–12–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–ಅಪೆಂಡಿಕ್ಸ್–ಇ, ನಬಾರ್ಡ್–ಆರ್.ಐ.ಡಿ.ಎಫ್.–25, ಮತ್ತು 8443: ಠೇವಣಿ ವಂತಿಕೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 06 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.6.57 ಲಕ್ಷಗಳು, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.83.15 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ.8,300/–, ಇ.ಎಂ.ಡಿ ಗರಿಷ್ಠ ಮೊತ್ತ ರೂ.1,66,400/–, ಅರ್ಹ ಗುತ್ತಿಗೆದಾರರು: 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **05.01.2023** ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **22.12.2022** ರಿಂದ **06.01.2023** ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **06.01.2023**ರ ಸಂಜೆ 16.00 ಗಂಟೆವರೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜು ಮೊತ್ತದ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **07.01.2023**ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತದ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **07.01.2023** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜು ಮೊತ್ತದ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **09.01.2023**ರ ಸಂಜೆ 16.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯುಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/801/MCA/2022-23

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142 ಫೋನ್ ನಂ: 7338590199
ಇ–ಮೇಲ್: eeyediyur1@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2022–23 ದಿನಾಂಕ : 17.12.2022
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ/ಪಿಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು **12 ಕಾಮಗಾರಿಗಾಗಿ** ಐಟಂವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ **ಗರಿಷ್ಠ ಮೊತ್ತ ರೂ 166.80 ಮತ್ತು ಕನಿಷ್ಟ ಮೊತ್ತ ರೂ.9.50 ಲಕ್ಷಗಳು** ಕೆಲಸ ಪೂರ್ಣಗೊಳಿಸುವ ರೂಪಾಯಿಗಳು. ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 1 ರಿಂದ 12 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: **29.12.2022 ಮಧ್ಯಾಹ್ನ 5.00 ಗಂಟೆಯವರೆಗೆ.** ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: **31.12.2022 ಮಧ್ಯಾಹ್ನ 4:00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02.01.2023 ಬೆಳಿಗ್ಗೆ 11:00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ:09.01.2023 ಸಂಜೆ 5:00 ಗಂಟೆಗೆ** ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಎಡಿಯೂರು.
ವಾಸಾಸಂಇ/ಸನಿ–ಮಂ/ಎಂಸಿ&ಎ/551/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–1, ಬೃಬೆಂಮಪಾ, ಬೆಂಗಳೂರು–02.
ಸಂಖ್ಯೆ: ಕಾಪಾಅ/ಯೋಕೇ–1/ಟೆಂಡರ್/11/2022–23 ದಿನಾಂಕ: 26.12.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು ಯೋಜನೆ ಕೇಂದ್ರ–1, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಬೆಂಗಳೂರಿನ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಹೊಸ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ (ಯುಪಿಹೆಚ್‌ಸಿ)ಗಳನ್ನು ನಿರ್ಮಾಣ ಮಾಡುವುದು. ಪ್ರಸ್ತುತವಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಹೆರಿಗೆ ಆಸ್ಪತ್ರೆಯ ಕಟ್ಟಡಗಳಿಗೆ ದುರಸ್ಥಿಗಳು, ನವೀಕರಣ ಮತ್ತು ಉನ್ನತೀಕರಣ ಮಾಡುವುದು.	455.00	6.85 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **07.01.2023**ರ ಸಂಜೆ **5:30** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ವಿಚಾರಣೆಗಳಿಗೆ ಕೊನೆಯ ದಿನಾಂಕ **29.12.2022**ರ ಸಂಜೆ **5:30** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–1, ಬೃಬೆಂಮಪಾಲಿಕೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಯೋಜನೆ–ಕೇಂದ್ರ, ಇಲ್ಲಿ ದಿನಾಂಕ **30.12.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–1, ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ **09.01.2023**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. (6) ತಿದ್ದುಪಡಿ / ಮಾರ್ಪಾಡುಗಳು / ಬದಲಾವಣೆಗಳೇನಾದರು ಇದ್ದಲ್ಲಿ ಅವುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್–ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–1

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.
ಬೆಂಗಳೂರು ರಸ್ತೆ, ಬಂಡಿಮೋಟ್, ಬಳ್ಳಾರಿ–583101
ಇಮೇಲ್– apmcballari@gmail.com, ದೂ:08392–250442 ಫಾಕ್ಸ್:08392–250890
ಸಂ: ಕೃಉಮಾಸ/ಬ/ಅಭಿಕೆ/ 991 /2022–23 ದಿನಾಂಕ:23–12–2022.
Invitation For Expression of Interest ನ 2 ನೇ ಬಾರಿ ಸಂಕ್ಷಿಪ್ತ ಪ್ರಕಟಣೆ
ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಲದಹಳ್ಳಿ ಗ್ರಾಮದ ಅತ್ಯಾಧುನಿಕ ಸೌಲಭ್ಯವುಳ್ಳ ಒಣಮೆಣಸಿನಕಾಯಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿ ಸಾರ್ವಜನಿಕ–ಖಾಸಗಿ–ಸಹಭಾಗಿತ್ವದಲ್ಲಿ (Public Private Partnership) ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಲು Invitation of Expression of Interest ನ ಮರು ಪ್ರಕಟಣೆಯನ್ನು e-Procurement ಮೂಲಕ Pre-Qualify Tender ಕರೆಯಲಾಗಿದ್ದು, ಒಣಮೆಸಿನಕಾಯಿ ಮಾರುಕಟ್ಟೆಯನ್ನು ಸಾರ್ವಜನಿಕ–ಖಾಸಗಿ–ಸಹಭಾಗಿತ್ವದಲ್ಲಿ (Public Private Partnership) ಅಡಿಯಲ್ಲಿ ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಿ ಹೂಡಿಕೆ ಮಾಡಲು ಇಚ್ಚೆವುಳ್ಳವರಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಳ್ಳಾರಿಯ ಸಹಾಯವಾಣಿ 08392–250890 ಹಾಗೂ http://eproc.karnataka.gov.in Helpdesk at 080-22441076 ನಲ್ಲಿ ಪಡೆಯಬಹುದಾಗಿದೆ.
Indent No.860/APMC/DEV/BLY/2022-23
1.ಪ್ರಿ–ಬಿಡ್ ಸಭೆಯ ದಿನಾಂಕ:12-01–2023. 2.ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 21–01–2023 ರ ಸಾಯಂಕಾಲ 4:30 ಗಂಟೆವರೆಗೆ. 3. ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ 24–01–2023 ರ ಸಾಯಂಕಾಲ 4:00 ಗಂಟೆವರೆಗೆ
ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ,ಬಳ್ಳಾರಿ. ಸಹಿ/– ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ,ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/736/ಎಂಸಿಎ/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2022–23/1466 ದಿನಾಂಕ: 21–12–2022
ಟೆಂಡರ್ ಪ್ರಕಟಣೆ (ದ್ವಿತೀಯ ಕರೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2022–23 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಲ್ಲಿ ಮಂಜೂರಾದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು:
1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: 22/12/2022 ರಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ.
1) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : **6 ತಿಂಗಳು (ಮಳೆಗಾಲ ಸೇರಿದಂತೆ)** 2) ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : **26/12/2022 ಸಮಯ 16:00 ಗಂಟೆ.** 3) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **29/12/2022 ಸಮಯ 16:00 ಗಂಟೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **30/12/2022 ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **31/12/2022 ರಂದು ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ.**
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ವಾ.ಸಾ.ಇ./ಕೊಪ್ಪಳ/520/2022–23/ದೇಶಪಾಂಡೆ ಪಬ್ಲಿಸಿಟಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು. ಹೃದಯದಲ್ಲಿಯೇ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು? -ದ.ರಾ.ಬೇಂದ್ರೆ

ಉಚಿತ ಪಡಿತರ ಯೋಜನೆ ಅಗತ್ಯ ರಾಜಕೀಯ ಉದ್ದೇಶವೂ ಇಲ್ಲದೆ

ಕೇಂದ್ರ ಸರ್ಕಾರ ಇತ್ತೀಚೆಗೆ ಕೈಗೊಂಡ ಎರಡು ಮಹತ್ವದ ನಿರ್ಧಾರಗಳು ರಾಜಕೀಯ ಆಯಾಮವನ್ನೂ ಹೊಂದಿರುವುದು ನಿಜವಾದರೂ, ಅವುಗಳಿಂದ ದೇಶದ ಕೋಟ್ಯಂತರ ಕುಟುಂಬಗಳಿಗೆ ನೆರವು ಸಿಗಲಿರುವುದು ಕೂಡ ಅಷ್ಟೇ ದಿಟ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿ ದೇಶದ 81.35 ಕೋಟಿ ಬಡವರಿಗೆ ಒಂದು ವರ್ಷದ ಅವಧಿಗೆ ಉಚಿತ ಪಡಿತರ ನೀಡಲು ಹಾಗೂ ನಿವೃತ್ತ ಸೈನಿಕರ ಪಿಂಚಣಿಯನ್ನು 'ಒಂದು ಶ್ರೇಣಿ ಒಂದು ಪಿಂಚಣಿ' (ಒಆರ್‌ಒಪಿ) ಯೋಜನೆ ಅಡಿಯಲ್ಲಿ ಪರಿಷ್ಕರಿಸಲು ಸರ್ಕಾರ ತೀರ್ಮಾನಿಸಿದೆ. ದೇಶದ ಜನರಿಗೆ ಇದು 'ಹೊಸ ವರ್ಷದ ಕಾಣಿಕೆ'ಯಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಬಡವರ ಪರ ನೀತಿಗೂ ಈ ನಿರ್ಧಾರಗಳು ಸಾಕ್ಷಿಯಾಗಿವೆ ಎಂದು ಸರ್ಕಾರ ಮತ್ತು ಆಡಳಿತ ಪಕ್ಷ ಒಟ್ಟಿಗೇ ಬಣ್ಣಿಸಿವೆ. ಆರ್ಥಿಕ ಸಂಕಷ್ಟದ ಈ ದಿನಗಳಲ್ಲಿ ಜನರಿಗೆ ಆಹಾರಧಾನ್ಯಗಳನ್ನು ಉಚಿತವಾಗಿ ವಿತರಿಸಬೇಕು ಎಂದು ವಿರೋಧ ಪಕ್ಷಗಳು ಸಹ ಒತ್ತಾಯಿಸುತ್ತಲೇ ಬಂದಿವೆ. ಹಲವು ತಿಂಗಳುಗಳಿಂದ ಜನಸಾಮಾನ್ಯರು ಹಣದುಬ್ಬರದ ಹೊಡೆತಕ್ಕೆ ಸಿಕ್ಕು ನಲುಗಿದ್ದಾರೆ. ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿ ಕಾಡುತ್ತಲೇ ಇದೆ. ಕೂಲಿ ಕಾರ್ಮಿಕರ ಹಾಗೂ ದಮನಿತ ವರ್ಗಗಳ ಜನರನ್ನು ಈ ಸಮಸ್ಯೆ ಇನ್ನೂ ಹೆಚ್ಚಾಗಿ ಬಾಧಿಸಿದೆ. ಒಂದೆಡೆ ಗಳಿಕೆಯೇ ಇಲ್ಲದಿರುವುದು, ಇನ್ನೊಂದೆಡೆ ನಿರಂತರವಾಗಿ ಬೆಲೆ ಏರಿಕೆಯಾಗುತ್ತಿರುವುದು- ಇಂತಹ ದ್ವಿಮುಖ ದಾಳಿಯಲ್ಲಿ ಬಡವರ ಬದುಕು ಅಡಕತ್ತರಿಯಲ್ಲಿ ಸಿಕ್ಕಂತಾಗಿದೆ. ಹೀಗಾಗಿ ಅವರ ಪಾಲಿಗೆ ಜೀವನ ನಿರ್ವಹಣೆಯೇ ಕಷ್ಟವಾಗಿದೆ, ಅವರು ಸಂಪೂರ್ಣ ಬಸವಳಿದು ಹೋಗಿದ್ದಾರೆ.

> ಸಂಕಷ್ಟದ ಈ ಸಮಯದಲ್ಲಿ ಬಡವರ ನೆರವಿಗೆ ಧಾವಿಸುವುದು ಸರ್ಕಾರದ ಕರ್ತವ್ಯ ಎನ್ನುವುದು ನಿಜವಾದರೂ ಈ ನಿರ್ಧಾರಗಳ ಹಿಂದಿನ ರಾಜಕೀಯ ಉದ್ದೇಶವು ಗಮನಸೆಳೆಯದೇ ಇರುವುದಿಲ್ಲ

ಪಡಿತರ ಯೋಜನೆಯ ಮೂಲಕ ಇದುವರೆಗೆ ಕಡಿಮೆ ದರದಲ್ಲಿ ಅಕ್ಕಿ, ಗೋಧಿ ಹಾಗೂ ಇತರ ಧಾನ್ಯಗಳನ್ನು ಪಡೆಯುತ್ತಿದ್ದ ಫಲಾನುಭವಿಗಳು, ಇನ್ನುಮುಂದೆ ಒಂದು ವರ್ಷದವರೆಗೆ ಪ್ರತೀ ತಿಂಗಳು ತಲಾ 35 ಕೆ.ಜಿ.ಯಷ್ಟು ಆಹಾರಧಾನ್ಯವನ್ನು ಸಂಪೂರ್ಣ ಉಚಿತವಾಗಿ ಪಡೆಯಲಿದ್ದಾರೆ. ಉಳಿದವರಿಗೆ 2023ರ ಡಿಸೆಂಬರ್‌ವರೆಗೆ ತಲಾ ಐದು ಕೆ.ಜಿ.ಯಷ್ಟು ಆಹಾರಧಾನ್ಯವನ್ನು ಉಚಿತವಾಗಿ ನೀಡಲು ಸರ್ಕಾರ ನಿರ್ಧರಿಸಿದೆ. ಅಂತ್ಯೋದಯ ಅನ್ನ ಯೋಜನೆ ಸೇರಿದಂತೆ ಬಡವರ ಕಲ್ಯಾಣಕ್ಕಾಗಿ ಹಾಕಿಕೊಂಡಿದ್ದ ಪಡಿತರ ವಿತರಣೆಯ ವಿವಿಧ ಕಾರ್ಯಕ್ರಮಗಳು ಮತ್ತು 2020ರ ಏಪ್ರಿಲ್‌ನ ಲಾಕ್‌ಡೌನ್ ಸಂದರ್ಭದಲ್ಲಿ ಶುರು ಮಾಡಿದ್ದ ಆಹಾರಧಾನ್ಯ ವಿತರಣೆ ಯೋಜನೆ ಎಲ್ಲವೂ ಈಗ ಈ ಹೊಸ ಯೋಜನೆಯಲ್ಲಿ ವಿಲೀನಗೊಂಡಿವೆ. ಈ ಯೋಜನೆಗೆ ಅಗತ್ಯವಾದ ₹ 2 ಲಕ್ಷ ಕೋಟಿಯನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ಹಾಗೆಯೇ ಪಿಂಚಣಿ ಪರಿಷ್ಕರಣೆಯಿಂದಾಗಿ ನಿವೃತ್ತ ಸೈನಿಕರ ಬದುಕಿನಲ್ಲಿ ಚೇತರಿಕೆ ಕಾಣಿಸಿಕೊಳ್ಳಲಿದೆ. ಇದರಿಂದ ದೇಶಕ್ಕಾಗಿ ದುಡಿದ 25 ಲಕ್ಷ ನಿವೃತ್ತ ಸೈನಿಕರು ಪ್ರಯೋಜನ ಪಡೆಯಲಿದ್ದಾರೆ. ಈ ಉದ್ದೇಶಕ್ಕಾಗಿ ಸರ್ಕಾರ ವಾರ್ಷಿಕ ₹ 24 ಸಾವಿರ ಕೋಟಿಯಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ವ್ಯಯಿಸಬೇಕಿದೆ.

ಸಂಕಷ್ಟದ ಈ ಸಮಯದಲ್ಲಿ ಬಡವರ ನೆರವಿಗೆ ಧಾವಿಸುವುದು ಸರ್ಕಾರದ ಕರ್ತವ್ಯ ಎನ್ನುವುದು ನಿಜವಾದರೂ ಈ ನಿರ್ಧಾರಗಳ ಹಿಂದಿನ ರಾಜಕೀಯ ಉದ್ದೇಶವು ಗಮನಸೆಳೆಯದೇ ಇರುವುದಿಲ್ಲ. ಒಂದು ವರ್ಷದವರೆಗೆ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತದೆ. ಆ ವೇಳೆಗೆ 2024ರ ಲೋಕಸಭಾ ಚುನಾವಣೆ ಹತ್ತಿರವಾಗಿರುತ್ತದೆ. ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳ ವಿಧಾನಸಭೆ ಚುನಾವಣೆಗಳು 2023ರಲ್ಲಿ ನಡೆಯಲಿವೆ. ಉಚಿತ ಪಡಿತರ ವಿತರಣೆ ಯೋಜನೆಯಿಂದ ಚುನಾವಣೆಯಲ್ಲಿ ರಾಜಕೀಯ ಲಾಭವನ್ನೂ ಮಾಡಿಕೊಳ್ಳಲು ಆಡಳಿತ ಪಕ್ಷ ಹವಣಿಸುತ್ತಿರುವುದು ಸುಸ್ಪಷ್ಟ. ವಿರೋಧಾಭಾಸದ ಸಂಗತಿ ಏನೆಂದರೆ, ಚುನಾವಣೆಯಲ್ಲಿ ಉಚಿತ ಕೊಡುಗೆಗಳ ಘೋಷಣೆಗಳನ್ನು ಪ್ರಧಾನಿ ಕಟುವಾಗಿ ಟೀಕಿಸುತ್ತಾರೆ. ಅವರದೇ ನೇತೃತ್ವದ ಸರ್ಕಾರ ಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶದಿಂದಲೇ ಉಚಿತ ಪಡಿತರ ವಿತರಣೆಯಂತಹ ನಿರ್ಧಾರ ತೆಗೆದುಕೊಳ್ಳುತ್ತದೆ. ಆದರೆ, ಇಲ್ಲಿರುವ ಒಂದು ಒಳ್ಳೆಯ ಸಂಗತಿ ಎಂದರೆ, ಈ ದುರಿತ ಕಾಲದಲ್ಲಿ ನೆರವಿನ ನಿರೀಕ್ಷೆಯಲ್ಲಿದ್ದವರಿಗೆ ಯೋಜನೆಯ ಪ್ರಯೋಜನ ಸಿಗಲಿದೆ ಎನ್ನುವುದು.

ದಿನದ ಟ್ವೀಟ್

ಹೀಗಿದೆ ಧಾರ್ಮಿಕ ಸಾಮರಸ್ಯ



ಮಂಗಳೂರಿನಲ್ಲಿ ಕ್ರಿಸ್‌ಮಸ್ ಒಂದು ಸಾಂಸ್ಕೃತಿಕ ವಿದ್ಯಮಾನ. ಕೇಕ್, ವೈನ್, ವಿವಾಹ, ಒಳ್ಳೆಯ ಆಹಾರ, ಸಂಗೀತ, ನೃತ್ಯ... ಇದು ಧರ್ಮನಿರಪೇಕ್ಷವಾಗಿ ಎಲ್ಲರನ್ನೂ ಒಳಗೊಳ್ಳುತ್ತದೆ. ದೀಪಾವಳಿ ಹೇಗೆ ನಡೆಯುತ್ತದೆಯೋ ಅದೇ ರೀತಿ. ಈ ಪ್ರವೃತ್ತಿ ಹೀಗೇ ಮುಂದುವರಿಯಲಿ...

ಅಜಯ್ ಕಾಮತ್, ನೇತ್ರತಜ್ಞ

ಕಿಡಿನುಡಿ



ಫಾದರ್ ಸ್ಟ್ಯಾನ್ ಸ್ವಾಮಿಯವರನ್ನು ಸುಳ್ಳುಗಳ ಮೂಲಕ ಕೊಲ್ಲಲಾಯಿತು. ತಮ್ಮ ವಿರುದ್ಧ ಸಾಕ್ಷ್ಯವನ್ನು ಸೃಷ್ಟಿಸಲಾಗಿದೆ ಎಂದು ವಿಚಾರಣೆ ವೇಳೆ ತಾವು ಹೇಳಿದ್ದಾಗಿ ಅವರು ತಮ್ಮ ಪುಸ್ತಕ 'ಐ ಆ್ಯಮ್ ನಾಟ್ ಎ ಸೈಲೆಂಟ್ ಸ್ಪೆಕ್ಟೇಟರ್'ನಲ್ಲಿ ಬರೆದಿದ್ದಾರೆ. ಆದರೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅದನ್ನು ನಂಬಲಿಲ್ಲ. ಇದೀಗ ವಿಧಿವಿಜ್ಞಾನ ಸಂಸ್ಥೆಯು ಇದನ್ನು ದೃಢಪಡಿಸಿದೆ. ಜೈಲಿನಲ್ಲಿ ಕೊಲೆಯಾಗಿದ್ದು ದುಃಖದ ಸಂಗತಿ.

ಪ್ರಶಾಂತ್ ಭೂಷಣ್, ವಕೀಲ

25 ವರ್ಷಗಳ ಹಿಂದೆ

ಶನಿವಾರ, 27-12-1997

• ಕಾಂಗ್ರೆಸ್‌ಗೆ ಕಲ್ಮಾಡಿ ಸಹಿತ ನಾಲ್ವರ ರಾಜೀನಾಮೆ

ನವದೆಹಲಿ, ಡಿ. 26 (ಪಿಟಿಐ)– ಕೇಂದ್ರದ ಮಾಜಿ ಸಚಿವ ಸುರೇಶ್ ಕಲ್ಮಾಡಿ ಸಹಿತ ನಾಲ್ವರು ವಿಸರ್ಜಿತ ಲೋಕಸಭಾ ಸದಸ್ಯರು ಇಂದು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದರು.

ಮುಂಬರುವ ಚುನಾವಣೆಯಲ್ಲಿ ಸೀತಾರಾಂ ಕೇಸರಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸಂಪೂರ್ಣ 'ನೆಲಸಮ'ವಾಗಲಿದೆ ಎಂದು ಅವರು ಹೇಳಿದ್ದಾರೆ.

ಪಕ್ಷ ತೊರೆದ ಇತರ ಮೂವರೆಂದರೆ ಅನಾದಿ ಚಾರನ್ ಸಾಹು (ಕಟಕ್), ಮೋಹನ್ ಎಸ್. ಡೇಲ್ಕರ್ (ದಾದ್ರಾ ಮತ್ತು ನಗರಹವೇಲಿ) ಹಾಗೂ ಗೋಪಾಲ್ ಟಂಡೆಲ್ (ದಮನ್ ಮತ್ತು ದೀವ್).

• ಹಾಲಭಾವಿ ನಿಧನ

ಧಾರವಾಡ, ಡಿ. 26– ವೆಂಕಟಪ್ಪ ಪ್ರಶಸ್ತಿ ವಿಜೇತ ಹಿರಿಯ ಚಿತ್ರಕಲಾವಿದ ಡಿ.ವಿ. ಹಾಲಭಾವಿ ಅವರು ಇಂದು ಬೆಳಿಗ್ಗೆ ಧಾರವಾಡದಲ್ಲಿ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಮುಂಬಯಿನ ಜೆ.ಜೆ. ಚಿತ್ರಕಲಾ ಶಾಲೆಯ ಪದವೀಧರರಾಗಿದ್ದ ಹಾಲಭಾವಿ ಅವರು, 1935ರಲ್ಲಿ ಧಾರವಾಡದಲ್ಲಿ 'ಸ್ಕೂಲ್ ಆಫ್ ಆರ್ಟ್ಸ್' ಸಂಸ್ಥೆಯನ್ನು ಆರಂಭಿಸಿದ್ದರು. ಈ ಸಂಸ್ಥೆ ಕರ್ನಾಟಕದ ಮೊದಲ ಚಿತ್ರಕಲಾ ಸಂಸ್ಥೆ.

50 ವರ್ಷಗಳ ಹಿಂದೆ

ಬುಧವಾರ, 27-12-1972

• ಸಕಲ ರಾಷ್ಟ್ರ ಗೌರವಸಹಿತ ಪಿತೃಪುರುಷ ರಾಜಾಜಿ ಅಂತ್ಯಕ್ರಿಯೆ

ಮದರಾಸು, ಡಿ. 26– ನಿನ್ನೆ ವಿಧಿವಶರಾದ ಭಾರತ ರಾಜಕಾರಣದ ಪಿತೃಪುರುಷ ಚಕ್ರವರ್ತಿ ರಾಜಗೋಪಾಲಾಚಾರ್ಯರ ಪಾರ್ಥಿವ ಶರೀರವನ್ನು ಮಾಜಿ ರಾಷ್ಟ್ರ- ಪತಿಗಳಿಗೆ ಸಲ್ಲಬೇಕಾದ ಸಕಲ ಸೈನಿಕ ಗೌರವಗಳೊಡನೆ ಇಂದು ಸಂಜೆ 6 ಗಂಟೆ 5 ನಿಮಿಷಕ್ಕೆ ಕೃಷ್ಣಂಪೇಟೆ ಸ್ಮಶಾನದಲ್ಲಿ ಅಗ್ನಿಗೆ ಅರ್ಪಿಸಲಾಯಿತು.

ರಾಷ್ಟ್ರಪತಿ ವಿ.ವಿ. ಗಿರಿ ಅವರು ಅಂತ್ಯ ಕ್ರಿಯೆಯಲ್ಲಿ ಹಾಜರಿದ್ದು, ಅಗಲಿದ ನಾಯಕನಿಗೆ ಗೌರವ ಅರ್ಪಿಸಿದರು.

ಮೂರು ಬಾರಿ ಗುಂಡು ಹಾರಿಸಿ ಹಾಗೂ ಅಂತಿಮಯಾತ್ರೆಯ ಮಿಲಿಟರಿ ಬ್ಯಾಂಡ್ ಬಾರಿಸಿದ ಅನಂತರ ರಾಜಾಜಿ ಅವರ ದ್ವಿತೀಯ ಕುಮಾರ ಸಿ.ಆರ್. ನರಸಿಂಹನ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಅನಾರೋಗ್ಯದ ಕಾರಣ ಅವರ ಹಿರಿಯ ಮಗ ಸಿ.ಆರ್. ಕೃಷ್ಣಸ್ವಾಮಿ ಅವರು ಅಂತಿಮ ವಿಧಿ ನೆರವೇರಿಸಲು ಸಾಧ್ಯವಾಗಲಿಲ್ಲ.

• ಅನಾವೃಷ್ಟಿ ಪರಿಹಾರಕ್ಕೆ ಧಾರಾಳ ಆರ್ಥಿಕ ನೆರವು: ಕೇಂದ್ರ ಮತ್ತು ರಾಜ್ಯಗಳಿಗೆ ಕರೆ

ಬಿಧಾನ್ ನಗರ, ಡಿ. 26– ರಾಷ್ಟ್ರದ ವಿವಿಧ ಭಾಗಗಳಲ್ಲಿ ಅನಾವೃಷ್ಟಿಯಿಂದ ತಲೆದೋರಿರುವ ಸಂಕಷ್ಟಗಳನ್ನು ಜನರು ಪರಿಹರಿಸಿಕೊಳ್ಳುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಧಾರಾಳವಾದ ಆರ್ಥಿಕ ನೆರವು ಯೋಜನೆಗಳನ್ನು ರೂಪಿಸಬೇಕೆಂದು 74ನೇ ಕಾಂಗ್ರೆಸ್ ಪೂರ್ಣಾಧಿವೇಶನದ ವಿಷಯ ನಿಯಾಮಕ ಸಮಿತಿ ಇಂದು ಒಂದು ನಿರ್ಣಯದಲ್ಲಿ ಕರೆ ಕೊಟ್ಟಿದೆ.

ನಿರ್ಣಯ ಮಂಡಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರು, ಅನಾವೃಷ್ಟಿಯಿಂದ ನರಳಿದ ರಾಜ್ಯಗಳಿಗೆ ಕೇಂದ್ರ ಸರ್ಕಾರವು 'ಇನ್ನಷ್ಟು ಧಾರಾಳವಾಗಿ' ಆರ್ಥಿಕ ನೆರವು ನೀಡಬೇಕೆಂದು ಪ್ರಬಲವಾಗಿ ಮನವಿ ಮಾಡಿಕೊಂಡರು.

ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಹೈನೋದ್ಯಮದ ಮಾದರಿಯಿಂದ ಪರಿಹಾರ?

ಸುಸ್ಥಿರ ಕೃಷಿ ಮತ್ತು ವರ್ಷಾಂತ್ಯದ ಚಿಂತನೆ

ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಭಿನ್ನ ಅಭಿಪ್ರಾಯಗಳು ಇವೆಯಾದರೂ, ಸಮಸ್ಯೆಗಳ ವಿಷಯದಲ್ಲಿ ಭಿನ್ನಮತವಿಲ್ಲ. ಸಣ್ಣ ಹಿಡುವಳಿ, ಅಸಮರ್ಪಕ ಬೆಲೆ, ವಾತಾವರಣ ಬದಲಾವಣೆ- ಜಲಸಂಪನ್ಮೂಲದಲ್ಲಿನ ಸವಾಲುಗಳು, ಮಣ್ಣಿನಲ್ಲಿನ ಪೋಷಕಾಂಶದ ಕೊರತೆ- ಈ ಎಲ್ಲವನ್ನೂ ಸಮಸ್ಯೆಗಳೆಂದು ನಾವು ಗುರುತಿಸಬಹುದು. ಇವುಗಳಿಗೆ ಪರಿಹಾರವನ್ನು ಯಾವ ರೀತಿಯಲ್ಲಿ ಕಂಡುಕೊಳ್ಳಬೇಕು ಎನ್ನುವುದರ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ.

ಕೃಷಿಯಲ್ಲಿ 'ಸುಧಾರಣೆ'ಯನ್ನು ಪ್ರತಿಪಾದಿಸುವವರು, ಈ ಕ್ಷೇತ್ರದಲ್ಲಿ ಸರ್ಕಾರದ ಪಾತ್ರವನ್ನು ನಗಣ್ಯವಾಗಿಸಿ ಮಾರುಕಟ್ಟೆಗೆ ಎಲ್ಲವನ್ನೂ ಒಪ್ಪಿಸಬೇಕೆಂದು ವಾದಿಸುತ್ತಾರೆ. ಆ ವಾದಸರಣಿಯಲ್ಲಿ ವಿಜ್ಞಾನದಿಂದಾದ ಸಮಸ್ಯೆಗಳಿಗೆ (ನೀರು, ರಸಗೊಬ್ಬರ, ಕೀಟನಾಶಕಗಳ ಅತಿ ಬಳಕೆ) ವಿಜ್ಞಾನವೇ (ತಳಿ ಮಾರ್ಪಾಡು ತಂತ್ರಜ್ಞಾನ, ಹೈಡ್ರೊಪೋನಿಕ್ಸ್- ಮಣ್ಣಿಲ್ಲದೇ ಕೈಗೊಳ್ಳುವ ಜಲಕೃಷಿ) ಪರಿಹಾರವೆಂದು ನಂಬಿದ್ದಾರೆ. ಇತ್ತೀಚೆಗೆ ಜಾರಿ ಮಾಡಿ ಕಡೆಗೆ ವಾಪಸ್ ಪಡೆದ ಮೂರು ಕೃಷಿ ಕಾನೂನುಗಳು ಜಾದೂವಿನ ರೀತಿಯಲ್ಲಿ ಕೆಲಸ ಮಾಡುತ್ತವೆ ಎಂದು ಸಮರ್ಥಿಸುತ್ತಾರೆ. ಮಾರುಕಟ್ಟೆಯ ಆರ್ಥಿಕತೆಯೇ ಎಲ್ಲವನ್ನೂ ದುರಸ್ತಿ ಮಾಡುತ್ತದೆ, ಅಂದರೆ ಅತಿ ಉತ್ಪಾದನೆಯಾಗಿ ಬೆಲೆಗಳು ನೆಲಕಚ್ಚಿದರೆ ರೈತರು ಮುಂದಿನ ಬಾರಿ ಬೆಳೆಯನ್ನು ಬದಲಾಯಿಸುತ್ತಾರಾದ್ದರಿಂದ ಮಾರುಕಟ್ಟೆಯ ಸಮತೋಲನವೇ ಕೃಷಿಯ ಆರ್ಥಿಕತೆಗೆ ಉತ್ತರವೆಂದೂ ಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಸಬ್ಸಿಡಿಗಳ ಮೇಲೆ ದುಂದು ಮಾಡಬಾರದೆಂದೂ ಈ ವಿಚಾರಧಾರೆ ಹೇಳುತ್ತದೆ.

ಇದರ ವಿರುದ್ಧವಾಗಿ, ಸರ್ಕಾರದ ಪಾತ್ರ ಅಧಿಕವಾಗಿರಬೇಕು, ಆ ಪಾತ್ರದಲ್ಲಿ ಕನಿಷ್ಠ ಬೆಂಬಲ ಬೆಲೆ ಕಾನೂನುಬದ್ಧವಾಗಿರಬೇಕು, ನೈಸರ್ಗಿಕ ಮತ್ತು ಸಾವಯವ ಕೃಷಿಯತ್ತ ನಾವು ಸಾಗಬೇಕು ಎಂದು ವಾದಿಸುವವರೂ ಇದ್ದಾರೆ. ಎರಡೂ ಬದಿಯ ಜನ 'ಅಮುಲ್' ಮಾದರಿಯ ಸಹಕಾರಿ ಪದ್ಧತಿ ಅಥವಾ ರೈತ ಉತ್ಪಾದಕ ಸಂಸ್ಥೆಗಳು ಸಮಸ್ಯೆಗಳ ಪರಿಹಾರಕ್ಕೆ ಮಾರ್ಗವೆಂದು ಒಪ್ಪುತ್ತಾರೆ. ಆದರೆ ನಾವು ಒಂದು ಮೂಲಭೂತ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಇಂದಿನ ಸ್ಥಿತಿಯಲ್ಲಿ ಕೃಷಿಯಲ್ಲಿ ತೊಡಗುವುದು ಸುಸ್ಥಿರ ಜೀವನೋಪಾಯವಾಗಿದೆಯೇ? ಅಲ್ಲವಾದರೆ ವ್ಯಾಪಕ ಮಟ್ಟದಲ್ಲಿ ಕೃಷಿಯನ್ನು ಬಿಟ್ಟು ಬೇರಾವುದೇ ಜೀವನೋಪಾಧಿಯನ್ನು ಅಪ್ಪಬಹುದೇ? ಈ ಪ್ರಶ್ನೆಗೆ ಉತ್ತರ ಸರಳವಲ್ಲ.

ಕೃಷಿಯು ಭೂತಾಯಿಯನ್ನು ನಂಬಿ ನಡೆಸುವ ಕೆಲಸ. ನೆಲ ಮತ್ತು ಮಣ್ಣಿನ ಜೊತೆಗಿನ ಸಂಬಂಧವು ಆರ್ಥಿಕತೆಗೆ ಮಾತ್ರ ಸಲ್ಲುವುದಿಲ್ಲ, ಅಲ್ಲಿ ನಮ್ಮ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಸಂಬಂಧವು ಒಣ ಆರ್ಥಿಕತೆಗಿಂತ ಹೆಚ್ಚು ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಈ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವುದರಲ್ಲಿ, ನಾವು ನಮ್ಮ ಹೈನುಗಾರಿಕೆಯು ಅಭಿವೃದ್ಧಿಯಾದ ಮಾರ್ಗದಿಂದ ಏನನ್ನಾದರೂ ಕಲಿಯಬಹುದೇ? ಹೈನುಗಾರಿಕೆಯು ಸಹಕಾರ ವ್ಯವಸ್ಥೆಯಲ್ಲಿ ನಿರ್ಮಾಣಗೊಂಡಿರುವ ಒಂದು ಉಪಕ್ರಮವಾದರೂ ನಮ್ಮ ಚರ್ಚೆಗೆ ಸಹಕಾರವೇ ಮುಖ್ಯವಲ್ಲ, ಅದನ್ನೊಂದು ಮತ- ಪಂಥ- ಧರ್ಮದಂತೆ ಪಾಲಿಸಬೇಕೆನ್ನುವ ವಾದವನ್ನು ಮೀರಿ ನಾವು ಯೋಚಿಸಬಹುದೇ? ಹೈನುಗಾರಿಕೆಯನ್ನು ದೇಶದಲ್ಲಿ ಸಫಲವಾಗಿ ಬೆಳೆಸಿದ ನಮ್ಮ ಅನುಭವದ ಈರುಳ್ಳಿಯನ್ನು ಪದರ ಪದರವಾಗಿ ಬಿಡಿಸಿ ನೋಡಬೇಕಾಗಿದೆ.

ಮುಂಬೈ (ಹಾಲಿನ ಉತ್ಪನ್ನಗಳಿಗೆ ಇದ್ದ ಮಾರುಕಟ್ಟೆ) ಇಲ್ಲದಿದ್ದರೆ ಆಣಂದ (ಅಮುಲ್ ಸ್ಥಾಪಿತವಾದ ಊರು) ಇಲ್ಲವೇ ಇಲ್ಲ ಎಂದು, ಹೈನುಗಾರಿಕೆಯ ಪಿತಾಮಹರೆಂದೇ ಖ್ಯಾತರಾಗಿರುವ ಡಾ. ವರ್ಗೀಸ್ ಕುರಿಯನ್ ಹೇಳುತ್ತಿದ್ದರು. ಮಾರುಕಟ್ಟೆಯ ಮಹತ್ವವನ್ನು ನಾವು ಯಾವುದೇ ಪರಿಸ್ಥಿತಿಯಲ್ಲಿ ಅಲ್ಲಗಳೆಯುವಂತಿಲ್ಲ. ಹೈನುಗಾರಿಕೆಯ ವಿಷಯಕ್ಕೆ ಬಂದಾಗ, ಹಾಲನ್ನು ಸಂಗ್ರಹಿಸಲು ಏರ್ಪಡಿಸಿದ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಜೊತೆಜೊತೆಗೇ ಅದನ್ನು ಸಂಸ್ಕರಿಸಿ ಉತ್ಪನ್ನಗಳನ್ನು ತಯಾರಿಸುವ ಜಿಲ್ಲಾವಾರು ಒಕ್ಕೂಟಗಳು ಮತ್ತು ಕಾರ್ಖಾನೆಗಳನ್ನೂ ಸ್ಥಾಪಿಸಲಾಯಿತು. ರೈತರನ್ನು ಸಹಕಾರಿ ವ್ಯವಸ್ಥೆಯಲ್ಲಿ ಒಟ್ಟುಗೂಡಿಸುವುದು ಸರ್ಕಾರದ ಕೆಲಸವಾದರೆ, ಸಂಸ್ಕರಣಾ ಕೇಂದ್ರಗಳು ವ್ಯಾಪಾರದ ಸೂತ್ರಗಳಿಗೆ ಅನುಗುಣವಾಗಿ ಮಾರುಕಟ್ಟೆಯ ನಿಯಮದಡಿ ನಡೆಯುತ್ತಿದ್ದವು. ಗ್ರಾಹಕರು ಖರ್ಚು ಮಾಡುವ ರೂಪಾಯಿಯಲ್ಲಿ ಹೆಚ್ಚಿನ ಭಾಗ ರೈತರು ಹಾಗೂ ಉತ್ಪಾದಕರಿಗೆ ದಕ್ಕಬೇಕಾದರೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಜೊತೆಜೊತೆಗೇ ತಮ್ಮ ಮತ್ತು ಗ್ರಾಹಕರ ನಡುವಿರುವ ಸರಪಳಿಯ ಅನೇಕ ಕೊಂಡಿಗಳನ್ನು ಕೈವಶ ಮಾಡಿಕೊಳ್ಳಲು ಪ್ರಯಾಸಪಡಬೇಕು. ಹಾಗೆಂದರೆ ಈ ಸರಪಳಿಯಲ್ಲಿ ರೈತರಿಗೆ ವ್ಯಾಪಕ ಪ್ರಭಾವ ಮತ್ತು ವ್ಯವಹಾರ ಶಕ್ತಿ ಇರಬೇಕು. ಉತ್ತಮ ಉತ್ಪತ್ತಿ, ದಾಸ್ತಾನು ಸೌಲಭ್ಯ ಮತ್ತು ಆರ್ಥಿಕ ಸವಲತ್ತುಗಳಿದ್ದರೆ ರೈತರ ಪ್ರಭಾವ ಮತ್ತು ವ್ಯವಹಾರಶಕ್ತಿಯು ವರ್ಧಿಸುತ್ತದೆ.

ರೈತರ ಶ್ರಮಕ್ಕೆ ಹೆಚ್ಚಿನ ಮೌಲ್ಯ ದಕ್ಕುವುದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ದೊರೆಯುವುದರಿಂದ ಮಾತ್ರವಲ್ಲ. ಇರುವ ಸಂಪನ್ಮೂಲಗಳನ್ನು ದಕ್ಷತೆಯಿಂದ ನಿರ್ವಹಿಸುವುದೂ ಮುಖ್ಯವೇ. ಹೈನುಗಾರಿಕೆಯ ವಿಷಯದಲ್ಲಿ ಪಶುವಿನ ಸ್ವಾಸ್ಥ್ಯ ಕಾಪಾಡುವುದು ಒಂದು ಉಪಕ್ರಮವಾಗಿತ್ತು. ಪೌಷ್ಟಿಕ ಪಶು ಆಹಾರವನ್ನು ನೀಡುವುದು ಮತ್ತೊಂದು ಉಪಕ್ರಮ. ಸ್ವಾಸ್ಥ್ಯ ಸೇವೆಗಳು ಸರ್ಕಾರದ ಜವಾಬ್ದಾರಿ. ಪೌಷ್ಟಿಕ ಆಹಾರವು ಮಾರುಕಟ್ಟೆಗೆ ಸಂದದ್ದು. ಇದನ್ನು ನಾವು ಕೃಷಿಗೆ ಅನ್ವಯಿಸಿದರೆ- ಉನ್ನತ ಪದ್ಧತಿಗಳ ಅರಿವು ಮತ್ತು ಬೆಳೆಯ ರಕ್ಷಣೆಯನ್ನು ಸರ್ಕಾರ ತನ್ನ ಜವಾಬ್ದಾರಿಯಾಗಿ ಸ್ವೀಕರಿಸಬೇಕಾಗುತ್ತದೆ. ಸುಸ್ಥಿರ ವ್ಯವಸ್ಥೆಯಲ್ಲಿ ಕೃಷಿಯನ್ನು ಕೈಗೊಳ್ಳಲು ಬೇಕಾದ ಇತರ ಹೂಡಿಕೆಗಳು ಮಾರುಕಟ್ಟೆಯ ಸೂತ್ರಕ್ಕೆ ಒಗ್ಗುತ್ತವೆ.



ಇಲ್ಲಿ ನೀರಾವರಿ ಮತ್ತು ಅದಕ್ಕೆ ಬೇಕಾದ ವಿದ್ಯುತ್ತಿನ ಹೊಣೆ ಮಾರುಕಟ್ಟೆಯದೋ ಅಥವಾ ಸರ್ಕಾರದ್ದೋ ಎನ್ನುವ ಚರ್ಚೆ ಉಂಟಾಗಬಹುದು. ಅಣೆಕಟ್ಟುಗಳು ಮತ್ತು ಕಾಲುವೆಗಳು ಸರ್ಕಾರದ ಜವಾಬ್ದಾರಿಯಾಗಿದ್ದರೆ, ಕೊಳವೆಬಾವಿಗಳು, ವಿದ್ಯುತ್ತು ಮತ್ತು ಡೀಸೆಲ್ ವ್ಯವಸ್ಥೆಯು ಮಾರುಕಟ್ಟೆಯ ತರ್ಕಕ್ಕೆ ಒಗ್ಗುತ್ತದೆ. ಇಲ್ಲೂ ಸರ್ಕಾರಗಳು ಉಚಿತ ವಿದ್ಯುತ್ ನೀಡಿ ಜವಾಬ್ದಾರಿ ನಿರ್ವಹಿಸಬಹುದಾದರೂ ಅದು ಉತ್ತಮವಾದ ಸಬ್ಸಿಡಿಯೇ ಎನ್ನುವುದು ತುಸು ವಿವಾದಾಸ್ಪದ ವಿಷಯ.

ಇರುವ ಸಂಪನ್ಮೂಲಗಳನ್ನೇ ಬಳಸಿ ಉತ್ಪಾದಕತೆ ಹೆಚ್ಚಿಸುವುದು ಹೇಗೆ? ಇದರಲ್ಲಿ ವಿಜ್ಞಾನದ ಪಾತ್ರ ಮಹತ್ವ ಪಡೆಯುತ್ತದೆ. ತಳಿಯನ್ನು ಉತ್ತಮಪಡಿಸುವುದು, ಕೃತಕ ಗರ್ಭಧಾರಣೆ, ಭ್ರೂಣ ವರ್ಗಾವಣೆಯಂತಹ ಕ್ರಮಗಳನ್ನು ಹೈನುಗಾರಿಕೆಯಲ್ಲಿ ಕೈಗೊಳ್ಳಲಾಗಿದೆ. ಸಾಂಪ್ರದಾಯಿಕ ಕೃಷಿಗೆ ಇದನ್ನು ಅನ್ವಯಿಸಿದರೆ, ನಾವು ಕೃಷಿಯ ಉದ್ಯಮೀಕರಣದ ಬಗ್ಗೆ ಯೋಚಿಸಿ, ದೊಡ್ಡ ಗಾತ್ರದ ಜಮೀನು, ಟ್ರ್ಯಾಕ್ಟರಿನಿಂದ ಆಳವಾಗಿ ಭೂಮಿಯನ್ನು ಉಳುವುದು, ಧಾರಾಳವಾಗಿ ನೀರು, ರಸಗೊಬ್ಬರ, ಕೀಟನಾಶಕಗಳನ್ನು ಬಳಸುವತ್ತ ಸಾಗುತ್ತೇವೆ. ಸುಸ್ಥಿರತೆಯ ಬಗ್ಗೆ ಕಾಳಜಿಯಿರುವವರು ನೈಸರ್ಗಿಕ ಕೃಷಿ, ಸಾವಯವ ಕೃಷಿ ಮತ್ತು ಸಿಸ್ಟಮ್ಯಾಟಿಕ್ ರೈಸ್ (ಅಥವಾ ವೀಟ್) ಇಂಟೆನ್ಸಿಫಿಕೇಷನ್ನಿನಂತಹ ಕ್ರಮಗಳನ್ನು ಕೈಗೊಳ್ಳಬಹುದು.

ಹೈನುಗಾರಿಕೆಯಲ್ಲಿ ಸುಮಾರು ಐದು ದಶಕಗಳ ಕಾಲ ತೆರಿಗೆದಾರರ ಹಣವನ್ನು ಶಿಸ್ತುಬದ್ಧವಾಗಿ ಹೈನುಗಾರಿಕೆಯ ಸುತ್ತಲಿರುವ ಮಾರುಕಟ್ಟೆಯ ಮೂಲಸೌಕರ್ಯ ಮತ್ತು ರೈತಸ್ನೇಹಿ ಪರಿಸರ ಕಟ್ಟಲು ಹೂಡಲಾಯಿತು. ಸರ್ಕಾರದ ಆರ್ಥಿಕ ಸಂಪನ್ಮೂಲದ ಹೂಡಿಕೆ ಸಹ ಬಹಳಷ್ಟಿದ್ದರೂ ಅದು ವ್ಯಾಪಾರದ ಯಾವುದೇ ಸೂತ್ರಗಳನ್ನು ಉಲ್ಲಂಘಿಸಿ ಮಾರುಕಟ್ಟೆಯಲ್ಲಿ ಏರುಪೇರನ್ನು ಉಂಟು ಮಾಡಲಿಲ್ಲ. ಸುಧಾರಣಾವಾದಿಗಳು ಅಮುಲ್‌ನ ದಕ್ಷತೆಯನ್ನು ಉದಾಹರಿಸಿ, ಮಾರುಕಟ್ಟೆ ವ್ಯವಸ್ಥೆಯಲ್ಲಿ ಎಲ್ಲವೂ ಚೆನ್ನಾಗಿವೆಯೆಂದು ವಾದಿಸುತ್ತಾರೆ. ಅವರಿಗೆ ಗೋಚರಿಸುವುದು ಸಂಸ್ಕರಣೆ, ಜಾಹೀರಾತು, ಮಾರುಕಟ್ಟೆ, ಪಾರ್ಲರುಗಳ ಹೊರಗಿನ ಪದರವಷ್ಟೇ. ಅದರ ಹಿಂದಿರುವ ಮೂಲಸೌಕರ್ಯ ವೃದ್ಧಿಯಲ್ಲಿ ಸರ್ಕಾರಿ ಹೂಡಿಕೆ ಮತ್ತು ಸಬ್ಸಿಡಿಗಳು ಕಾಣುವುದಿಲ್ಲ. ಸಹಕಾರ ವ್ಯವಸ್ಥೆಯ ವಿಚಾರಧಾರೆಯು ಜನಸ್ನೇಹಿ- ರೈತಸ್ನೇಹಿ ಎನ್ನುವ ಒಂದು ತಾತ್ವಿಕ ಪದರದ ಹೊಳಪನ್ನು ಒದಗಿಸುತ್ತದೆ ಅಷ್ಟೇ. ಮಾರುಕಟ್ಟೆಗಳು ರೈತರ ಪರವಾಗಿ ಕೃಷಿ ಕ್ಷೇತ್ರದಲ್ಲಿ ಸಶಕ್ತವಾಗಿ ಕೆಲಸ ಮಾಡಲು ಬೇಕಾದ ಮೂಲಸೌಕರ್ಯಗಳ ಮೇಲೆ ನಾವು ಬಹಳಷ್ಟು ಹೂಡಿಕೆ ಮಾಡಿದ್ದೇವೆಯೇ ಎಂದು ಕೇಳಿಕೊಳ್ಳಬೇಕಾಗಿದೆ.

ಆದರೆ ನಾವು ಎಲ್ಲವೂ ಚೆನ್ನಾಗಿದೆ ಎನ್ನುವ ಭ್ರಮೆಯಲ್ಲಿದ್ದರೆ ಏನು ತಾನೇ ಮಾಡಬಹುದು? ನಿದ್ರೆಯಲ್ಲಿ ಇರುವವರನ್ನು ಎಬ್ಬಿಸಬಹುದು, ಆದರೆ ನಿದ್ರೆಯೆಂದು ನಟಿಸುವವರನ್ನು ಎಬ್ಬಿಸುವುದು ಹೇಗೆ?

ಚುರುಮುರಿ

ಕೋವಿಡ್ ಕ್ರೋವ್ಯಾಕ್ಸಿನ್

• ಲಿಂಗರಾಜು ಡಿ.ಎಸ್.

'**ಕೋವಿಡ್** ಹೊಸೊಸಾ ತಳಿ ವಕ್ಕರಿಸ್ತಾ ಅದಂತೆ, ಮಾಸ್ಕು ಹಾಕ್ಯಂಡು ಹುಸಾರಾಗಿರಬೇಕಂತೆ. ಇನ್ನು ಮುಂದ್ಲ ಮೂರು ತಿಂಗಳು ಬಲೆ ಕಷ್ಟವಂತೆ' ಅಂತ ಸುದ್ದಿ ಸಿಡಿಸಿದೆ.

'ವ್ಯಾಕ್ಸೀನ್ ತಗಳಿ, ಬೆಡ್ಡು, ವೆಂಟಿಲೇಟರ್ರು, ಆಕ್ಸಿಜನ್ನು ಪ್ಲಾಂಟು ಹಾಕ್ತಿವಿ. ಇದು ಎಷ್ಟಾದಲ್ಲೇ ದೊಡ್ಡದು ಅಂತ ಪುಂಗಿ ದುಡ್ಡು-ಕಾಸಿಗೆ ದಾರಿ ಮಾಡಿಕ್ಯತಾವ್ರೆ' ಅಂದ್ರು ತುರೇಮಣೆ.

'ಕೊರೋನ ಬರದಂಗೆ ತಿಂಗಳಿಗೊಂದು ಸೂಜಿ ತಕ್ಕಂಡ್ರೂ ಉಪಯೋಗಿಲ್ಲ ಕನ್ರೋ. ಪಿಣ್ಣಗೆ ಅವರೆಕಾಳು ಅಮ್ರ ಉಂಡು ಮೂಗಿನೊಳಿಕ್ಕೆ ಹತ್ತಿ ಗಿಡಿದುಕೊಂಡು ತಲೆದಸಿ ಊದುಗಡ್ಡಿ ಹಚ್ಚಿ ಮಡಗಿ ಅರ್ಧಗಂಟೆ ಕಣ್ಣುಮುಚ್ಚಿಗ್ಯಂಡು ಅಲ್ಲಾಡದೇ ಮನೀಕಂಡು ನಿದ್ದೆ ಮಾಡಿದ್ರೆ, ನಿದ್ರಾವಸ್ಥೆ ನೋಡಿ ಕೊರೋನಾ ತೃಪ್ತಿಯಿಂದ ಹೊಂಟೋಯ್ತದೆ ಅಂತ ನಿದ್ರಾಂಗನಾ ಸ್ವಾಮಿಗಳು ಅಪ್ಪಣೆ ಕೊಟ್ಟವ್ರೆ!' ಅಂತು ಯಂಟಪ್ಪಣ್ಣ.

'ಯಂಟಪ್ಪಣ್ಣ ಕಾಶ್ಮೋರ ಕತೆ ಬ್ಯಾಡಿ!' ಅಂತಂದೆ.

'ನಾನಂತೂ ತಯಾರಾಗಿವ್ನಿ. ಬನ್ನಿ ನೋಡೂರಿ!' ಚಂದ್ರು ಕರೆದುದ್ದಕ್ಕೆ ಅವನ ತೋಟದ ಮನೆಗೆ ಹೋದ್ವಿ. ಅಲ್ಲಿ ಕಾರ್ಪೆಂಟರುಗಳು ನೂರಾರು ಸಣ್ಣ ಕಿಟಕಿ ಮಾಡಿ ಮಡಗಿದ್ರು. ಮನೆ ಸುತ್ತಲೂ ಯಾವ್ಯಾವುದೋ ಗಿಡ ಹಾಕಿದ್ದ.

'ಎಲ್ಲೋ ಕೊರೋನಕ್ಕೆ ತಯಾರಾಯ್ತಿವ್ನಿ ಅಂದೋನು ಈಟೊಂತರಾ ಗವಾಕ್ಷಿ ಮಾಡಿಸ್ತಿದ್ದೀಯಲ್ಲೋ?' ತುರೇಮಣೆ ಕೇಳಿದರು.

'ಅಣೈ, ಹೋದ್ಸಾರಿ ಕೊರೋನಾ ಟೇಮಲ್ಲಿ ಗಾಳಿ-ಬೆಳಕಿಗೆ ವೆಂಟಿಲೇಟರ್ ಇಲ್ದೆ ಉಸುರುಗಟ್ಟಿ ಸಾವಿರಾರು ಜನ ಸಾಯಲಿಲ್ಲವರಾ, ಅದುಕ್ಕೆ ಹಲಸಿನ ಮರದೇಲಿ ವೆಂಟಿಲೇಟರ್ ಕಿಟಕಿ ಮಾಡ್ಸಿವ್ನಿ. ಮನಿಪ್ಲಾಂಟು, ಅಡಕೆ ಮಡಿ ನೋಡಿದ್ರಲ್ಲಾ ಅವೆಲ್ಲಾ ಆಕ್ಸಿಜನ್ ಉತ್ಪಾದನೆ ಪ್ಲಾಂಟುಗಳು. ಇವುನ್ನೆಲ್ಲಾ ಖರೀದಿ ಮಾಡಕ್ಕೆ ಮಿನಿಸ್ಟರಿಗೆ ವಸಿ ಹೇಳಿ' ಚಂದ್ರು ಹೊಸೆದ.

'ಚಂದ್ರು ವೆಂಟಿಲೇಟರ್ರು, ಆಕ್ಸಿಜನ್ ಪ್ಲಾಂಟು ಅಂದ್ರೆ ಕಿಟಕಿ, ಗಿಡ ಅಂತ ತಿಳುಕಂಡವ್ನೆ! ಇವರಿಬ್ಬರೂ ಸೇರಿ ನಾಳಾಕೆ ಕಾಗೆ ಹಿಡಕಬಂದು ಕ್ರೋವ್ಯಾಕ್ಸಿನ್ ಲಸಿಕೆ ಮಾಡಿದ್ದೀವಿ ಅಂತ ಪುಂಗ್ತರೇನೋ' ಅಂತ ತುರೇಮಣೆ ಮಕ್ಕುಗಿದರು.

ಸಂಗತ

ಹೊಸ ವಿ.ವಿ: ಯಾರನ್ನು ಮೆಚ್ಚಿಸಲು?

ಇದೊಂದು ನಿರರ್ಥಕವಾದ ಶೈಕ್ಷಣಿಕ ಆಲೋಚನೆಯೇ ಸರಿ

• ಎಂ.ಎಸ್.ರಘುನಾಥ್

ಬ್ರಿಟನ್‌ನಲ್ಲಿರುವ ಅನೇಕ ವಿಶ್ವವಿದ್ಯಾಲಯಗಳು -ಪ್ರತಿಷ್ಠಿತವಾದವೂ ಸೇರಿ- ಹಣಕಾಸಿನ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಇಂದು ಬಹಳ ಕಷ್ಟಪಡುತ್ತಿವೆ. ಆಕ್ಸ್‌ಫರ್ಡ್, ಕೇಂಬ್ರಿಜ್‌ನಂತಹ ವಿಶ್ವವಿದ್ಯಾಲಯಗಳು ಜಾಗತಿಕ ಉನ್ನತ ಶಿಕ್ಷಣ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಗಳಿಸಿರುವುದೇನೊ ಸರಿ. ಆದರೆ ಕೆಲವು ದೊಡ್ಡ ವಿಶ್ವವಿದ್ಯಾಲಯಗಳು, ಇಳಿಮುಖವಾಗುತ್ತಿರುವ ಬ್ರಿಟನ್ನಿನ ಉನ್ನತ ಶಿಕ್ಷಣದ ಮುಖಗವಸನ್ನು ಹೊದ್ದುಕೊಂಡಿವೆ.

ದೇಶದ ಅನೇಕ ವಿಶ್ವವಿದ್ಯಾಲಯಗಳು ಹಣಕಾಸಿನ ಕೊರತೆ ಹಾಗೂ ಸಿಬ್ಬಂದಿಯ ಮುಷ್ಕರದಿಂದ ಹಿನ್ನಡೆ ಅನುಭವಿಸುತ್ತಿವೆ. 150 ವಿಶ್ವವಿದ್ಯಾಲಯಗಳ ಸುಮಾರು 70 ಸಾವಿರ ಸಿಬ್ಬಂದಿಯು ಕಡಿಮೆ ಸಂಬಳ, ಪಿಂಚಣಿ ಕಡಿತ ಹಾಗೂ ಕಾರ್ಯಭಾರದ ಸ್ಥಿತಿಗತಿಯ ವಿರುದ್ಧ ಇತ್ತೀಚೆಗಷ್ಟೆ ಪ್ರತಿಭಟನೆ ನಡೆಸಿದ್ದಾರೆ. ಇದೇ ವೇಳೆ ಬ್ರಿಟಿಷ್ ಸರ್ಕಾರವು ವಿದೇಶಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡುವ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ.

ಖ್ಯಾತ ವಿಶ್ವವಿದ್ಯಾಲಯಗಳು ಇದ್ದುದರಲ್ಲಿ ತಮ್ಮ ಮಟ್ಟವನ್ನು ಕಾಯ್ದುಕೊಂಡರೆ, ಮಿಕ್ಕವುಗಳ ಪರಿಸ್ಥಿತಿ ಹದಗೆಟ್ಟಿದೆ ಎಂಬ ವರದಿಗಳಿವೆ. ಬ್ರೆಕ್ಸಿಟ್ ವಿವಾದ ಹಾಗೂ ಕೋವಿಡ್ ಪರಿಸ್ಥಿತಿಯ ನಿಭಾವಣೆಯು ವಿಶ್ವ- ವಿದ್ಯಾಲಯಗಳ ಕಾರ್ಯವೈಖರಿ ಮೇಲೆ ಉಂಟು ಮಾಡಿದ ಪರಿಣಾಮ ಇನ್ನೂ ತಿಳಿಗೊಂಡಿಲ್ಲ. ಕೆಲವು ಸಂಸ್ಥೆಗಳಂತೂ ವಿದೇಶಿ ವಿದ್ಯಾರ್ಥಿಗಳು ನೀಡುವ ಅಧಿಕ ಶುಲ್ಕವನ್ನೇ ಹೆಚ್ಚಾಗಿ ನೆಚ್ಚಿಕೊಂಡಿವೆ. ಬ್ರಿಟನ್ನಿನಲ್ಲಿರುವ ಅನುದಾನದ ಪರಿಸ್ಥಿತಿಯು ರಾಜಿ ಮಾಡಿಕೊಂಡಂತಹ ಸ್ಥಿತಿಯಲ್ಲಿದೆ ಎಂದು ಬ್ಲೂಮ್‌ಬರ್ಗ್ ಸಂಸ್ಥೆ ವರದಿ ಮಾಡಿದೆ. ಚೀನಾ ವಿದ್ಯಾರ್ಥಿಗಳ ಕಾಲೇಜು ಪ್ರವೇಶಾತಿ ಪ್ರಮಾಣ ಕುಸಿದಿದೆ. ಅನೇಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಟ್ಟ ಸಹ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿಲ್ಲ. ಬ್ರಿಟನ್ ಸರ್ಕಾರವು ಆರ್ಥಿಕ ನೆರವಿಗೆ ಧಾವಿಸದಿದ್ದರೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂದು ಉನ್ನತ ಶಿಕ್ಷಣ ಅಕಾಡೆಮಿ ಹೇಳಿರುವುದಾಗಿ ರೇಟಿಂಗ್ ಏಜೆನ್ಸಿಯೊಂದು ತಿಳಿಸಿದೆ.

ಈ ಎಚ್ಚರಿಕೆಯ ಗಂಟೆಯನ್ನು ಮುಂದಿಟ್ಟು, ನಮ್ಮ ರಾಜ್ಯದಲ್ಲಿ ಸದ್ದು ಮಾಡುತ್ತಿರುವ ಹೊಸ ವಿಶ್ವವಿದ್ಯಾ- ಲಯಗಳ ಸ್ಥಾಪನೆ ಕುರಿತ ಚರ್ಚೆಯನ್ನು ಮುನ್ನಡೆಸಬೇಕಾಗಿದೆ. ಹೊಸ ವಿಶ್ವವಿದ್ಯಾಲಯಗಳು ಆರಂಭದಿಂದಲೂ ಎದುರಿಸುತ್ತಿರುವ ಮೂಲಸೌಕರ್ಯ ಕೊರತೆ, ಹಣಕಾಸಿನ ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರದ ಹೆಣಗಾಟ, ಕಾಯಂ ಅಧ್ಯಾಪಕರ ಕೊರತೆಯಿಂದ ರೋಸಿಹೋಗಿರುವ ಅಧ್ಯಾಪಕ, ವಿದ್ಯಾರ್ಥಿ ಸಮೂಹದ ನಿಸ್ಸಹಾಯಕತೆ ಕರುಣಾಜನಕ ಶೈಕ್ಷಣಿಕ ಪರಿಸ್ಥಿತಿಯನ್ನು ಎತ್ತಿತೋರಿಸುತ್ತವೆ. ವಿಶ್ವವಿದ್ಯಾಲಯಗಳನ್ನು ಆರಂಭಿಸಿದ ಧ್ಯೇಯೋದ್ದೇಶಗಳಿಗೂ ನಂತರದ ವಾಸ್ತವ ಚಿತ್ರಣಕ್ಕೂ ಆಕಾಶ ಭೂಮಿಯಷ್ಟು ಅಂತರ ಕಾಣುತ್ತದೆ. ಗೊಂದಲಮಯ ಶೈಕ್ಷಣಿಕ ನೀತಿಯಿಂದ, ಕಾಲೇಜುಗಳಿಗಿಂತ ವಿಶ್ವವಿದ್ಯಾಲಯಗಳೇ ಹೆಚ್ಚಿನ ಸಂಖ್ಯೆಯಲ್ಲಿವೆಯೇನೋ ಎಂಬ ಆತಂಕ ಸೃಷ್ಟಿಯಾಗುತ್ತಿದೆ.

ಒಂದು ಕಾಲೇಜಿನ ಸಮಗ್ರ ಶೈಕ್ಷಣಿಕ ಅಭಿವೃದ್ಧಿಯೇ ಹಿಮಾಲಯ ಹತ್ತಿದಷ್ಟು ಕಠಿಣವಾಗಿರುವಾಗ, ಸರ್ಕಾರ ಗೊತ್ತುಗುರಿಯಿಲ್ಲದಂತೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಹೊರಟಿರುವುದು ಮೂರ್ಖತನದ ಪರಮಾವಧಿ ಎಂದೇ ಹೇಳಬೇಕು. ಜಿಲ್ಲೆಗೊಂದು ವಿಶ್ವವಿದ್ಯಾಲಯ ಇರಬೇಕು ಎಂಬುದು ಹೊಸ ಶಿಕ್ಷಣ ನೀತಿಯ ಶಿಫಾರಸಾಗಿರಬಹುದು. ಆದರೆ, ಶೈಕ್ಷಣಿಕ ಸುಧಾರಣೆ ಬಗ್ಗೆ ಅದು ಕುರುಡಾಗಿದೆಯೇ? ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪನೆಯೇ ಮೂಲ ಉದ್ದೇಶವಾದರೆ, ಅದರ ಸಾಧಕ-ಬಾಧಕಗಳ ಬಗ್ಗೆ ಲವಲೇಶವೂ ಚಿಂತೆ ಬೇಡವೇ? ಒಂದೆಡೆ, ಸರ್ಕಾರಿ ವಿಶ್ವವಿದ್ಯಾಲಯಗಳ ಆಧಿಕ್ಯ, ಮತ್ತೊಂದೆಡೆ, ಅಣಬೆಗಳಂತೆ ಹುಟ್ಟುತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು- ಇವುಗಳ ಮಧ್ಯೆ ವಿದ್ಯಾರ್ಥಿಗಳು ಮತ್ತು ಪೋಷಕರು ಅಡಕತ್ತರಿಯಲ್ಲಿ ಸಿಲುಕಿದಂತೆ ಇದ್ದಾರೆ. ಇಂತಹ ಅತಂತ್ರ ಸ್ಥಿತಿ ಇನ್ನೂ ಎಷ್ಟು ಕಾಲ ಬಾಧಿಸಬೇಕು?

ಇಷ್ಟಾದರೂ ಸರ್ಕಾರಿ ವಿಶ್ವವಿದ್ಯಾಲಯಗಳು ಇಲ್ಲದಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಅಲ್ಲಿನ ಶಾಸಕರು ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಒತ್ತಡ ಹೇರುತ್ತಿದ್ದಾರೆ ಎಂಬ ಮಾತಿದೆ. ಹಾಗಾದಲ್ಲಿ, ಈಗಿರುವ ದೊಡ್ಡ ವಿಶ್ವವಿದ್ಯಾಲಯಗಳ ವಿಭಜನೆಯಿಂದ ಮೂಲಸಂಸ್ಥೆಯು ಚಿಕ್ಕದಾಗಿ, ಅದರ ಸೌಲಭ್ಯಗಳ ಬಳಕೆಯು ಸೀಮಿತವಾಗುತ್ತದೆ. ರಾಜ್ಯದಲ್ಲೇ ಅತ್ಯಂತ ಹಳೆಯ ಹಾಗೂ ದೊಡ್ಡದಾದ ಮೈಸೂರು ವಿಶ್ವವಿದ್ಯಾಲಯದ ಸಂಪನ್ಮೂಲಗಳ ಪ್ರಯೋಜನವು ಹತ್ತಿರದ ಜಿಲ್ಲೆಗಳಿಗೆ ಸಿಗದೆ- ಅಕ್ಕಪಕ್ಕದಲ್ಲಿ ಹೊಸ ವಿಶ್ವವಿದ್ಯಾಲಯಗಳು ತಲೆಯೆತ್ತಿರುವುದರಿಂದ- ಅವನ್ನು ಸೂಕ್ತವಾಗಿ ಬಳಸಿಕೊಳ್ಳುವಲ್ಲಿ ವೈಫಲ್ಯ ಎದುರಾಗುತ್ತಿದೆ.

ಹೊಸ ವಿಶ್ವವಿದ್ಯಾಲಯಗಳು ಹಣಕಾಸಿನ ಕೊರತೆಯಿಂದ ಮಾತ್ರವಲ್ಲ ಬೌದ್ಧಿಕ ದಾರಿದ್ರ್ಯದಿಂದಲೂ ಸೊರಗುತ್ತಿವೆ. ಅವುಗಳನ್ನು ಕಾಡುತ್ತಿರುವುದು ಬರೀ ಮಾನವ ಸಂಪನ್ಮೂಲ ಅಥವಾ ಹಣಕಾಸಿನ ಸಂಪನ್ಮೂಲವಲ್ಲ. ವಿಶ್ವವಿದ್ಯಾಲಯಗಳ ಮಹತ್ತರ ಉದ್ದೇಶವಾದ ಸಂಶೋಧನೆ ಹಾಗೂ ಶೈಕ್ಷಣಿಕ ಆವಿಷ್ಕಾರಗಳು ನನೆಗುದಿಗೆ ಬಿದ್ದಿವೆ. ಹಳೆಯ ವಿಶ್ವವಿದ್ಯಾಲಯಗಳ ಸ್ಥಿತಿಗತಿಯೂ ಸಮಾಧಾನಕರವಾಗಿಲ್ಲ.

ಬ್ರಿಟನ್‌ನಂತಹ ಮುಂದುವರಿದ ರಾಷ್ಟ್ರದ ಶೈಕ್ಷಣಿಕ ಸ್ಥಿತಿಯೇ ಹದಗೆಡುತ್ತಿರುವಾಗ, ನೂರಾರು ಜಟಿಲ ಸಮಸ್ಯೆಗಳುಳ್ಳ ನಮ್ಮಂತಹ ರಾಜ್ಯದಲ್ಲಿ ಮತ್ತಷ್ಟು ವಿಶ್ವವಿದ್ಯಾಲಯಗಳ ಸ್ಥಾಪನೆ ಬೇಕೆ? ಯಾರನ್ನು ಮೆಚ್ಚಿಸಲು ಈ ನಿರರ್ಥಕವಾದ ಶೈಕ್ಷಣಿಕ ಆಲೋಚನೆ?

ಲೇಖಕ: ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ

ವಾಚಕರ ವಾಣಿ

ಪಠ್ಯದಲ್ಲಿರಲಿ ಮಹನೀಯರ ಪರಿಚಯ

ಪುನೀತ್ ರಾಜ್‌ಕುಮಾರ್ ಅವರ ಬಾಲ್ಯದ ಸಂಗತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯದಲ್ಲಿ ಅಳವಡಿಸಿರುವ ಸುದ್ದಿ (ಪ್ರ.ವಾ., ಡಿ. 23) ಎಲ್ಲರನ್ನೂ ತಣಿಸುವಂತಹುದೆ. ಅಂತೆಯೇ ಕರ್ನಾಟಕದ ಸಾಮಾಜಿಕ, ಸಾರಸ್ವತ, ರಾಜಕೀಯ ಲೋಕದಲ್ಲಿ ಹಾಗೂ ಕನ್ನಡ ಭಾಷೆಯ ಸಮೃದ್ಧಿಗಾಗಿ ಹಗಲಿರುಳು ಶ್ರಮಿಸಿದ ಮಹನೀಯರು ಬಹಳಷ್ಟು ಮಂದಿ ಇದ್ದಾರೆ.

ಅಂತಹ ದಾರ್ಶನಿಕರ ಕಿರು ಪರಿಚಯ ಡಿವಿಜಿ ಅವರ 'ಜ್ಞಾಪಕ ಚಿತ್ರಶಾಲೆ', ವಿ.ಸೀತಾರಾಮಯ್ಯನವರ 'ಮಹನೀಯರು' ಹಾಗೂ ಹಲವಾರು ಸಾಹಿತಿವರೇಣ್ಯರ ಗ್ರಂಥಗಳಲ್ಲಿ ದೊರೆಯುತ್ತದೆ. ಅಂತಹವರ ಧ್ಯೇಯ, ಜೀವನಮೌಲ್ಯ, ಜೀವನಶೈಲಿ, ಉದಾತ್ತ ಮನೋಭಾವಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ತಿಳಿಯಪಡಿಸಲು ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಅವಕಾಶ ಮಾಡಿಕೊಡಬೇಕು.

ರಮೇಶ್, ಬೆಂಗಳೂರು

ನಿವೃತ್ತ ನೌಕರರ ಆಗ್ರಹ ಮನ್ನಿಸಿ

ಹೊಸ ಪಿಂಚಣಿ ಯೋಜನೆ ವ್ಯಾಪ್ತಿಗೊಳಪಡುವ (ಎನ್‌ಪಿಎಸ್) ರಾಜ್ಯದ ನೌಕರರು ಹಳೆಯ ಪಿಂಚಣಿ ಪದ್ಧತಿ ಜಾರಿಗೆ ಆಗ್ರಹಿಸಿ, ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ದಿನದಿಂದ ದಿನಕ್ಕೆ ತೀವ್ರತೆ ಪಡೆದುಕೊಳ್ಳುತ್ತಿದೆ. ಅಷ್ಟಾದರೂ ಸರ್ಕಾರ ಈ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ದುರದೃಷ್ಟಕರ. ಸರ್ಕಾರದ ಆಡಳಿತಯಂತ್ರದ ಭಾಗವಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತನಾದ ನೌಕರ ತನಗೆ ಸೂಕ್ತ ನಿವೃತ್ತಿ ವೇತನ ಕೊಡಿ ಎಂದು ಕೇಳುವ ದೈನೇಸಿ ಸ್ಥಿತಿ ಬಾರದಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯ. ಇನ್ನಾದರೂ ಸರ್ಕಾರ ಹಳೆಯ ಪಿಂಚಣಿ ಸೌಲಭ್ಯ ಜಾರಿಗೊಳಿಸಿ ನೌಕರರು ಕೊನೆಗಾಲದ ಬದುಕನ್ನು ನೆಮ್ಮದಿಯಿಂದ ಕಳೆಯುವಂತೆ ಮಾಡಲಿ.

ಆರ್.ಟಿ.ವೆಂಕಟೇಶ್ ಬಾಬು, ತುಮಕೂರು

ವಿದ್ಯಾರ್ಥಿಗಳಿಗೆ ಹೆರಿಗೆ ರಜೆ: ಅಮೋಘ ನಡೆ

ಕೇರಳದ ಕೊಟ್ಟಾಯಂನಲ್ಲಿರುವ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯವು 18 ವರ್ಷ ಮೇಲ್ಪಟ್ಟ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿಗೆ 60 ದಿನಗಳ ಹೆರಿಗೆ ರಜೆಯನ್ನು ಘೋಷಿಸಿರುವುದು ಸ್ವಾಗತಾರ್ಹ. ಹೆರಿಗೆ ಅಥವಾ ಹೆರಿಗೆ ಪೂರ್ವದ ದಿನಗಳಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದು ಎಂಬ ಸದುದ್ದೇಶ ಈ ನಿರ್ಧಾರದ ಹಿಂದಿದೆ. ಇಂತಹ ಅಮೋಘ ನಡೆಯನ್ನು ನಮ್ಮ ರಾಜ್ಯದಲ್ಲಿಯೂ ಅಳವಡಿಸಿಕೊಂಡರೆ, ತಾಯಿ ಮತ್ತು ಮಗುವಿನ ಆರೋಗ್ಯ ಸುಧಾರಣೆಯಾಗುವುದು, ಮಗುವಿಗೆ ತಾಯಿಯ ಆರೈಕೆ ಸಿಗುವುದರೊಂದಿಗೆ, ಹೆಣ್ಣುಮಕ್ಕಳ ಶಿಕ್ಷಣಕ್ಕೂ ಯಾವುದೇ ತೊಂದರೆಯಾಗುವುದಿಲ್ಲ.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಮದ್ಯವ್ಯಸನಿಗಳ ಬಗ್ಗೆ ವಿರೋಧಾಭಾಸದ ಹೇಳಿಕೆ

'ಮದ್ಯವ್ಯಸನಿ ಅಧಿಕಾರಿಗಿಂತ ವ್ಯಸನಗಳಿಲ್ಲದ ಆಟೊರಿಕ್ಷಾ ಚಾಲಕ ಇಲ್ಲವೇ ಕೂಲಿಕಾರ್ಮಿಕ ಉತ್ತಮ ವರ. ಹಾಗಾಗಿ, ಪೋಷಕರು ತಮ್ಮ ಪುತ್ರಿಯರನ್ನು ಅಥವಾ ಸಹೋದರಿಯರನ್ನು ಮದ್ಯವ್ಯಸನಿಗಳಿಗೆ ವಿವಾಹ ಮಾಡಿಕೊಡಬಾರದು' ಎಂದು ಕೇಂದ್ರ ಸಚಿವ ಕೌಶಲ್ ಕಿಶೋರ್ ಮನವಿ ಮಾಡಿದ್ದಾರೆ. ಸರ್ಕಾರವೇ ಅಬಕಾರಿ ಇಲಾಖೆಯನ್ನು ಹೊಂದಿ, ಅದರ ಮುಖಾಂತರ ಕೋಟ್ಯಂತರ ರೂಪಾಯಿಯನ್ನು ಬೊಕ್ಕಸಕ್ಕೆ ತುಂಬಿಸಿ- ಕೊಳ್ಳುತ್ತದೆ. ಇಲಾಖೆಯ ಅಧಿಕಾರಿಗಳಿಗೆ ಮಾರಾಟದ ಗುರಿಯನ್ನೂ ನೀಡುತ್ತದೆ. ಅಷ್ಟೇ ಅಲ್ಲದೆ ಮದ್ಯದ ಕಾರ್ಖಾನೆಗಳಿಗೆ ಅನುಮತಿ ನೀಡಿ, ಅದನ್ನು ಮಾರಲು ಅಂಗಡಿಗಳಿಗೆ ಪರವಾನಗಿಯನ್ನೂ ನೀಡುತ್ತದೆ. ಇದೆಲ್ಲವನ್ನೂ ಸರ್ಕಾರವೇ ಮಾಡುತ್ತಿರುವಾಗ, ವ್ಯಸನಿಗಳಿಗೆ ಹೆಣ್ಣುಮಕ್ಕಳನ್ನು ಕೊಡಬೇಡಿ ಎನ್ನುವುದು ಸಚಿವರ ವಿರೋಧಾಭಾಸದ ಹೇಳಿಕೆಯಾಗುತ್ತದೆ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಈಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳು ಸಹ ಕುಡಿತಕ್ಕೆ ಈಡಾಗುತ್ತಿರುವುದು. ಬರೀ ಮದ್ಯವೇ ಅಲ್ಲದೆ ಬೇರೆಬೇರೆ ರೀತಿಯ ಅಮಲು ಪದಾರ್ಥಗಳನ್ನು ಸೇವಿಸುವುದರ ಮೂಲಕ ತನ್ನ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದೆ ಯುವಜನಾಂಗ. ಮೊದಲು ಇದಕ್ಕೆ ಕಡಿವಾಣ ಹಾಕಬೇಕಿದೆ. ಅಷ್ಟೇ ಅಲ್ಲದೆ, ಮದ್ಯವ್ಯಸನಿ ಆಗದೆಯೂ ಸಂಗಾತಿಗೆ ಬೇರೆ ಬೇರೆ ರೀತಿಯ ತೊಂದರೆ ನೀಡುವ ಸಂಭವವನ್ನೂ ಅಲ್ಲಗಳೆಯುವಂತಿಲ್ಲ. ಹಾಗಾಗಿ ಹುಡುಗನ ಹಿನ್ನೆಲೆಯನ್ನು ಚೆನ್ನಾಗಿ ಅರಿತು, ನಡವಳಿಕೆಯನ್ನು ಖಾತರಿಪಡಿಸಿಕೊಂಡ ನಂತರವೇ ಹುಡುಗಿಯ ಮದುವೆ ಮಾಡಿಕೊಡುವುದು ಲೇಸು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕೊರೊನಾ- ಮೀಸಲಾತಿ

ಕೊರೊನಾ ಒಬ್ಬರಿಂದ
ಒಬ್ಬರಿಗೆ ಹರಡುತ್ತದೆ,
ಮೀಸಲಾತಿ ಜಾತಿಯಿಂದ
ಜಾತಿಗೆ ಹರಡುತ್ತಿದೆ,
ಕೊರೊನಾದಿಂದ
ಜನರಿಗೆ ಭಯ
ಮೀಸಲಾತಿಯಿಂದ
ಸರ್ಕಾರಕ್ಕೆ ಭಯ!

ನಂಜನಹಳ್ಳಿ ನಾರಾಯಣ, ಬೆಂಗಳೂರು

ಮೀಸಲಾತಿ: ಅರ್ಥ ಸ್ಪಷ್ಟವಾಗಲಿ

ಕರ್ನಾಟಕದ ಮೈಸೂರು ಅರಸರ ಕಾಲದಲ್ಲಿ, ಮಹಾರಾಷ್ಟ್ರದ ಸಯ್ಯಾಜಿರಾವ್ ಗಾಯಕವಾಡ ರಾಜರ ಆಡಳಿತದಲ್ಲಿ, ನಂತರ ಜಾರಿಗೆ ಬಂದ ಸಂವಿಧಾನದಲ್ಲಿ, ಸಮಾಜದಿಂದ ತುಳಿತಕ್ಕೆ ಒಳಗಾದ, ಅಸ್ಪೃಶ್ಯತೆಯಿಂದ ನಲುಗಿದ ಸಮುದಾಯಗಳಿಗೆ ಸಮಾಜದಲ್ಲಿ ಸಮಾನವಾದ ಸ್ಥಾನಮಾನ ಸಿಗಬೇಕು ಎಂಬ ಆಶಯದೊಂದಿಗೆ ಮೀಸಲಾತಿ ಪದ ಹುಟ್ಟಿಕೊಂಡಿತು. ಆದರೆ ಪ್ರಸ್ತುತ ಸಮಾಜದಲ್ಲಿ ಈ ಯಾವ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳದೆ ಮೀಸಲಾತಿ ಹಂಚಿಕೆ ಮಾಡಲಾಗುತ್ತಿದೆ. ಇದರಿಂದ ಮೀಸಲಾತಿ ಪದದ ಅರ್ಥವೇ ಗೊಂದಲಮಯವಾಗಿರುವುದು ದುರದೃಷ್ಟಕರ.

ಕರಿಲಿಂಗ ನಾಟೀಕಾರ್, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರೌಢಶಾಲೆ, ಪಿಯು ಪರೀಕ್ಷಾ ವಿಭಾಗಗಳು ವಿಲೀನ

ಪಿಯು ಕಾಲೇಜುಗಳಿನ್ನು ‘ಹಿರಿಯ ಪ್ರೌಢಶಾಲೆ’

ಕರ್ನಾಟಕದ ಪದವಿಪೂರ್ವ ಶಿಕ್ಷಣ ಗುಣಮಟ್ಟದಿಂದಾಗಿ ದೇಶದಲ್ಲೇ ಹೆಸರಾಗಿದೆ. ಅಸ್ಮಿತೆ ಉಳಿಸಿಕೊಳ್ಳಲು ಹೋರಾಟ ನಡೆಸಲು ಸಿದ್ಧ.
ಎ.ಎಚ್.ನಿಂಗೇಗೌಡ, ಅಧ್ಯಕ್ಷ, ಸರ್ಕಾರಿ ಪಿಯು ಕಾಲೇಜು ಉಪನ್ಯಾಸಕರ ಸಂಘ

ವಿಲೀನದಿಂದ ರಾಜ್ಯ ಪಠ್ಯ, ಸಿಬಿಎಸ್‌ಇ, ಐಸಿಎಸ್‌ಇ ಮಕ್ಕಳ ನಡುವಣ ಕಲಿಕಾ ಭಿನ್ನತೆ ಇಲ್ಲವಾಗಲಿದೆ. ನೀಟ್ ಸೇರಿದಂತೆ ಎಲ್ಲ ಪರೀಕ್ಷೆಗಳನ್ನೂ ಎದುರಿಸುವ ಸಾಮರ್ಥ್ಯ ಹೆಚ್ಚಲಿದೆ
ಶೋಭಾ ಸುರೇಶ್, ಪೋಷಕರು

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಗಣಿ ಉದ್ಯಮಿ ಜನಾರ್ದನ ರೆಡ್ಡಿ ಹೊಸ ಪಕ್ಷವನ್ನು ಘೋಷಿಸಿದ್ದಾರೆ. ಇದರಿಂದ ಬಿಜೆಪಿಗೆ ತೊಂದರೆ ಆಗುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪದವಿಪೂರ್ವ ಕಾಲೇಜು ಅಥವಾ ಜೂನಿಯರ್ ಕಾಲೇಜು ಎಂಬ ಪರಿಕಲ್ಪನೆಯೇ ಇನ್ನು ಮುಂದೆ ಇರುವುದಿಲ್ಲ. ಹತ್ತನೇ ತರಗತಿ ಉತ್ತೀರ್ಣರಾದ ಬಳಿಕ ಕಾಲೇಜಿಗೆ ಸೇರಿದ್ದೇವೆ ಎಂದು ಗರ್ವ ತೋರುವ ವಿದ್ಯಾರ್ಥಿಗಳ ಅವಕಾಶ ಇಲ್ಲವಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ, ಪದವಿಪೂರ್ವ ಕಾಲೇಜುಗಳನ್ನು ‘ಹಿರಿಯ ಪ್ರೌಢಶಾಲೆಗಳು’ ಎಂದು ಪರಿಗಣಿಸಲಾಗುವುದು. ಆದರೆ, ಈ ಬದಲಾವಣೆಯು ಉಪನ್ಯಾಸಕರಿಗೆ ಹಿಡಿಸಿಲ್ಲ. ಈ ಬದಲಾವಣೆಗೆ ಉಪನ್ಯಾಸಕ ವರ್ಗದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಶಿಕ್ಷಕರ ಗೌರವ ಮರು ಸ್ಥಾಪಿತವಾಗಬೇಕು ಎಂಬುದು ಎನ್‌ಇಪಿಯ ಪ್ರಮುಖ ಶಿಫಾರಸು. ಎಲ್ಲಾ ಶಿಕ್ಷಕರು ಅಂತರ್ ಸ್ತರಗಳಿಲ್ಲದೇ ಒಂದಾಗುವುದು ಭವಿಷ್ಯ ರೂಪಿಸಲು ಸಹಾಯಕ
ಡಾ.ಜಿ.ವಿ.ಹರಿಪ್ರಸಾದ್, ಎನ್‌ಎಸ್‌ಸಿ–ಟಿಎಸ್‌ಜಿ ಸಮಾಲೋಚಕ, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ.

ಪದವಿಪೂರ್ವ ಕಾಲೇಜುಗಳನ್ನು ಹಿರಿಯ ಪ್ರೌಢಶಾಲೆಗಳೆಂದು, ಪ್ರಥಮ, ದ್ವಿತೀಯ ಪಿಯುಸಿಗಳನ್ನು 11 ಹಾಗೂ 12ನೇ ತರಗತಿ ಎಂದು ಪರಿಗಣಿಸುವ ಅವಕಾಶವನ್ನು ಪರೀಕ್ಷಾ ಮಂಡಳಿ ತಿದ್ದುಪಡಿ ಕಾಯ್ದೆಯು ಒದಗಿಸಿದೆ. ಆದರೆ, ಕಾಲೇಜು ಮುಖ್ಯಸ್ಥರಾಗಿದ್ದ ಪ್ರಾಂಶುಪಾಲರು, ಉಪನ್ಯಾಸಕರ ಪದನಾಮಗಳನ್ನು ಈವರೆಗೆ ಬದಲಾವಣೆ ಮಾಡಿಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕಾಗಿ ರೂಪಿಸಲಾಗಿರುವ ಕಾರ್ಯಪಡೆ ಅಧ್ಯಕ್ಷ ಮದನ್ ಗೋಪಾಲ್ ಅವರ ವರದಿಯ ನಂತರ ಪದನಾಮಗಳು, ಪದವಿಪೂರ್ವ ಶಿಕ್ಷಣದ ಸ್ವರೂಪ ಬದಲಾಗಲಿವೆ ಎನ್ನುತ್ತವೆ ಶಿಕ್ಷಣ ಇಲಾಖೆಯ ಮೂಲಗಳು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದ ನಂತರ ರಾಜ್ಯದ ಪದವಿಪೂರ್ವ ಕಾಲೇಜುಗಳ ಸ್ವರೂಪ ಬದಲಾಗಲಿದೆ. ಕೇಂದ್ರದ ಶಿಕ್ಷಣ ಸಂಸ್ಥೆಗಳು, ಹಲವು ರಾಜ್ಯಗಳಲ್ಲಿ 11 ಮತ್ತು 12ನೇ ತರಗತಿಗಳನ್ನು ಹಿರಿಯ ಪ್ರೌಢಶಾಲೆಗಳೆಂದು ಈಗಾಗಲೇ ಪರಿಗಣಿಸಲಾಗುತ್ತಿದೆ. ಉಪನ್ಯಾಸಕರು ‘ಸ್ನಾತಕೋತ್ತರ ಪದವೀಧರ ಶಿಕ್ಷಕರಾಗಿ’ ಬದಲಾಗಲಿದ್ದಾರೆ. ಅವರಿಗೆ ಕನಿಷ್ಠ ಐದು ಬಡ್ತಿಗಳನ್ನು ನೀಡಲು, ಪ್ರತಿ ಹಂತದ ಶಿಕ್ಷಕರಿಗೂ ಅದೇ ನೀತಿ ಅನುಸರಿಸಲು, ಅಂಗನವಾಡಿಯಿಂದ ಉನ್ನತ ಶಿಕ್ಷಣದವರೆಗೂ ಶಿಕ್ಷಣ, ಶಿಕ್ಷಕ ವೃತ್ತಿಯ ಗೌರವ ಮರುಸ್ಥಾಪಿಸುವಂತಹ ಕ್ರಮಗಳನ್ನು ಕೈಗೊಳ್ಳಲು ಎನ್‌ಇಪಿ ಶಿಫಾರಸು ಮಾಡಿದೆ.

‘ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾಗಿ ಗಳಿಸಿಕೊಳ್ಳಬೇಕಾದ ಕಲಿಯುವ ಫಲಗಳನ್ನು ದೊರಕಿಸುವುದು, ಶಿಕ್ಷಣದ ಸಾಮರ್ಥ್ಯಗಳು ಸಮಾನವಾಗಿ ಸಿಗುವಂತಹ ಅವಕಾಶಗಳನ್ನು ಕಲ್ಪಿಸುವುದು ಹೊಸ ಶಿಕ್ಷಣ ನೀತಿಯ ಆಶಯ. ಅಂಗನವಾಡಿಯಿಂದ ವಿಶ್ವವಿದ್ಯಾಲಯ ದವರೆಗೆ ಎಲ್ಲರೂ ತಮ್ಮ ಅಸ್ಮಿತೆಯನ್ನು ಶಿಕ್ಷಕರು ಎಂದು ಗುರುತಿಸಿಕೊಳ್ಳು ವಂತಾದರೆ ಬಹಳಷ್ಟು ಕೆಲಸ ಆತ್ಮಸಾಕ್ಷಿಯ ಭಾಗವಾಗುತ್ತದೆ’ ಎನ್ನುತ್ತಾರೆ ಶಿಕ್ಷಣ ತಜ್ಞ ಹರಿಪ್ರಸಾದ್.

ವಿರೋಧ

ರಾಜ್ಯಸರ್ಕಾರ 1971–72ರಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಹುಟ್ಟುಹಾಕಿ ಎಸ್‌ಎಸ್‌ಎಲ್‌ಸಿ ಹಾಗೂ ಪದವಿಯ ಮಧ್ಯದಲ್ಲಿ ಎರಡು ವರ್ಷಗಳ ಕೋರ್ಸ್ ಆರಂಭಿಸಿತ್ತು. ಐದು ದಶಕಗಳಲ್ಲಿ ಪದವಿಪೂರ್ವ ಶಿಕ್ಷಣ ಸಾಕಷ್ಟು ಗುಣಾತ್ಮಕ, ರಚನಾತ್ಮಕ ಕಾರ್ಯಗಳನ್ನು ಮಾಡಿದೆ. ವಿದ್ಯಾರ್ಥಿಗಳ ಜೀವನದ ಮಹತ್ವದ ಘಟ್ಟ ಎಂದೇ ಭಾವಿಸುವ ಈ ಹಂತವನ್ನು ಉಪನ್ಯಾಸಕರು ಶ್ರಮವಹಿಸಿ ಕಟ್ಟಿದ್ದಾರೆ ಎನ್ನುತ್ತಾರೆ ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಈ ಹಂತವನ್ನೇ ಶಾಲಾ ಶಿಕ್ಷಣದಲ್ಲಿ ವಿಲೀನಗೊಳಿಸಲು ಶಿಫಾರಸು ಮಾಡಿರುವುದು ರಾಜ್ಯದ ಪಿಯು ಉಪನ್ಯಾಸಕರಲ್ಲಿ ತಲ್ಲಣ ಮೂಡಿಸಿದೆ. ಪದವಿ ಪೂರ್ವ ಕಾಲೇಜುಗಳನ್ನು ಪ್ರೌಢಶಾಲೆಯ ಒಳಗೆ ವಿಲೀನಗೊಳಿಸದೇ ಐದು ದಶಕಗಳ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕು ಎಂಬ ಧ್ವನಿ ಮೊಳಗಿಸುತ್ತಿದ್ದಾರೆ. 6ರಿಂದ 8ನೇ ತರಗತಿಗಳನ್ನು ಉನ್ನತೀಕರಿಸಿದ ಪ್ರೌಢಶಾಲಾ ಹಂತವೆಂದು ಪರಿಗಣಿಸುತ್ತಿರುವುದರಿಂದ 9 ಮತ್ತು 10ನೇ ತರಗತಿಗಳನ್ನು ಪದವಿಪೂರ್ವ ಶಿಕ್ಷಣದ ವ್ಯಾಪ್ತಿಗೆ ನೀಡಲು ಸರ್ಕಾರಿ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘ ಬೇಡಿಕೆ ಮಂಡಿಸಿದೆ ಎಂದು ನಿಂಗೇಗೌಡ ಹೇಳಿದ್ದಾರೆ.

‘ಶಿಕ್ಷಣ ಸಮವರ್ತಿ ಪಟ್ಟಿಯಲ್ಲಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಕಾನೂನು ರೂಪಿಸುವ ಅಧಿಕಾರ ಹೊಂದಿವೆ. ಕೇಂದ್ರ ಸರ್ಕಾರ ರೂಪಿಸಿದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯವೂ ಪಾಲಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮದನ್‌ಗೋಪಾಲ್ ಸಮಿತಿ ಅಸ್ತಿತ್ವಕ್ಕೆ ಬಂದು 6 ತಿಂಗಳಾದರೂ ಪದವಿಪೂರ್ವ ಶಿಕ್ಷಣದ ವಿಲೀನಕ್ಕೆ ಸಂಬಂಧಿಸಿದಂತೆ ಉಪನ್ಯಾಸಕರು, ಪೋಷಕರು, ವಿದ್ಯಾರ್ಥಿಗಳ ಅಹವಾಲು ಕೇಳಿಲ್ಲ. ಪದವಿಪೂರ್ವ ಶಿಕ್ಷಣ, ಉಪನ್ಯಾಸಕ ಪದನಾಮಗಳನ್ನು ಉಳಿಸಿಕೊಳ್ಳಬೇಕು. ಇಲ್ಲದಿದ್ದರೆ ಕಾನೂನು ಹೋರಾಟದ ಜತೆಗೆ ಬೀದಿಗೂ ಇಳಿಯುತ್ತೇವೆ’ ಎನ್ನುತ್ತಾರೆ ನಿಂಗೇಗೌಡ.

‘ಇಲಾಖೆಯ ಸುಧಾರಣೆಗಾಗಿ ರಚಿಸಿದ್ದ ನಂಜುಂಡರಾಜೇ ಅರಸು, ಹರೀಶ್ ಗೌಡ, ಕುಮಾರನಾಯ್ಕ ಸಮಿತಿಗಳ ವರದಿಯನ್ನು ಅನುಷ್ಠಾನಗೊಳಿಸಬೇಕು. 9 ಮತ್ತು 10ನೇ ತರಗತಿಗಳನ್ನೂ ಪದವಿಪೂರ್ವ ಶಿಕ್ಷಣದಲ್ಲೇ ವಿಲೀನಗೊಳಿಸಿ, ಇಲಾಖೆಯ ಅಸ್ತಿತ್ವ ಉಳಿಸಬೇಕು. ಅದಕ್ಕಾಗಿ ನಾವೆಲ್ಲ 9 ಮತ್ತು 10ನೇ ತರಗತಿಗಳಿಗೂ ಪಾಠ ಮಾಡಲು ಸಿದ್ಧರಿದ್ದೇವೆ’ ಎನ್ನುತ್ತಾರೆ ಉಪನ್ಯಾಸಕ ಆರ್. ಗಿರೀಶ್.

ವಿಲೀನದ ಬಳಿಕವೂ ಬದಲಾಗದ ವ್ಯವಸ್ಥೆ

ಪದವಿಪೂರ್ವ ಕಾಲೇಜುಗಳನ್ನು ‘ಹಿರಿಯ ಪ್ರೌಢಶಾಲೆಗಳು’ ಎಂದು ಪರಿಗಣಿಸುವ ಮೊದಲು ಅದಕ್ಕೆ ಪೂರಕವಾದ ಕೆಲವು ಬದಲಾವಣೆಗಳನ್ನೂ ತರಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಒಳಗೆ ಪದವಿಪೂರ್ವ ಪರೀಕ್ಷೆ ವಿಭಾಗವನ್ನು ವಿಲೀನಗೊಳಿಸಲಾಗಿದೆ. ಆದರೆ, ಪರೀಕ್ಷೆ ಮತ್ತಿತರ ಕಾರ್ಯಗಳನ್ನು ನೋಡಿಕೊಳ್ಳುವ ಹಿಂದಿನ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಪ್ರೌಢಶಿಕ್ಷಣ ಹಾಗೂ ಪದವಿಪೂರ್ವ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆ ಇರುವ ಹೊಸ ಮಂಡಳಿಗೆ ಐಎಎಸ್ ದರ್ಜೆಯ ಅಧಿಕಾರಿ ಅಧ್ಯಕ್ಷರಾಗಿದ್ದಾರೆ. ಶಿಕ್ಷಣ ಇಲಾಖೆಯ ಹೇಳಿಕೆಯಂತೆ, ಎರಡೂ ಪರೀಕ್ಷಾ ವಿಭಾಗಗಳ ವಿಲೀನದಿಂದಾಗಿ ಪರೀಕ್ಷಾ ವಿಭಾಗಗಳ ಆಂತರಿಕ ರಚನೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಆದರೆ, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಮೇಲಿನ ಪರೀಕ್ಷಾ ಹೊಣೆಗಾರಿಕೆ ಗಣನೀಯವಾಗಿ ತಗ್ಗಲಿದೆ. ವರ್ಷದ ಆರು ತಿಂಗಳು ವಾರ್ಷಿಕ, ಪೂರಕ ಪರೀಕ್ಷೆಗಳ ಪ್ರಕ್ರಿಯೆಗೆ ಸಮಯ ವ್ಯರ್ಥವಾಗುತ್ತಿತ್ತು. ಮಂಡಳಿಯ ಅಸ್ತಿತ್ವದಿಂದಾಗಿ ನಿರ್ದೇಶಕರ ಹೊಣೆಗಾರಿಕೆ ಅಧ್ಯಕ್ಷರ ಹೆಗಲಿಗೆ ವರ್ಗವಾಗಿದೆ. ಮುಂದಿನ ದಿನಗಳಲ್ಲಿ ಅವರು ಉತ್ತಮ ಆಡಳಿತ, ಶಿಕ್ಷಣದ ಗುಣಮಟ್ಟ ಹೆಚ್ಚಳದ ಕಡೆಗೆ ಗಮನ ಹರಿಸಲು ಅವಕಾಶವಾಗಲಿದೆ.

ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು (ಉಪಾಧ್ಯಕ್ಷ-2) ಮಂಡಳಿಯ ವಿಶೇಷ ಆಹ್ವಾನಿತರಾಗಿರುತ್ತಾರೆ. ಪರೀಕ್ಷಾ ವಿಭಾಗದ ನಿರ್ದೇಶಕರೇ (ಕಾರ್ಯದರ್ಶಿ) ಮುಂದೆಯೂ ಪರೀಕ್ಷೆಗಳ ಮೇಲ್ವಿಚಾರಣೆ ನೋಡಿಕೊಳ್ಳುವರು. ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದು, ವಿತರಣೆ, ಗೋಪ್ಯತೆ ಕಾಪಾಡುವ ವಿಚಾರದಲ್ಲಿ ಆಯಾ ಪರೀಕ್ಷೆಯ ಕಾರ್ಯದರ್ಶಿಗೆ ವಿಶೇಷಾಧಿಕಾರ ನೀಡಲಾಗಿದೆ. ಈ ವಿಷಯದಲ್ಲಿ ಮಂಡಳಿಯ ಇತರೆ ಯಾರಿಗೂ ಮಧ್ಯಪ್ರವೇಶಿಸಲು ಅವಕಾಶ ಇರುವುದಿಲ್ಲ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಯಮಗಳಿಗೆ ಸರ್ಕಾರ ತಂದ ತಿದ್ದುಪಡಿಗೆ ಇದೇ ವರ್ಷದ ಅಕ್ಟೋಬರ್‌ನಲ್ಲಿ ರಾಜ್ಯಪಾಲರ ಒಪ್ಪಿಗೆ ದೊರೆತಿದೆ. ರಾಜ್ಯಪತ್ರದಲ್ಲೂ ಪ್ರಕಟಿಸಲಾಗಿದೆ.

1,250	796	262	3,198	22,857
ಸರ್ಕಾರಿ ಪಿಯು ಕಾಲೇಜು	ಅನುದಾನಿತ ಕಾಲೇಜು	ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪಿಯು ಕಾಲೇಜು	ಖಾಸಗಿ ಪಿಯು ಕಾಲೇಜು	ಉಪನ್ಯಾಸಕರು

ಸ್ಥಳೀಯ ವಿಷಯಗಳ ಬೋಧನೆಗಿಲ್ಲ ಧಕ್ಕೆ

ಎನ್‌ಇಪಿ ದೇಶದಾದ್ಯಂತ ಏಕ ರೀತಿಯ ಪಠ್ಯಕ್ರಮಕ್ಕೆ ಶಿಫಾರಸು ಮಾಡಿದೆ. ಏಕ ಪಠ್ಯಕ್ರಮ ಎನ್ನುವುದು ಸ್ಥಳೀಯತೆಯನ್ನು ಕಡೆಗಣಿಸುತ್ತದೆ ಎನ್ನುವ ತಪ್ಪು ಕಲ್ಪನೆ ಇದೆ. ಆಯಾ ರಾಜ್ಯದ ಸ್ಥಳೀಯ ಪರಂಪರೆ ಉಳಿಸಿಕೊಂಡೇ ಶಿಕ್ಷಣ ಸಾಗುತ್ತದೆ. ಒಂದು ನಿರ್ದಿಷ್ಟ ವಿಷಯವನ್ನು ಆ ವಯಸ್ಸಿಗೆ ಅನುಗುಣವಾಗಿ ಮಗು ಕಲಿಯುವ ಸಾಮರ್ಥ್ಯ ರೂಢಿಸುವುದೇ ಒಟ್ಟಾರೆ ಪಠ್ಯಕ್ರಮ ನಿಗದಿಯ ಉದ್ದೇಶ. ಅದರ ಸಾಕಾರ ಸ್ಥಳೀಯ ವಿಷಯಗಳಿಂದಲೇ ಸಾಧ್ಯ. ಉದಾ: ನಿಮ್ಮ ಭಾಗದಲ್ಲಿ ಅಭಿಮಾನಪಡುವ ರಾಜನ ಆಡಳಿತ ಕ್ರಮ ವಿವರಿಸಿ ಎಂಬ ಪ್ರಶ್ನೆ ಇಡೀ ದೇಶದ ಮಕ್ಕಳಿಗೆ ಕೊಟ್ಟರೆ, ಅವರು ತಮ್ಮದೇ ಭಾಗದ ರಾಜನ ಯಶಸ್ವಿ ಆಡಳಿತದ ಉತ್ತರ ಬರೆಯುತ್ತಾರೆ. ಉಳಿದಂತೆ ರಾಷ್ಟ್ರೀಯ ವಿಷಯಗಳು ಎಲ್ಲರಿಗೂ ಅನ್ವಯಾಗುತ್ತವೆ. ಇದು ಏಕರೀತಿಯ ಪರಿಕಲ್ಪನೆ ಎಂದು ವಿವರಿಸುತ್ತಾರೆ ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ಎನ್‌ಎಸ್‌ಸಿ–ಟಿಎಸ್‌ಜಿ ಸಮಾಲೋಚಕ ಡಾ.ಜಿ.ವಿ.ಹರಿಪ್ರಸಾದ್.

ಪಿಯು ಪರೀಕ್ಷಾ ವಿಭಾಗದ ಹುದ್ದೆಗಳು

• ಅಧ್ಯಕ್ಷ (ಹೊಸ ಹುದ್ದೆ- ಐಎಎಸ್) • ಉಪಾಧ್ಯಕ್ಷ-2 (ಹಿಂದಿನ ಇಲಾಖಾ ನಿರ್ದೇಶಕ ಸ್ಥಾನ -ಐಎಎಸ್) • ಕಾರ್ಯದರ್ಶಿ (ಹಿಂದಿನ ಪರೀಕ್ಷಾ ನಿರ್ದೇಶಕ- ಕೆಎಎಸ್) • ಜಂಟಿ ನಿರ್ದೇಶಕ • ಉಪ ನಿರ್ದೇಶಕ • ಸಹಾಯ ನಿರ್ದೇಶಕರು (ಮೂರು ಸ್ಥಾನ) • ಪರೀಕ್ಷಾ ವಿಭಾಗಾಧಿಕಾರಿಗಳು (ನಾಲ್ಕು ಸ್ಥಾನ) • ಎಸ್‌ಡಿಎ, ಎಫ್‌ಡಿಎ (ಎಂಟು ಸ್ಥಾನ)

ಇ.ವಿ ಅವತಾರದಲ್ಲಿ ಬರಲಿದೆ ಕೈನೆಟಿಕ್ ಲೂನಾ

• ಜಯಸಿಂಹ ಆರ್.

ದೇಶದಲ್ಲಿ ಒಂದು ಕಾಲದಲ್ಲಿ ಜನಪ್ರಿಯವಾಗಿದ್ದ ಮೊಪೆಡ್ ‘ಲೂನಾ’ ಮತ್ತೆ ರಸ್ತೆಗೆ ಇಳಿಯಲಿದೆ, ಅದೂ ಇ.ವಿ (ವಿದ್ಯುತ್ ಚಾಲಿತ ವಾಹನ) ಅವತಾರದಲ್ಲಿ. ‘ವಿದ್ಯುತ್ ಚಾಲಿತ ಲೂನಾವನ್ನು ಶೀಘ್ರವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಿದ್ದೇವೆ’ ಎಂದು ಕೈನೆಟಿಕ್ ಎಂಜಿನಿಯರಿಂಗ್ ಲಿಮಿಟೆಡ್ ಸೋಮವಾರ ಹೇಳಿದೆ. ಲೂನಾ ಯಾವಾಗ ಮಾರುಕಟ್ಟೆಗೆ ಬಿಡುಗಡೆಯಾಗಲಿದೆ ಎಂಬುದನ್ನು ಕಂಪನಿ ಇನ್ನೂ ಬಹಿರಂಗಪಡಿಸಿಲ್ಲ.

ಕೈನೆಟಿಕ್ ಲೂನಾ... 2000ನೇ ಇಸವಿಯ ನಂತರ ಹುಟ್ಟಿದವರು ಈ ಹೆಸರು ಕೇಳಿರುವ ಸಾಧ್ಯತೆ ತೀರಾ ಕಡಿಮೆ. 80 ಮತ್ತು 90ರದ ದಶಕದಲ್ಲಿ ಜನಿಸಿದವರಿಗೆ ಈ ಹೆಸರು ಈಗ ಹಳೆಯ ನೆನಪುಗಳನ್ನು ತರಿಸಬಹುದು. ಲೂನಾ ಜತೆಗೆ ಬೆಳೆದ ಹಲವು ತಲೆಮಾರು ಇಂದಿಗೂ ಅದನ್ನು ಮರೆತಿರಲಾರದು. ಪುಣೆಯ ಉದ್ಯಮ ಕುಟುಂಬ ಫಿರೋದಿಯಾ, ಕೈನೆಟಿಕ್ ಎಂಜಿನಿಯರಿಂಗ್ ಕಂಪನಿಯನ್ನು ಆರಂಭಿಸಿತ್ತು. ಭಾರತದಲ್ಲಿ ಕೆಳಮಧ್ಯಮ ವರ್ಗವೂ ದ್ವಿಚಕ್ರವಾಹನಗಳಲ್ಲಿ ಓಡಾಡುವುದನ್ನು ಸಾಧ್ಯವಾಗಿಸಿದ ಶ್ರೇಯ ಈ ಕುಟುಂಬಕ್ಕೆ ಮತ್ತು ಕೈನೆಟಿಕ್ ಕಂಪನಿಗೆ ಸಲ್ಲುತ್ತದೆ.

ಭಾರತದಲ್ಲಿ ಮಧ್ಯಮ ವರ್ಗವು ಕಾರಿನಲ್ಲಿ ಓಡಾಡುವುದನ್ನು ಸಾಧ್ಯವಾಗಿಸುವಲ್ಲಿ ಮಾರುತಿ 800ರ ಪಾತ್ರ ಎಷ್ಟಿದೆಯೋ, ಕೆಳಮಧ್ಯಮ ವರ್ಗವು ಸೈಕಲ್ ಬಿಟ್ಟು ಮೋಟರ್ ಮೊಪೆಡ್ ಹತ್ತುವಲ್ಲಿ ಲೂನಾದ ಪಾತ್ರವೂ ಅಷ್ಟೇ ಇದೆ. ಸೈಕಲ್ ಅನ್ನೇ ಬಹುಪಾಲು ನೆಚ್ಚಿಕೊಂಡಿದ್ದ ಭಾರತದ ಕಾರ್ಮಿಕ ವರ್ಗವೂ ದ್ವಿಚಕ್ರ ವಾಹನದಲ್ಲಿ ಓಡಾಡಬೇಕು ಎಂಬ ಕನಸನ್ನು ಉದ್ಯಮಿ ಮತ್ತು ಆಟೊಮೊಬೈಲ್ ಎಂಜಿನಿಯರ್ ಅರುಣ್ ಫಿರೋದಿಯಾ ಕಂಡಿದ್ದರು. ಕಾರ್ಮಿಕ ವರ್ಗವೂ ಸುಲಭವಾಗಿ ಖರೀದಿಸಬಹುದಾದ ಮತ್ತು ಜೇಬಿಗೆ ಭಾರವಲ್ಲದ ನಿರ್ವಹಣಾ ವೆಚ್ಚದ ಒಂದು ದ್ವಿಚಕ್ರ ವಾಹನವನ್ನು ಸಂಪೂರ್ಣವಾಗಿ ಹೊಸದಾಗಿ ಅಭಿವೃದ್ಧಿ ಪಡಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಅಂತಹ ವಾಹನವೊಂದರ ತಾಂತ್ರಿಕತೆಗಳನ್ನು ಬಳಸಿಕೊಳ್ಳಲು ಇಟಲಿಯ ಪಿಯಾಗ್ಯೊ ಕಂಪನಿಯಿಂದ ಅರುಣ್ ಫಿರೋದಿಯಾ ಪರವಾನಗಿ ಪಡೆದರು.

ಇತ್ತ ಮೋಟರ್‌ಸೈಕಲ್ ಅಲ್ಲದ ಮತ್ತು ಅತ್ತ ಬೈಸಿಕಲ್ ಸಹ ಅಲ್ಲದ ಹಾಗೂ ಅವೆರಡರ ಮಿಶ್ರರೂಪದಂತಿದ್ದ ಮೊಪೆಡ್ ಅನ್ನು ಸ್ವತಃ ಅರುಣ್ ಫಿರೋದಿಯಾ ವಿನ್ಯಾಸ ಮಾಡಿದ್ದರು. ಅದಕ್ಕೆ ಲೂನಾ ಎಂದು ಹೆಸರಿಡಲಾಯಿತು. ಮಾರುಕಟ್ಟೆಗೆ ಲೂನಾವನ್ನು 1972ರಲ್ಲಿ ಬಿಡುಗಡೆ ಮಾಡಲಾಯಿತು. ಲೂನಾ ಅಭಿವೃದ್ಧಿ, ಮಾರಾಟದ ತಂತ್ರ ಮತ್ತು ಜನಪ್ರಿಯತೆಯನ್ನು ಅರುಣ್ ತಮ್ಮ ಪುಸ್ತಕ ‘ಇನ್ನೋವೇಷನ್ಸ್ ಆನ್ ಟು ವೀಲ್ಸ್’ ಪುಸ್ತಕದಲ್ಲಿ ದಾಖಲಿಸಿದ್ದಾರೆ.

‘1970ರ ದಶಕದಲ್ಲಿ ಬಹುತೇಕ ಎಲ್ಲಾ ವಾಹನಗಳ ಜಾಹೀರಾತಿನ ಪಾತ್ರಗಳು ಇಂಗ್ಲಿಷ್ ಮಾತನಾಡುವ ಮತ್ತು ಪಾಶ್ಚಾತ್ಯ ಸಂಸ್ಕೃತಿಯನ್ನು ಬಿಂಬಿಸುವ ‘ಎಲೈಟ್’ ವರ್ಗದ್ದಾಗಿರುತ್ತಿದ್ದವು. ಲೂನಾ ಜನಸಾಮಾನ್ಯರ ವಾಹನವಾಗಿತ್ತು. ಸಾಮಾನ್ಯ ಜನರೂ ಅದನ್ನು ತೆಗೆದುಕೊಳ್ಳಬಹುದು ಮತ್ತು ಬಳಸಬಹುದು ಎಂಬುದನ್ನು ಬಿಂಬಿಸುವುದು ನಮ್ಮ ಉದ್ದೇಶವಾಗಿತ್ತು. ಹೀಗಾಗಿ ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡುವ ನೌಕರ, ವಿದ್ಯಾರ್ಥಿ, ಕಾರ್ಮಿಕರು ನಮ್ಮ ಲೂನಾ ಜಾಹಿರಾತಿನ ಪಾತ್ರಗಳಾಗಿದ್ದವು. ಸೈಕಲ್ ಏರಿ ಶ್ರಮಪಡುವುದನ್ನು ಲೂನಾ ತಪ್ಪಿಸುತ್ತದೆ ಮತ್ತು ಅದರಿಂದ ಬದುಕು ಸುಲಭವಾಗುತ್ತದೆ ಎಂಬುದನ್ನು ಜಾಹೀರಾತಿನಲ್ಲಿ ತೋರಿಸಿದೆವು. ಲೂನಾ ಭಾರತದ ಮನೆ–ಮನೆ ತಲುಪಿತು’ ಎಂದು ಅರುಣ್ ತಮ್ಮ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ‘ಚಲ್ ಮೇರಿ ಲೂನಾ’ ಘೋಷಣೆಯೊಂದಿಗೆ ಬರುತ್ತಿದ್ದ ಈ ಜಾಹೀರಾತುಗಳನ್ನು ಅಂದಿನ ಜನರು ಇಂದಿಗೂ ಮರೆತಿರಲಾರರು.

ಆರಂಭದಲ್ಲಿ ಎಲ್ಲರನ್ನೂ ಗುರಿಯಾಗಿಸಿಕೊಂಡು ಲೂನಾವನ್ನು ವಿನ್ಯಾಸ ಮಾಡಲಾಗಿತ್ತಾದರೂ, 80ರ ದಶಕದಲ್ಲಿ ಯುವತಿಯರು ಲೂನಾ ಖರೀದಿಸಿದ್ದು ಹೆಚ್ಚು. ಒಂದು ಸಂದರ್ಭದಲ್ಲಿ ಬಿಕರಿಯಾದ ಲೂನಾಗಳಲ್ಲಿ ಶೇ 90ರಷ್ಟು ಲೂನಾಗಳು ಮಹಿಳೆಯರ ಹೆಸರಿನಲ್ಲಿ ನೋಂದಣಿಯಾಗಿದ್ದವು ಎಂದು ಅರುಣ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ತನ್ನ ಉತ್ತುಂಗದ ಕಾಲದಲ್ಲಿ, ಪ್ರತಿ ದಿನವೂ 2,000ಕ್ಕಿಂತ ಹೆಚ್ಚು ಲೂನಾ ಬಿಕರಿಯಾಗುತ್ತಿತ್ತು. 90ರ ದಶಕದಲ್ಲಿ ವಿದೇಶಿ ಕಂಪನಿಗಳ ಪ್ರವೇಶ ಮತ್ತು ಶಕ್ತಿಶಾಲಿ ಬೈಕ್‌ಗಳ ಪ್ರವೇಶದಿಂದಾಗಿ ಮೊಪೆಡ್‌ನ ಜನಪ್ರಿಯತೆ ಇಳಿಯಿತು. ಲೂನಾವು ಇದಕ್ಕೆ ಹೊರತಾಗಿರಲಿಲ್ಲ. 20ಕ್ಕೂ ಹೆಚ್ಚು ವರ್ಷಗಳ ನಂತರ ಲೂನಾವನ್ನು ಮತ್ತೆ ಇವಿ ಅವತಾರದಲ್ಲಿ ಮಾರುಕಟ್ಟೆಗೆ ತರಲು ಕೈನೆಟಿಕ್ ಸಿದ್ಧತೆ ನಡೆಸಿದೆ. ಒಂದು ಕಾಲದಲ್ಲಿ ಭಾರತದ ರಸ್ತೆಗಳಲ್ಲಿ ರಾರಾಜಿಸಿದ್ದ ಲೂನಾ ಮತ್ತೆ ಆ ವೈಭವವನ್ನು ಕಾಣುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಆಧಾರ: ಪಿಟಿಐ, ಕೈನೆಟಿಕ್ ಎಂಜಿನಿಯರಿಂಗ್ ಲಿಮಿಟೆಡ್

• ಕೈನೆಟಿಕ್ ಗ್ರೀನ್ ಅಂಡ್ ಪವರ್ ಸಲ್ಯೂಷನ್ಸ್ ಕಂಪನಿ ಇ–ಲೂನಾವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ
• ನೋಂದಣಿ ಮತ್ತು ಚಾಲನಾ ಪರವಾನಗಿ ಅವಶ್ಯಕತೆ ಇಲ್ಲದ ಅವತರಣಿಕೆಯಲ್ಲಿ ಇ–ಲೂನಾ ಮಾರುಕಟ್ಟೆಗೆ ಬರಲಿದೆ
• ಮಹಾರಾಷ್ಟ್ರದ ಅಹಮದ್‌ನಗರದಲ್ಲಿನ ಘಟಕದಲ್ಲಿ ಇ–ಲೂನಾ ತಯಾರಿಕೆ ನಡೆಯಲಿದೆ. ಈಗಾಗಲೇ ಪ್ಲಾಟ್‌ಫಾರಂ, ವೆಲ್ಡಿಂಗ್ ಮತ್ತು ಪೇಂಟ್ ಲೇನ್‌ಗಳು ಸಿದ್ಧವಾಗಿವೆ

ಗುಂಡಣ್ಣ

ಬೆರಗಿನ ಬೆಳಕು ಗುರುರಾಜ ಕರಜಗಿ

ಕರಣಗಳ ಶಾಂತಿ

ಅಂತವೆಲ್ಲಕುಮಿರುವುದಿರಲಿ; ವಿಷಯೇಂದ್ರಿಯದ |
ಸಂತಾಪವುಂ ಮುಗಿವುದೆಂಬುದಲ ಪುಣ್ಯ ? ||
ಎಂತೊ, ನಿನ್ನಾಜ್ಞೆಯಿನೊ, ತಾಂ ಸೋತೊ, ಬೇಸತ್ತೊ |
ಶಾಂತಿವಡೆಯಲಿ ಕರಣ – ಮಂಕುತಿಮ್ಮ || 786 ||

ಪದ-ಅರ್ಥ: ಅಂತವೆಲ್ಲಕುಮಿರುವುದಿರಲಿ- = ಅಂತ(ಕೊನೆ) + ಎಲ್ಲಕ್ಕೂ(ಎಲ್ಲಕ್ಕೂ) + ಇ-ರುವುದು + ಇರಲಿ, ವಿಷಯೇಂದ್ರಿಯದ = ವಿಷ-ಯ + ಇಂದ್ರಿಯದ, ಸಂತಾಪವುಂ = ಸಂತಾಪವೂ, ಮುಗಿವುದೆಂಬುದಲ = ಮುಗಿವುದು = ಎಂಬು-ದಲ (ಎಂಬುವುದು), ಎಂತೋ = ಹೇಗೋ, ತಾಂ = ತಾನು, ಶಾಂತಿವಡೆಯಲಿ = ಶಾಂತಿಯನ್ನು ಪಡೆಯಲಿ.

ವಾಚ್ಯಾರ್ಥ: ಎಲ್ಲವೂ ಒಮ್ಮೆ ಕೊನೆಯಾಗುತ್ತದೆಂಬ ಮಾತಿರಲಿ, ವಿಷಯಗಳ ಆಕರ್ಷಣೆಯಿಂದ ಆಗುವ ಇಂದ್ರಿಯಗಳ ಆಸೆಗೂ ಮುಗಿವು ಇದೆ ಎಂಬುದು ಪುಣ್ಯ. ಹೇಗೋ, ನಿನ್ನ ಸಂಯಮದಿಂದಲೋ, ಸೋತೋ, ಬೇಸತ್ತೋ ಇಂದ್ರಿಯಗಳು ಶಾಂತಿಯನ್ನು ಪಡೆಯಲಿ.

ವಿವರಣೆ: ಪ್ರಾರಂಭವಾದ ಪ್ರತಿಯೊಂದಕ್ಕೂ, ಅದು ಜೀವಿಯಾಗಲಿ, ಕಾರ್ಯವಾಗಲಿ, ಚಿಂತನೆಯಾಗಲಿ, ಅದಕ್ಕೊಂದು ಮುಕ್ತಾಯವೆಂಬುದು ಇರಲೇ ಬೇಕು. ಒಮ್ಮೆ ಹುಟ್ಟಿದ ಮನುಷ್ಯ, ಅದೆಷ್ಟು ದೀರ್ಘಜೀವಿಯಾದರೂ, ಒಂದಲ್ಲ ಒಂದು ದಿನ ಸಾಯಲೇಬೇಕು. ಅಂತೆಯೇ ಪ್ರತಿಯೊಂದು ಪ್ರಾಣಿ, ಪಕ್ಷಿ, ಮರ-ಗಿಡಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಬಾಳಿ, ಕೊನೆಗೆ ಮರೆಯಾಗುತ್ತವೆ. ಯಾವುದೇ ಕಾರ್ಯ ಪ್ರಾರಂಭವಾಯಿತೆಂದರೆ ಅದಕ್ಕೊಂದು ಮುಕ್ತಾಯವಿದೆ. ಚಿಂತನೆಗಳು ಅದೆಷ್ಟು ಕಾಲ ಮಸೆದಾಡಿದರೂ ಕೊನೆಗೊಂದು ಸಿದ್ಧಾಂತಕ್ಕೆ ಬಂದು ನಿಲ್ಲುತ್ತವೆ. ಇದೆಲ್ಲ ಸರಿಯೆ. ಕೆಲವೊಂದು ಮುಕ್ತಾಯಗಳು ತುಂಬ ಸಂತೋಷ ನೀಡುತ್ತವೆ. ಅವು ಇಂದ್ರಿಯಗಳನ್ನು ಸೆಳೆಯುವ ವಿಷಯಗಳು. ಇಂದ್ರಿಯಗಳ ಎಳೆದಾಟ ಮನುಷ್ಯನನ್ನು ಹಣ್ಣು ಮಾಡಿ, ಬಳಲಿಸಿಬಿಡುತ್ತವೆ. ಆದರೆ ಅವುಗಳಲ್ಲಿ ಆಸೆ ತೀರುವುದಿಲ್ಲ. ಅವುಗಳನ್ನು ಪಡೆಯುವುದರಲ್ಲೇ ತನ್ಮಯತೆ. ಅದು ‘ಸುಖಕಾರಿ’ ಎನ್ನಿಸಿದರೂ ನಿಜವಾಗಿ ಅದು ‘ಬಂಧನಕಾರಿ’. ಹುಣ್ಣಿನ ತುರಿಕೆ ಇದ್ದಂತೆ. ತುರಿಸುವಾಗ ಸುಖ ಆದರೆ ಫಲ ಮಾತ್ರ ಮರಳಿ ಗಾಯ. ಆದರೆ ವಿಷಯಗಳಿಂದ ಎಳೆಯಲ್ಪಡುವ ಇಂದ್ರಿಯಗಳ ಹಾವಳಿ ಕೂಡ ಒಮ್ಮೆ ನಿಲ್ಲುತ್ತದೆಂಬುದು ಪುಣ್ಯ. ಕೆಲವರು ಬುದ್ಧ, ಮಹಾವೀರ, ಶಂಕರ, ಅಲ್ಲಮನಂಥ ಮಹಾತ್ಮರು ಈ ಸೆಳೆತವನ್ನು ತಮ್ಮ ಸಂಯಮದಿಂದ, ಸಾಧನೆಯಿಂದ ಸಾಧಿಸಿದರು. ಅವರ ಬಯಕೆಯೆಲ್ಲ ಸಂದಿಲ್ಲದ ಸತ್ಯಪದಕ್ಕೆ. ಅದೇ “ವಿಮುಕ್ತಾನಾಂ ಪರಮಾ ಗತಿ:”. ಪರಮಗತಿಯನ್ನು ಪಡೆದು ಮುಕ್ತರಾದವರು. ಬಹಳಷ್ಟು ಜನ ವಯಸ್ಸಾದ ಮೇಲೆ ಸಹಜವಾಗಿ ಇಂದ್ರಿಯಗಳು ದುರ್ಬಲವಾಗಿ ವಿಷಯಗಳ ಸೆಳೆತವನ್ನು ಕಳೆದುಕೊಂಡವರು. ಮತ್ತೆ ಕೆಲವರು, ಯಾವುದೋ ರೋಗದಿಂದಲೋ, ಅಪಘಾತದಿಂದಲೋ ಇಂದ್ರಿಯಗಳ ಪಟುತ್ವವನ್ನು ಕಳೆದುಕೊಳ್ಳುತ್ತಾರೆ. ಕಗ್ಗದ ಮಾತು ಇದು. ಹೇಗೋ, ಯಾವುದೋ ಕಾರಣಕ್ಕೊ, ಅದು ಪ್ರಯತ್ನದಿಂದಲೋ, ಇಂದ್ರಿಯಗಳ ಸೋಲುವಿಕೆಯಿಂದಲೋ, ವಿಷಯಗಳ ಸೆಳೆತಕ್ಕೆ ಮುಕ್ತಾಯವಿರುವುದೇ ಪುಣ್ಯ. ಯಾವ ಕಾರಣದಿಂದಲೇ ಆಗಲಿ ಇಂದ್ರಿಯಗಳು ಶಾಂತಿಯನ್ನು ಪಡೆಯಲಿ. ಅದೇ ಪರಮಶಾಂತಿಯ ಮೂಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಮಂಗಳವಾರ ಡಿಸೆಂಬರ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪಂಚಮಿ ಗಂ. 22-54 ನಕ್ಷತ್ರ: ಧನಿಷ್ಠಾ ಗಂ. 14-27 ಯೋಗ: ವಜ್ರ ಗಂ. 17-27, ಕರಣ: ಬವ ಗಂ. 12-12, ಧನುರ್ ಮಾಸದ 11 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 –04-30
ಸೂರ್ಯೋದಯ : 06-55 ಸೂರ್ಯಾಸ್ತ : 06-08
ಮುಸ್ಲಿಂ ದಿನಾಂಕ : 03 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 5, 9

ಮೇಷ: ಕನಸುಗಳು ಕೈಗೂಡುವ ದಿನ. ಆಸ್ತಿ ವ್ಯವಹಾರಗಳಿಂದ ಉತ್ತಮ ಲಾಭ. ವೃತ್ತಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಹೆಚ್ಚಿನ ಗೌರವಾದರಗಳು ಸಿಗುವುದು. ಮಗಳಿಗೆ ಆಪ್ತರ ಸಹಾಯದಿಂದ ಉತ್ತಮ ಉದ್ಯೋಗ ಲಭಿಸಲಿದೆ.

ವೃಷಭ: ನಿತ್ಯ ಬಳಕೆಯ ಯಂತ್ರೋಪಕರಣಗಳು ಅಥವಾ ವಾಹನಗಳು ರಿಪೇರಿಗೆ ಬರುವಂತಾಗಲಿದೆ. ಗಂಭೀರ ಹಂತದಲ್ಲಿರುವ ನಿಮ್ಮ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವುದರಲ್ಲಿ ಈ ದಿನ ಯಶಸ್ವಿ.

ಮಿಥುನ: ಈ ದಿನದ ಉತ್ತರಾರ್ಧ ಉತ್ತಮ ಫಲದಾಯಕವಾಗಿ ಶುಭವಿದೆ. ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗಲಿದೆ. ಮಕ್ಕಳಿಂದ ಅಹಿತ ಕಾರ್ಯಗಳು ಸಂಭವಿಸಬಹುದು. ಕೆಲಸ ಮಂದಗತಿಯಲ್ಲಿ ಸಾಗುವುದು.

ಕರ್ಕಾಟಕ: ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕಿ. ಸಂಯಮದ ನಡವಳಿಕೆ ಅಗತ್ಯ. ಸ್ನೇಹಿತರೊಂದಿಗಿನ ಮಾತು ಕತೆ ಉಪಯುಕ್ತವೆನಿಸಲಿದೆ. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಬಿಳಿ ಬಣ್ಣದ ಉಡುಗೆ ಶುಭ.

ಸಿಂಹ: ತಂದೆಯಾಗಲಿರುವ ಸುದ್ದಿ ಕೇಳಿ ಸಂತೋಷವಾಗುವುದು. ಇಲಾಖೆ ಪರೀಕ್ಷೆಯಂತಹ ವಿಚಾರದಲ್ಲಿ ಉತ್ತೀರ್ಣರಾಗಿ ಉದ್ಯೋಗ ಅಥವಾ ಬಡ್ತಿ ಪಡೆಯಲಿದ್ದೀರಿ. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ.

ಕನ್ಯಾ: ಇಂದಿನ ದಿನದ ಪರಿಸ್ಥಿತಿಗಳನ್ನು ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ.

ತುಲಾ: ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ವಾಹನಗಳ ಬಿಡಿ ಭಾಗ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನ. ಸ್ಥಿರ ಆಸ್ತಿ ಖರೀದಿಸುವ ಬಗ್ಗೆ ಯೋಚನೆ ಮಾಡಿ.

ವೃಶ್ಚಿಕ: ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಎದುರಾಗಬಹುದು. ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯ ಕಳೆದುಕೊಳ್ಳಬೇಡಿ. ಗುರು ಹಿರಿಯರ ಸಲಹೆ ಸೂಚನೆ ಸ್ವೀಕರಿಸಿ.

ಧನು: ಅವಿವಾಹಿತರಿಗೆ ಕಂಕಣ ಯೋಗವಿದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹ ಕಾಣುವಿರಿ. ಒತ್ತಡಗಳಿಗೆ ಸಿಲುಕಬೇಡಿ. ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ.

ಮಕರ: ಉತ್ಸಾಹವನ್ನು ಹೆಚ್ಚಿಸುವ ಪ್ರೋತ್ಸಾಹಕರ ಸುದ್ದಿ ಕೇಳುತ್ತೀರಿ. ಹುಣಸೆ ಹಣ್ಣು ಹಾಗೂ ದ್ರಾಕ್ಷಿ ವ್ಯಾಪಾರಸ್ಥರಿಗೆ ಅನುಕೂಲಕರ ವ್ಯಾಪಾರ ಮನೆಯ ನಿರ್ವಹಣೆಯಲ್ಲಿ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಬೇಕಾಗುವುದು.

ಕುಂಭ: ಶಸ್ತ್ರ ವೈದ್ಯರಿಗೆ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿದೆ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು, ನವ ಉಲ್ಲಾಸ ಕಾಣಲಿದ್ದೀರಿ. ಕೆಲಸಗಳು ಸರಾಗವಾಗಿ ನೆರವೇರುವುದು. ಮಾರಾಟದ ಕ್ಷೇತ್ರ ಹೆಚ್ಚಿಸಿಕೊಳ್ಳಬಹುದು.

ಮೀನ: ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲಕರ. ಆತ್ಮವಿಶ್ವಾಸದಿಂದ ಕೆಲಸಕಾರ್ಯಗಳಲ್ಲಿ ಅತಿಯಾದ ಯಶಸ್ಸು ಹೊಂದುವಿರಿ. ಅತಿಯಾದ ಆತ್ಮವಿಶ್ವಾಸವೂ ತೊಂದರೆ ಮಾಡಬಹುದು.

ಪದಬಂಧ 5181

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕೊನೆಗೆ ಪದವಿಟ್ಟರೆ ಮೋಕ್ಷವೇ ಸಿಗುವುದು! (5)
4. ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ! (3)
5. ಪದಗಳ ಅರ್ಥವನ್ನು ಹೇಳುವ ಪುಸ್ತಕ (3)
6. ಸರ ನೀಡಿ ಪ್ರಾರಂಭಿಸಿದ ಸಲ್ಲಾಪ (3)
10. ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
11. ಜೀವಿಸಿದರೂ ಶವದಂತೆ ಇರುವವನು (4)
12. ಒಳ್ಳೆಯ ದಿನವಿದು (3)
14. ಭವನದ ಹತ್ತಿರವಿರುವ ಗಂಡ (3)
16. ಕೋಟೆಯ ಮೇಲಿನ ಕೊತ್ತಳ (3)
17. ಬೆಂಗಳೂರಿನಲ್ಲಿರುವ ಭವ್ಯಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ
1. ಹದಿನೈದು ದಿನಗಳ ಅವಧಿ (2)
2. ಸವಿಯಾದುದು ಇದು (3)
3. ಇಂಪಾದ ಸ್ವರವಿದು (2)
6. ಮಧುರವಾದ ಸ್ವಪ್ನ (5)
7. ಜೊತೆಯಲ್ಲಿ ಬಾಳುವುದು (5)
8. ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸ್ತುಗಳು (3)
9. ಬಡಾವಣೆಯಲ್ಲಿಯೇ ಈ ತೊಂದರೆ! (3)
13. ದಿನದಲ್ಲಿ ಬಂದಿರುವ ಮಂತ್ರಿ (3)
15. ಸಂಸಾರ ಬಂಧನಕ್ಕೆ ಒಳಗಾದವನು (2)
16. ನವಗ್ರಹಗಳಲ್ಲಿ ಇದೊಂದು (2)



5180ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 5.ಯುವತಿ 6.ರಸಗ್ರಹಣ 7.ದಗಾಕೋರ 9.ಮನೆತನ 10.ಸದನ 11.ಆಲಿಂಗನ 12.ವಿನಿಯೋಗ 15.ವ್ಯವಕಲನ 16.ಪುಳಕ
ಮೇಲಿಂದ ಕೆಳಕ್ಕೆ: 1.ಆಯುರ್ವೇದ 2.ಜ್ಞಾತಿ 3.ಕೊರಡು 4.ಜಾಣತನ 8.ರಸನ 9.ಮನವಿ 11.ಆಯವ್ಯಯ 13.ಗಜಕರ್ಣ 14.ಸನದು 16.ಪುಣ್ಯ

ಸುಡೊಕು 5567

	7	9			3		8	
				8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5566 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ವಿಡಿಯೊಕಾನ್ ಸ್ಥಾಪಕ ವೇಣುಗೋಪಾಲ್ ಬಂಧನ

ವಂಚನೆ: ಆರೋಪಿಗಳು ಸಿಬಿಐ ವಶಕ್ಕೆ

ವೇಣು ಗೋಪಾಲ್

ನವದೆಹಲಿ: ಐಸಿಐಸಿಐ ಬ್ಯಾಂಕ್‌ನಿಂದ ಅಕ್ರಮವಾಗಿ ₹3,250 ಕೋಟಿ ಮೊತ್ತದ ಸಾಲ ಮಂಜೂರು ಮಾಡಿಸಿಕೊಂಡಿರುವ ಆರೋಪದಡಿ ಸಿಬಿಐ ಅಧಿಕಾರಿಗಳು ಸೋಮವಾರ ವಿಡಿಯೊಕಾನ್ ಸಮೂಹದ ಸ್ಥಾಪಕ ವೇಣುಗೋಪಾಲ್ ಧೂತ್ ಅವರನ್ನು ಬಂಧಿಸಿದ್ದಾರೆ.

'ಮುಂಬೈನಲ್ಲಿ ಸೋಮವಾರ ಬೆಳಿಗ್ಗೆ 71 ವರ್ಷದ ವೇಣುಗೋಪಾಲ್ ಅವರನ್ನು ಅಲ್ಪ ಕಾಲ ವಿಚಾರಣೆಗೆ ಒಳಪಡಿಸಿದ್ದ ತನಿಖಾಧಿಕಾರಿಗಳು ಬಳಿಕ ಬಂಧಿಸಿದ್ದಾರೆ. ಐಸಿಐಸಿಐ ಬ್ಯಾಂಕ್‌ನ ಮಾಜಿ ಸಿಇಒ ಚಂದಾ ಕೊಚ್ಚರ್ ಮತ್ತು ಅವರ ಪತಿ ದೀಪಕ್ ಕೊಚ್ಚರ್ ಅವರನ್ನು ಈಗಾಗಲೇ ಬಂಧಿಸಿರುವ ಅಧಿಕಾರಿಗಳು ಈ ಮೂವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವೇಣುಗೋಪಾಲ್, ಚಂದಾ ಮತ್ತು ದೀಪಕ್ ಅವರನ್ನು ಅಧಿಕಾರಿಗಳು ಸೋಮವಾರ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎ.ಎಸ್.ಸಯ್ಯದ್ ಅವರ ಎದುರು ಹಾಜರುಪಡಿಸಿದ್ದರು.

ಮೂವರು ಆರೋಪಿಗಳನ್ನು ಮೂರು ದಿನಗಳ ಕಾಲ (ಇದೇ 28ರವರೆಗೆ) ಸಿಬಿಐ ವಶಕ್ಕೆ ನೀಡುವಂತೆ ಸಿಬಿಐ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎ.ಲಿಮೋಸಿನ್ ಮನವಿ ಮಾಡಿದರು. ಇದನ್ನು ನ್ಯಾಯಪೀಠ ಪುರಸ್ಕರಿಸಿದೆ.

ಚಂದಾ ಕೊಚ್ಚರ್ ಮತ್ತು ಅವರ ಪತಿ ದೀಪಕ್ ತನಿಖೆಗೆ ಸಹಕರಿಸುತ್ತಿಲ್ಲ ಎಂದು ಆರೋಪಿಸಿದ್ದ ಸಿಬಿಐ ಅಧಿಕಾರಿಗಳು ಇಬ್ಬರನ್ನೂ ಶುಕ್ರವಾರ ಸಂಜೆ ಬಂಧಿಸಿದ್ದರು. ಅವರ ಕಸ್ಟಡಿ ಅವಧಿಯು ಸೋಮವಾರ ಅಂತ್ಯಗೊಂಡಿತ್ತು.

ದೀಪಕ್ ಮತ್ತು ವೇಣುಗೋಪಾಲ್ ನಡುವೆ ವಹಿವಾಟು ನಡೆದಿರುವ ಮಾಹಿತಿ ಇಲ್ಲ ಎಂದು ಚಂದಾ ಅವರು ವಿಚಾರಣೆಯ ವೇಳೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೇಣುಗೋಪಾಲ್ ಹಾಗೂ ಕೊಚ್ಚರ್‌ದಂಪತಿಗಳ ಜೊತೆಗೆ ದೀಪಕ್ ನಿರ್ವಹಿಸುತ್ತಿದ್ದ ನೂಪವರ್ ರಿನಿವಬಲ್ಸ್ (ಎನ್‌ಆರ್‌ಎಲ್), ಸುಪ್ರೀಂ ಎನರ್ಜಿ, ವಿಡಿಯೊಕಾನ್ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ವಿಡಿಯೊಕಾನ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಗಳ ಹೆಸರನ್ನು ಸಿಬಿಐ ಅಧಿಕಾರಿಗಳು ಎಫ್‌ಐಆರ್‌ನಲ್ಲಿ ಸೇರ್ಪಡೆ ಮಾಡಿದ್ದಾರೆ.

ಕಾಂಗ್ರೆಸ್–ಬಿಜೆಪಿ ನಾಯಕರ ನಡುವೆ ಮಾತಿನ ಜಟಾಪಟಿ

ಅಟಲ್ ಸ್ಮಾರಕಕ್ಕೆ ರಾಹುಲ್ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತ್ ಜೋಡೊ ಯಾತ್ರೆ'ಯ ಮಧ್ಯೆ ರಾಹುಲ್ ಗಾಂಧಿ ಅವರು ದೆಹಲಿಯಲ್ಲಿರುವ ಹಿಂದಿನ ಪ್ರಧಾನಿಗಳ ಸ್ಮಾರಕಗಳಿಗೆ ಸೋಮವಾರ ಭೇಟಿ ನೀಡಿದ್ದಾರೆ. ಈ ವೇಳೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮಾರಕ 'ಸದೈವ ಅಟಲ್'ಗೂ ಭೇಟಿ ನೀಡಿ, ಹೂ ಅರ್ಪಿಸಿದ್ದಾರೆ. ವಾಜಪೇಯಿ ಸ್ಮಾರಕಕ್ಕೆ ರಾಹುಲ್ ಭೇಟಿ ನೀಡಿದ್ದು ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತಿನ ಜಟಾಪಟಿಗೆ ಕಾರಣವಾಗಿದೆ.

ವಾಜಪೇಯಿ ಅವರು ನರೇಂದ್ರ ಮೋದಿ ಅವರಿಗೆ ನೀಡಿದ್ದ ಸಲಹೆಯನ್ನು ರಾಹುಲ್ ಅವರ ಈ ಭೇಟಿ ನೆನಪಿಸುತ್ತದೆ ಎಂದು ಕಾಂಗ್ರೆಸ್ ಛೇಡಿಸಿದೆ. ಮಾಜಿ ಪ್ರಧಾನಿ ನರಸಿಂಹರಾವ್ ಅವರ ಸ್ಮಾರಕಕ್ಕೆ ಭೇಟಿ ನೀಡದೆ, ರಾಹುಲ್ ಅವಮಾನಿಸಿದ್ದಾರೆ ಎಂದು ಬಿಜೆಪಿ ಟೀಕಿಸಿದೆ. ಈ ಮಧ್ಯೆ ಕಾಂಗ್ರೆಸ್ ಅಧ್ಯಕ್ಷರ ಕಚೇರಿಯ ಪ್ರಧಾನ ಸಂಚಾಲಕ ಗೌರವ್ ಪಾಂಡಿ ಅವರು ವಾಜಪೇಯಿ ಅವರನ್ನು ಅವಹೇಳನ ಮಾಡಿ ಈ ಹಿಂದೆ ಮಾಡಿದ್ದ ಟ್ವೀಟ್ ಅನ್ನು ಅಳಿಸಿ ಹಾಕಲಾಗಿದೆ. ಇದನ್ನೂ ಬಿಜೆಪಿ ಪ್ರಶ್ನಿಸಿದೆ.

'ಭಾರತ್ ಜೋಡೊ ಯಾತ್ರೆ' ದೆಹಲಿಯಲ್ಲಿದೆ. ಅದರ ಭಾಗವಾಗಿ ರಾಹುಲ್ ಅವರು ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ, ಚೌಧರಿ ಚರಣ್ ಸಿಂಗ್, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಸ್ಮಾರಕಗಳಿಗೆ ಭೇಟಿ ನೀಡಿ ಹೂ ಅರ್ಪಿಸಿದರು. ಈ ವೇಳೆ ವಾಜಪೇಯಿ ಅವರ ಸ್ಮಾರಕಕ್ಕೂ ಭೇಟಿ ನೀಡಿದ್ದರು. ಈ ಭೇಟಿಯ ಸುದ್ದಿ ಮತ್ತು

ರಾಹುಲ್ ಗಾಂಧಿ ಅವರು ವಾಜಪೇಯಿ ಸ್ಮಾರಕಕ್ಕೆ ನಮಿಸಿದರು–ಪಿಟಿಐ ಚಿತ್ರ

> **ಅಟಲ್‌ಜೀ ಅವರು ಪ್ರಾಮಾಣಿಕತೆ ಮತ್ತು ಶಾಂತಿಯ ದ್ಯೋತಕವಾಗಿದ್ದರು. ರಾಹುಲ್ ಪ್ರಾಮಾಣಿಕತೆ ಎದುರು ಮಂಡಿಯೂರಿದ ಭ್ರಷ್ಟಾಚಾರದಂತೆ ಕಾಣುತ್ತಿದ್ದರು**
> **ಗೌರವ್ ಭಾಟಿಯಾ,** ಬಿಜೆಪಿ ವಕ್ತಾರ

ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ನಂತರ ಇದು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು.

ಭಾರತ್ ಜೋಡೊ ಯಾತ್ರೆಯ ಮಾಧ್ಯಮಗೋಷ್ಠಿಯಲ್ಲಿ ಕಾಂಗ್ರೆಸ್ ಸಾಮಾಜಿಕ ಜಾಲತಾಣ ಘಟಕದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾಥೆ ಈ ಬಗ್ಗೆ ಮಾತನಾಡಿದ್ದಾರೆ. 'ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರಿಗೆ ರಾಜಧರ್ಮ ಪಾಲಿಸುವಂತೆ ಸಲಹೆ ನೀಡಿದ್ದರು. ಅದರರ್ಥ ಸಂವಿಧಾನವನ್ನು ಪಾಲಿಸಿ ಎಂದಾಗಿತ್ತು. ಆದರೆ ಮೋದಿ ಅವರು ಆ ಸಲಹೆಯನ್ನು ಪರಿಗಣಿಸಲೇ ಇಲ್ಲ. ರಾಹುಲ್ ಅವರು ಸದೈವ ಸ್ಥಳದಲ್ಲಿ ಇದ್ದುದ್ದನ್ನು ನೋಡಿ, ಅಟಲ್ ಅವರ ಸಲಹೆ ಮೋದಿ ಅವರಿಗೆ ನೆನಪಾಗಲಿ ಮತ್ತು ಅವರು ಸಂವಿಧಾನವನ್ನು ರಕ್ಷಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಇದೇ ಸಂದೇಶವನ್ನು ಸಾರುವುದು ರಾಹುಲ್ ಅವರ ಉದ್ದೇಶವಾಗಿತ್ತು ಎಂದು ನಾನು ಭಾವಿಸಿದ್ದೇನೆ' ಎಂದು ಹೇಳಿದರು.

'ರಾಹುಲ್ ಅವರು ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳಲು ಮಾಜಿ ಪ್ರಧಾನಿಗಳ ಸಮಾಧಿಗಳಿಗೆ ಭೇಟಿ ನೀಡಿದ್ದಾರೆ. ಈ ವಿಚಾರದಲ್ಲಿ ಅವರಲ್ಲಿ ಪ್ರಾಮಾಣಿಕತೆ ಇದ್ದಿದ್ದರೆ ಹೈದರಾಬಾದ್‌ನಲ್ಲಿ ಇದ್ದಾಗ ಅವರು ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರ ಸಮಾಧಿಗೂ ಭೇಟಿ ನೀಡಬೇಕಿತ್ತು' ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ತಿರುಗೇಟು ನೀಡಿದ್ದಾರೆ.

'ಶಾಂತಿದೂತರಾಗಿದ್ದ ಅಟಲ್‌ಜೀ ಅವರ ಸಮಾಧಿಗೆ ರಾಹುಲ್ ಭೇಟಿ ನೀಡಿದ್ದಾರೆ. ಭಾರತದ ಹೆಸರಿಗೆ ಮಸಿಬಳಿಯುವ ಮತ್ತು ದ್ವೇಷವನ್ನು ಹರಡುವ ರಾಹುಲ್ ಅವರು ಇದರ ಬದಲಿಗೆ, ಅಟಲ್‌ಜೀ ಅವರ ಸಿದ್ಧಾಂತಗಳನ್ನು ಪಾಲಿಸಬಹುದಿತ್ತು' ಎಂದು ಬಿಜೆಪಿ ವಕ್ತಾರ ಸೆಹಜಾದ್ ಪೂನಾವಾಲಾ ಹೇಳಿದ್ದಾರೆ.

ಚಳಿಗೆ ಜಗ್ಗದೆ ಟಿ–ಶರ್ಟ್‌ನಲ್ಲೇ ಓಡಾಟ

ದೆಹಲಿಯಲ್ಲಿ ಮೈ ಕೊರೆಯುವ ಚಳಿ ಇದ್ದರೂ, ರಾಹುಲ್ ಗಾಂಧಿ ಅವರು ಟಿ–ಶರ್ಟ್ ಧರಿಸಿ ಗಣ್ಯರ ಸಮಾಧಿಗಳಿಗೆ ಭೇಟಿ ನೀಡಿದ್ದು ಎಲ್ಲರ ಗಮನ ಸೆಳೆದಿದೆ. ರಾಹುಲ್ ಜತೆಗಿದ್ದ ಪಕ್ಷದ ಬಹುತೇಕ ಮುಖಂಡರು ಜಾಕೆಟ್, ಮಫ್ಲರ್‌ಗಳನ್ನು, ರಾಹುಲ್ ಅವರ ಭದ್ರತಾ ಸಿಬ್ಬಂದಿ ಸೂಟ್ ಧರಿಸಿದ್ದರು. ಆದರೆ, ರಾಹುಲ್ ಮಾತ್ರ ಟಿ ಶರ್ಟ್‌ನಲ್ಲೇ ಎಲ್ಲ ಕಡೆ ಓಡಾಡಿದರು.

'ಯಾವ ರೀತಿಯ ಬಟ್ಟೆ ಧರಿಸಿದ್ದಾರೆ, ಎಷ್ಟು ಚಳಿ ಇದೆ ಎಂಬುದಕ್ಕಿಂತ ಹೆಚ್ಚಾಗಿ ರಾಹುಲ್ ಅವರ ಸಹಾನುಭೂತಿ ಪಸರಿಸುವ ಗುಣವೇ ಮುಖ್ಯ' ಎಂದು ಪಕ್ಷದ ಮುಖಂಡ ರಣದೀಪ್ ಸುರ್ಜೇವಾಲಾ ಅಭಿಪ್ರಾಯಪಟ್ಟಿದ್ದಾರೆ. ಹಣದುಬ್ಬರ, ನಿರುದ್ಯೋಗ ಹಾಗೂ ದ್ವೇಷ ಹರಡುವ ವಾತಾವರಣ ಸೃಷ್ಟಿಯಾಗಿರುವ ಈ ಹೊತ್ತಿನಲ್ಲಿ, ರಾಹುಲ್ ಅವರ ಗಮನ ಈ ವಿಚಾರಗಳ ಮೇಲೆ ಇದೆಯೇ ಹೊರತು ಚಳಿ ಹಾಗೂ ಬಟ್ಟೆಗಳ ಮೇಲೆ ಅಲ್ಲ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಅನಿಲ್ ಕುಮಾರ್ ಲಾಹೋಟಿ ರೈಲ್ವೆ ಮಂಡಳಿಯ ನೂತನ ಅಧ್ಯಕ್ಷ

ನವದೆಹಲಿ: ಹಿರಿಯ ರೈಲ್ವೆ ಅಧಿಕಾರಿ ಅನಿಲ್ ಕುಮಾರ್ ಲಾಹೋಟಿ ಅವರು ರೈಲ್ವೆ ಮಂಡಳಿಯ ನೂತನ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಲಿದ್ದಾರೆ.



ಪ್ರಸ್ತುತ ರೈಲ್ವೆ ಮಂಡಳಿ ಸದಸ್ಯರಾಗಿರುವ (ಮೂಲಸೌಕರ್ಯ) ಅವರು ಜ.1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ರೈಲ್ವೆ ಮಂಡಳಿಯ ಹಾಲಿ ಅಧ್ಯಕ್ಷ ಮತ್ತು ಸಿಇಒ ವಿ.ಕೆ.ತ್ರಿಪಾಠಿ ಡಿ.31ರಂದು ನಿವೃತ್ತರಾಗಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟದ ನೇಮಕಾತಿ ಸಮಿತಿಯು ಲಾಹೋಟಿ ಅವರ ನೇಮಕಕ್ಕೆ ಅನುಮೋದನೆ ನೀಡಿದೆ.

ಅವರು ಈ ಮೊದಲು ಭಾರತೀಯ ರೈಲ್ವೆಯ ನಾಗ್ಪುರ, ಜಬಲ್ಪುರ ಮತ್ತು ಭುಸಾವಲ್ ವಿಭಾಗದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಪಾಕಿಸ್ತಾನದ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ನವದೆಹಲಿ/ಚಂಡೀಗಢ (ಪಿಟಿಐ): 'ಪಂಜಾಬ್‌ನ ಅಂತರರಾಷ್ಟ್ರೀಯ ಗಡಿ ಮೂಲಕ ಭಾರತದತ್ತ ಸಾಗಿ ಬರುತ್ತಿದ್ದ ಪಾಕಿಸ್ತಾನದ ಡ್ರೋನ್‌ವೊಂದನ್ನು ಗಡಿ ಭದ್ರತಾ ಪಡೆಯವರು (ಬಿಎಸ್‌ಎಫ್) ಹೊಡೆದುರುಳಿಸಿದ್ದಾರೆ' ಎಂದು ಬಿಎಸ್‌ಎಫ್ ವಕ್ತಾರರೊಬ್ಬರು ಸೋಮವಾರ ತಿಳಿಸಿದ್ದಾರೆ.

'ಅಮೃತಸರದ ರಾಜತಾಲ್ ಗ್ರಾಮದ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ 7.40ರ ಸುಮಾರಿಗೆ ಡ್ರೋನ್ ಕಾಣಿಸಿಕೊಂಡಿತ್ತು. ಗಸ್ತಿನಲ್ಲಿದ್ದ ಸಿಬ್ಬಂದಿ ಗುಂಡು ಹಾರಿಸಿ ಅದನ್ನು ನೆಲಕ್ಕುರುಳಿಸಿದ್ದಾರೆ. ಗಡಿ ರೇಖೆ ಬಳಿ ಅದನ್ನು ವಶಕ್ಕೆ ಪಡೆಯಲಾಗಿದ್ದು, ಇದು ಯಾವುದಾದರೂ ವಸ್ತುವನ್ನು ಹೊತ್ತುತಂದು ಸುತ್ತಲಿನ ಪ್ರದೇಶದಲ್ಲಿ ಹಾಕಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಚೀನಾದಲ್ಲಿ ನಿರ್ಮಿತವಾಗಿರುವ ಈ ಡ್ರೋನ್ ಗುಂಡಿನ ದಾಳಿಯಿಂದ ಪತನಗೊಂಡಿದೆಯೇ ಅಥವಾ ಬ್ಯಾಟರಿ ಡಿಸ್ಚಾರ್ಜ್‌ನಿಂದ ಕೆಳಗೆ ಬಿದ್ದಿದೆಯೇ ಎನ್ನುವುದು ಸ್ಪಷ್ಟವಾಗಿಲ್ಲ' ಎಂದು ತಿಳಿಸಿದ್ದಾರೆ.

ಪಂಜಾಬ್ ಬಳಿ ಹೋದ ವಾರ ಗಡಿ ಭದ್ರತಾ ಪಡೆಯವರು ಪಾಕಿಸ್ತಾನಕ್ಕೆ ಸೇರಿದ್ದ ಮೂರು ಡ್ರೋನ್‌ಗಳನ್ನು ಹೊಡೆದುರುಳಿಸಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

VAIKUNTA SAMARADHANE

Sri.Kosuru Krishnama Raju
(Ex. H.A.L. Employee)
Passed away on 16th December, 2022.
Vaikunta Samaradhane will be held on Wednesday, 28-12-2022 8:30 a.m. onwards @ #56, 2nd Main, 2nd Cross, BHBCS Layout BTM Layout, 2nd Stage, Bangalore-76.
Mob: 7019654823, 9036152206

ಪುಣ್ಯಸ್ಮರಣೆ

ಮುನಿಯಮ್ಮ
(ತ್ಯಾವನಹಳ್ಳಿ, ಕೋಲಾರ ತಾಲ್ಲೂಕು. 27.12.2019) ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷಗಳಾದವು. ನಿಮ್ಮ ಶ್ರಮದಿಂದ ಮಕ್ಕಳು ಶಿಕ್ಷಣ ಪಡೆದು ಮುಂದುವರೆದರು. ನಿಮ್ಮ ನೆನಪು ನಮಗೆ ಎಂದೆಂದಿಗೂ ಅಮರ.
ನಿಮ್ಮ ಆತ್ಮಕ್ಕೆ ಶಾಂತಿ ಕೋರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಬಂಧುಬಳಗ

ತಡೆಯಾಜ್ಞೆ ಮುಂದುವರಿಸಿದ ಎನ್‌ಜಿಟಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹೊರಡಿಸಿದ್ದ ಅಧಿಸೂಚನೆಗೆ ನೀಡಿದ್ದ ತಡೆಯಾಜ್ಞೆಯನ್ನು ಮುಂದುವರಿಸಿದೆ.

'ಸಚಿವಾಲಯ ಈವರೆಗೂ ಯಾವುದೇ ಪ್ರತಿಕ್ರಿಯೆ ಸಲ್ಲಿಸಿಲ್ಲ. ಸಚಿವಾಲಯದ ಯಾವೊಬ್ಬ ಪ್ರತಿನಿಧಿಯೂ ಮಂಡಳಿ ಎದುರು ಹಾಜರಾಗಿಲ್ಲ. ಹೀಗಾಗಿ ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವವರೆಗೂ ತಡೆಯಾಜ್ಞೆ ಮುಂದುವರಿಸಲಾಗುತ್ತದೆ' ಎಂದು ನ್ಯಾಯಮೂರ್ತಿ ಎ.ಕೆ.ಗೋಯಲ್ ನೇತೃತ್ವದ ನ್ಯಾಯ ಮಂಡಳಿ ಸೋಮವಾರ ತಿಳಿಸಿದೆ.

ಸಂಕುಚಿತ ದೃಷ್ಟಿಕೋನಗಳಿಂದ ದೇಶ ಮುಕ್ತವಾಗಬೇಕು: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): 'ದೇಶವು ಯಶಸ್ಸಿನ ಉತ್ತುಂಗದತ್ತ ಸಾಗಬೇಕಾದರೆ ಈ ಹಿಂದಿನ ಸಂಕುಚಿತ ದೃಷ್ಟಿಕೋನಗಳಿಂದ ಮುಕ್ತವಾಗಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ವೀರ ಬಾಲ ದಿನ' ಕಾರ್ಯಕ್ರಮದಲ್ಲಿ ಸೋಮವಾರ ಭಾಗಿಯಾಗಿದ್ದ ಅವರು ಸಿಖ್ಖರ ಧರ್ಮಗುರು ಗುರು ಗೋವಿಂದ್ ಸಿಂಗ್ ಅವರ ಹುತಾತ್ಮ ಮಕ್ಕಳಾದ ಜೊರಾವರ್ ಸಿಂಗ್ ಮತ್ತು ಫತೇಹ್ ಸಿಂಗ್‌ಗೆ ಗೌರವ ಸಲ್ಲಿಸಿದರು.

'ಔರಂಗಜೇಬನು ಇಡೀ ಭಾರತವನ್ನೇ ಬದಲಿಸುವ ಯೋಜನೆ ಹೊಂದಿದ್ದ. ಆ ಕಾಲಘಟ್ಟದಲ್ಲೇ ಗೋವಿಂದ್ ಸಿಂಗ್ ಅವರು ಪರ್ವತದಂತೆ ನಿಂತು ಆತನ ನಿರ್ಧಾರ ವಿರೋಧಿಸಿದ್ದರು. ಶೌರ್ಯ ಪ್ರದರ್ಶಿಸಲು ಹಾಗೂ ತ್ಯಾಗ ಮಾಡಲು ವಯಸ್ಸಿನ ಮಿತಿ ಇಲ್ಲ ಎಂಬುದನ್ನು ಜೊರಾವರ್ ಮತ್ತು ಫತೇಹ್ ಅವರು ತೋರಿಸಿಕೊಟ್ಟಿದ್ದಾರೆ. ತಮ್ಮ ನಂಬಿಕೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಇಬ್ಬರೂ ಪ್ರಾಣವನ್ನೇ ಬಲಿದಾನ ಮಾಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಕಾಲ್ ತಖ್ತ್ ಸಾಹೀಬ್ ಮತ್ತು ಶಿರೋಮಣಿ ಗುರುದ್ವಾರ ಪ್ರಬಂಧಕ್ ಸಮಿತಿ (ಎಸ್‌ಜಿಪಿಸಿ) ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹರಿಹಾಯ್ದಿವೆ.

ಮೋದಿ ಅವರ ಈ ನಡೆಯ ಹಿಂದೆ ಸಿಖ್ಖರ ಇತಿಹಾಸವನ್ನು ದುರ್ಬಲಗೊಳಿಸುವ ಹುನ್ನಾರ ಅಡಗಿದೆ ಎಂದು ಎಸ್‌ಜಿಪಿಸಿ ದೂರಿದೆ.

ಮಾದಕದ್ರವ್ಯ, ಶಸ್ತ್ರಾಸ್ತ್ರವಿದ್ದ ಪಾಕ್ ದೋಣಿ ವಶ; 10 ಮಂದಿ ಬಂಧನ

ಅಹಮದಾಬಾದ್ (ಪಿಟಿಐ): ₹300 ಕೋಟಿ ಮೌಲ್ಯದ 40 ಕೆ.ಜಿ. ಮಾದಕ ದ್ರವ್ಯ, ಅಪಾರ ಶಸ್ತ್ರಾಸ್ತ್ರಗಳು, ಮದ್ದು ಗುಂಡುಗಳನ್ನು ತುಂಬಿಕೊಂಡು ಗುಜರಾತ್‌ನ ಕರಾವಳಿ ಸಮುದ್ರ ಪ್ರವೇಶಿಸಿದ್ದ ಪಾಕಿಸ್ತಾನದ ಮೀನುಗಾರಿಕಾ ದೋಣಿಯನ್ನು ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ) ಸೋಮವಾರ ನಸುಕಿನಲ್ಲಿ ವಶಕ್ಕೆ ಪಡೆದಿದೆ. ದೋಣಿಯಲ್ಲಿದ್ದ ಪಾಕಿಸ್ತಾನದ 10 ಮಂದಿಯನ್ನು ಬಂಧಿಸಲಾಗಿದೆ.

ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಜಿಎಟಿಎಸ್) ನೀಡಿದ ಸುಳಿವು ಆಧರಿಸಿ ಐಸಿಜಿಯು ತನ್ನ ವೇಗದ 'ಐಸಿಜಿಎಸ್ ಅರಿಂಜಯ್' ಗಸ್ತು ಹಡಗನ್ನು ಕಾರ್ಯಾಚರಣೆಗೆ ನಿಯೋಜಿಸಿತ್ತು.

ಡಿ.25 ಮತ್ತು 26ರ ಮಧ್ಯ ರಾತ್ರಿ ಅಂತರರಾಷ್ಟ್ರೀಯ ಸಾಗರ ಗಡಿ ಮಾರ್ಗಕ್ಕೆ ಹತ್ತಿರದ ಪ್ರದೇಶದಲ್ಲಿ ಗಸ್ತು ನಡೆಸುವಾಗ, ಪಾಕ್‌ನ 'ಅಲ್ ಸೊಹೆಲಿ' ಹೆಸರಿನ ಮೀನುಗಾರಿಕಾ ದೋಣಿ ಭಾರತದ ಜಲಪ್ರದೇಶದಲ್ಲಿ ಶಂಕಾಸ್ಪದವಾಗಿ ಸಂಚರಿಸುತ್ತಿತ್ತು. ದೋಣಿ ಬೆನ್ನಟ್ಟಿ ಎಚ್ಚರಿಕೆಯ ಗುಂಡು ಹಾರಿಸಿ, ವಶಪಡಿಸಿಕೊಳ್ಳಲಾಯಿತು. ಬಂಧಿತರು ಮತ್ತು ದೋಣಿಯನ್ನು ತನಿಖೆಗಾಗಿ ಓಖಾ ಬಂದರಿಗೆ ತರಲಾಗುವುದು ಎಂದು ಐಸಿಜಿ ಹೇಳಿಕೆ ಬಿಡುಗಡೆ ಮಾಡಿದೆ.

ಮೋದಿ– ಝೆಲೆನ್‌ಸ್ಕಿ ಮಾತುಕತೆ
ಸಂಧಾನ ನೇತೃತ್ವದ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಜತೆ ಸೋಮವಾರ ದೂರವಾಣಿ ಮಾತುಕತೆ ನಡೆಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, 'ಬಿಕ್ಕಟ್ಟು ಶಮನಕ್ಕೆ ಶಾಂತಿಸೂತ್ರ ಕಾರ್ಯಗತಗೊಳಿಸಲು ಭಾರತ ನೇತೃತ್ವ ವಹಿಸುವ ನಿರೀಕ್ಷೆಯಲ್ಲಿದ್ದೇನೆ' ಎಂದು ಹೇಳಿದ್ದಾರೆ.

ಜಿ–20 ಅಧ್ಯಕ್ಷತೆಯಲ್ಲಿ ಭಾರತ ಯಶಸ್ವಿಯಾಗಲೆಂದು ಮೋದಿ ಅವರಿಗೆ ಶುಭ ಹಾರೈಸಿರುವ ಝೆಲೆನ್‌ಸ್ಕಿ, 'ಈ ವೇದಿಕೆಯಲ್ಲಿಯೇ ಶಾಂತಿ ಸೂತ್ರ ಘೋಷಿಸಿದ್ದೇನೆ. ಈಗ ಅದರ ಅನುಷ್ಠಾನದಲ್ಲಿ ಭಾರತ ಪಾಲ್ಗೊಳ್ಳುವುದಾಗಿ ನಂಬಿರುವೆ. ವಿಶ್ವಸಂಸ್ಥೆ ಮೂಲಕ ನಮಗೆ ನೀಡಿದ ಮಾನವೀಯ ನೆರವು ಮತ್ತು ಬೆಂಬಲಕ್ಕೂ ಧನ್ಯವಾದ ಅರ್ಪಿಸುವೆ' ಎಂದು ಟ್ವೀಟ್ ಮಾಡಿದ್ದಾರೆ. ಇದಕ್ಕೆ ಭಾರತ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

ಅ.4 ರಂದು ಝೆಲೆನ್‌ಸ್ಕಿ ಅವರೊಂದಿಗೆ ದೂರವಾಣಿ ಸಂಭಾಷಣೆಯಲ್ಲಿ 'ಇದಕ್ಕೆ ಸೇನೆ ಪರಿಹಾರವಲ್ಲ, ಯಾವುದೇ ಶಾಂತಿ ಪ್ರಯತ್ನಗಳಿಗೆ ಕೊಡುಗೆ ನೀಡಲು ಭಾರತ ಸಿದ್ಧವಾಗಿದೆ' ಎಂದು ಮೋದಿ ಹೇಳಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,807
ಇಂದಿನ ಅಂತ್ಯ	18,015
▲	208
ದಿನದ ಗರಿಷ್ಠ	18,084

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1560)
ಸೋಯಾ (ರಿಫೈನ್ಡ್)	₹1275 (1275)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹938 (938)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1500-1800
ಸಣ್ಣ	₹1000-1500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹375-672
ದ್ವಿತಳಿ (ಬಿ.ವಿ)	₹418-762

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ ಮೈಸೂರು ಶೋರೂಮ್‌ಗಳಿಗೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರಿ ಸಂಸ್ಥೆಯಾದ ಜಿ ಆರ್ ಟಿ ಜ್ಯುವೆಲ್ಲರ್ಸ್ ನ ಬೆಂಗಳೂರಿನ ಶೋರೂಮ್‌ಗಳಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ. ಫ್ರೆಶರ್ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು
ಸೇಲ್ಸ್‌ಮನ್/ಸೇಲ್ಸ್ ಗರ್ಲ್ಸ್
10ನೇ ತರಗತಿ, ಪಿಯುಸಿ ಅಥವಾ ಪದವಿ
ವಯೋಮಿತಿ:18 ರಿಂದ 35
ಸೇಲ್ಸ್ಅಸಿಸ್ಟೆಂಟ್ಸ್
10ನೇ ತರಗತಿ, ಅಥವಾ ಪಿಯುಸಿ (ಉತ್ತೀರ್ಣ ಅಥವಾ ಫೇಲ್)
ವಯೋಮಿತಿ:18 ರಿಂದ 22
ದಿನಾಂಕ ಮತ್ತು ಸಮಯ:
29th & 30th ಡಿಸೆಂಬರ್, 2022
(ಗುರುವಾರ ಮತ್ತು ಶುಕ್ರವಾರ)
ಬೆಳಗ್ಗೆ 10 ರಿಂದ ಸಂಜೆ 5 ವರೆಗೆ
ಸಂದರ್ಶನ ಸ್ಥಳ:
ಸಂದೇಶ್ ದಿ ಪ್ರಿನ್ಸ್
ನಂ. #3, ನಜರಾಬಾದ್ ಮುಖ್ಯ ರಸ್ತೆ, ಮೈಸೂರು - 570010 ಕರ್ನಾಟಕ.
ಸಂಪರ್ಕ ಸಂಖ್ಯೆಗಳು:
9686799888
9150566671
ಇಮೇಲ್: recruitment@grtjewels.com

Wanted

PHARMACIST - Generic Aadhar Davangere B. Pharm/D. Pharma with KSPC Regd. 9036059698

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

28.12.2022 ರಿಂದ 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ,ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಕೆಲವೇ ಸೀಟುಗಳಿವೆ. ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ 26574131 8317446683 9448508708

Book Your Classifieds Ads
Online Log in to
dhclassifieds.com
DH DECCAN HERALD ಪ್ರಜಾವಾಣಿ
Contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಜಿಗಿದ ಸೆನ್ಸೆಕ್ಸ್: ಬ್ಯಾಂಕಿಂಗ್, ಐ.ಟಿ. ಷೇರು ಗಳಿಕೆ

ಮುಂಬೈ (ಪಿಟಿಐ): ನಾಲ್ಕು ದಿನಗಳಿಂದ ಕುಸಿತ ಕಾಣುತ್ತಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ದೊಡ್ಡ ಮಟ್ಟದ ಜಿಗಿತ ದಾಖಲಿಸಿವೆ. ಹೂಡಿಕೆದಾರರು ಐ.ಟಿ., ಹಣಕಾಸು ಮತ್ತು ತೈಲ ವಲಯದ ಷೇರುಗಳನ್ನು ಹೆಚ್ಚಾಗಿ ಖರೀದಿಸಿದ್ದು ಮಾರುಕಟ್ಟೆಯಲ್ಲಿ ತೇಜಿ ವಹಿವಾಟಿಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ 721 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಏರಿಕೆ ದಾಖಲಿಸಿದವು. ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 988 ಅಂಶದವರೆಗೂ ಏರಿಕೆ ಕಂಡಿತ್ತು.

ವಲಯವಾರು ಏರಿಕೆ (%)

ವಲಯ	ಏರಿಕೆ
ಯುಟಿಲಿಟಿ	3.40
ವಿದ್ಯುತ್	3.18
ರಿಯಾಲ್ಟಿ	2.41
ಸರಕು	2.35
ಹಣಕಾಸು ಸೇವೆಗಳು	2.18

ಹಿಂದಿನ ವಾರದ ನಾಲ್ಕು ದಿನಗಳ ಕುಸಿತದಲ್ಲಿ ಸೆನ್ಸೆಕ್ಸ್ 1,960 ಅಂಶ ಇಳಿಕೆಯಾಗಿತ್ತು. ನಿಫ್ಟಿ 613 ಅಂಶ ಇಳಿಕೆ ಕಂಡಿತ್ತು.

'ಕಳೆದ ವಾರ ಕಂಡುಬಂದ ಕುಸಿತದ ನಂತರದಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ತೇಜಿ ವಹಿವಾಟಿಗೆ ಸಾಕ್ಷಿಯಾದವು. ವರ್ಷಾಂತ್ಯದ ರಜೆ ಇರುವ ಕಾರಣ ಜಾಗತಿಕವಾಗಿ ಮಹತ್ವದ ಸುದ್ದಿಗಳೇನೂ ಇಲ್ಲ. ದೇಶದ ಷೇರುಪೇಟೆಗಳು ದೇಶಿ, ವಿದೇಶಿ ವಿದ್ಯಮಾನಗಳಿಗೆ ಅನುಗುಣವಾಗಿ ಸ್ಪಂದಿಸಲಿವೆ. ಆದರೆ ನಿರ್ದಿಷ್ಟವಾದ ಯಾವುದೇ ಪ್ರವೃತ್ತಿ ಮಾರುಕಟ್ಟೆಗಳಲ್ಲಿ ಕಾಣಲಿಕ್ಕಿಲ್ಲ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

'ದೇಶಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗುತ್ತಿದ್ದ ಷೇರುಗಳನ್ನು ಹೂಡಿಕೆದಾರರು ಖರೀದಿಸಿದ್ದಾರೆ. ಆದರೆ, ಕೋವಿಡ್ ಕುರಿತ ಭೀತಿ ಹಾಗೂ ಆರ್ಥಿಕ ಹಿಂಜರಿತಕ್ಕೆ ಸಂಬಂಧಿಸಿದ ಕಳವಳಗಳು ಮಾರುಕಟ್ಟೆಯಲ್ಲಿ ಅಸ್ಥಿರತೆ ಮುಂದುವರಿಯುವಂತೆ ಮಾಡುತ್ತವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇ 3.63ರಷ್ಟು ಹೆಚ್ಚಾಗಿ ಬ್ಯಾರೆಲ್‌ಗೆ 83.92 ಡಾಲರ್‌ಗೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

26–12–2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	11000-11100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1625 (1600)
ಒಂದು ವಾರದ ಡೆಲಿವರಿ	1620 (1595)
ಸೋಯಾ ಕಚ್ಚಾ	1175 (1175)
ಪಾಮ್ ವಾರದ ಡೆಲಿವರಿ	936 (940)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,150 (54,115)
ಬೆಳ್ಳಿ ಕೆ.ಜಿ 67,750 (67,400)

ಆವರಣದಲ್ಲಿ ಶನಿವಾರದ ಧಾರಣೆ

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹133
ಆರ್‌ಎಸ್‌ಎಸ್-5	₹125
ಗುಡ್ ಲಾಟ್	₹119

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ರೂಪಾಯಿ ಚೇತರಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 17 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹82.65ಕ್ಕೆ ತಲುಪಿತು.

ದೇಶದ ಷೇರುಪೇಟೆಯ ಗಳಿಕೆ ಹಾಗೂ ಅಮೆರಿಕದ ಡಾಲರ್ ಮೌಲ್ಯ ಇಳಿಕೆ ಕಂಡಿದ್ದೇ ಇದಕ್ಕೆ ಕಾರಣ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹೊಸಚಾಲಿ	31509-33809	ಚಾಲಿ	36209-40199
ಕೋಕ	12500-25000	**ಪುತ್ತೂರು**		ಕೋಕ	24699-27899
ಹೊಸತು	27500-38000	ಕೋಕ	11000-26000	ಕೆಂಪುಗೋಟು	26119-28499
ಹಳತು	48000-54500	ಹೊಸತು	32000-38000	ರಾಶಿ	42099-43869
ಚಿತ್ರದುರ್ಗ		**ಸಾಗರ**		ತಟ್ಟಿಬೆಟ್ಟೆ	34689-34689
ಆಪಿ	44109-44519	ಬಿಳಿಗೋಟು	20199-29939	**ಶಿರಸಿ**	
ಬೆಟ್ಟೆ	32539-32969	ಚಾಲಿ	32199-37899	ಬೆಟ್ಟೆ	30699-41608
ಕೆಂಪುಗೋಟು	28400-28800	ಕೋಕ	15069-31099	ಬಿಳಿಗೋಟು	18891-34199
ರಾಶಿ	43629-44099	ಕೆಂಪುಗೋಟು	22000-36899	ಚಾಲಿ	25399-41200
ಕಾರ್ಕಳ		ರಾಶಿ	39899-44610	ಕೆಂಪುಗೋಟು	21696-34699
ಹೊಸತು	30000-37500	ಸಿಪ್ಪೆಗೋಟು	5272-20800	ರಾಶಿ	37199-44399
ಹಳತು	40000-54500	**ಶಿವಮೊಗ್ಗ**		**ಯಲ್ಲಾಪುರ**	
ಕುಮಟ		ಬೆಟ್ಟೆ	45700-51500	ಬಿಳಿಗೋಟು	24499-30131
ಚಿಪ್ಪು	25609-32019	ಗೊರಬಲು	17000-33516	ಚಾಲಿ	36501-39899
ಕೋಕ	18019-18569	ರಾಶಿ	40839-45309	ಕೋಕ	15109-27329
ಫ್ಯಾಕ್ಟರಿ	10109-18569	ಸರಕು	50619-73996	ಕೆಂಪುಗೋಟು	24916-33515
ಹಳೆಚಾಲಿ	36009-39599	**ಸಿದ್ದಾಪುರ**		ರಾಶಿ	41899-50495
		ಬಿಳಿಗೋಟು	27899-34209	ತಟ್ಟಿಬೆಟ್ಟೆ	36309-40369

2022 ಹಿನ್ನೋಟ

ಹಣದುಬ್ಬರ ನಿಯಂತ್ರಣ: ಆರ್‌ಬಿಐ ವೈಫಲ್ಯ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2016ರ ನಂತರದಲ್ಲಿ ಇದೇ ಮೊದಲ ಬಾರಿಗೆ ಹಣದುಬ್ಬರದ ಏರಿಕೆಯನ್ನು ನಿಯಂತ್ರಿಸುವಲ್ಲಿ ವಿಫಲವಾದ ಪರಿಸ್ಥಿತಿ 2022ರಲ್ಲಿ ನಿರ್ಮಾಣ ಆಯಿತು. ಚಿಲ್ಲರೆ ಹಣದುಬ್ಬರವನ್ನು ಶೇಕಡ 6ಕ್ಕಿಂತ ಕಡಿಮೆ ಮಟ್ಟದಲ್ಲಿ ಕಾಯ್ದುಕೊಳ್ಳುವ ಹೊಣೆ ಆರ್‌ಬಿಐ ಮೇಲಿದೆ. ಆದರೆ, 2022ರ ಆರಂಭದಿಂದಲೇ ಹಣದುಬ್ಬರ ಪ್ರಮಾಣವು ಶೇ 6ರನ್ನು ಮೀರಿ ನಿಂತಿತ್ತು.

ಸತತ ಮೂರು ತ್ರೈಮಾಸಿಕಗಳಲ್ಲಿ ಗರಿಷ್ಠ ಮಿತಿ (ಶೇ 6) ಮೀರಿ ಬೆಳೆಯಿತು. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇ 6.3ರಷ್ಟು, ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 7.3ರಷ್ಟು ಹಾಗೂ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 7ರಷ್ಟು ಆಯಿತು.

ಬಹಿರಂಗವಾಗದ ವರದಿ: ಈ ತ್ರೈಮಾಸಿಕಗಳಲ್ಲಿ ಹಣದುಬ್ಬರ ನಿಯಂತ್ರಿಸಲು ವಿಫಲ ಆಗಿದ್ದಕ್ಕೆ ಕಾರಣ ಏನು ಎಂಬುದನ್ನು ಆರ್‌ಬಿಐ, ಕೇಂದ್ರಕ್ಕೆ ಲಿಖಿತ ರೂಪದಲ್ಲಿ ವಿವರ ನೀಡಬೇಕು ಎಂದು ಕಾನೂನು ಹೇಳುತ್ತದೆ. ಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ತಾನು ಬಹಿರಂಗಪಡಿಸುವುದಿಲ್ಲ ಎಂದು ಆರ್‌ಬಿಐ ಹೇಳಿದೆ. ವರದಿ ಬಹಿರಂಗಪಡಿಸಲಾಗದು ಎಂದು ಕೇಂದ್ರವೂ ಹೇಳಿದೆ. ಹೀಗಾಗಿ ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ತೆಗೆದುಕೊಂಡ ಕ್ರಮಗಳು ಎಷ್ಟರ ಮಟ್ಟಿಗೆ ಸರಿಯಾಗಿದ್ದವು ಅಥವಾ ಸೂಕ್ತ ಕ್ರಮ ಕೈಗೊಳ್ಳಲು ಸಾಧ್ಯವೇ ಆಗಲಿಲ್ಲವೇ ಎನ್ನುವುದು ಜನಸಾಮಾನ್ಯರಿಗೆ ತಿಳಿಯಲಿಲ್ಲ.

ಬಿಗಿ ಹಣಕಾಸು ನೀತಿ: ಹಣದುಬ್ಬರ ಮಿತಿ ಮೀರಿದ್ದರಿಂದ ಆರ್‌ಬಿಐ ತನ್ನ ಹಣಕಾಸು ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ 2022ರಲ್ಲಿ ಎದುರಾಯಿತು. ಆರ್ಥಿಕ ಬೆಳವಣಿಗೆಯ ಮೇಲೆ ಆಗುವ ಪ್ರತಿಕೂಲ ಪರಿಣಾಮ ತಗ್ಗಿಸಲು ಹೊಂದಾಣಿಕೆಯ ಹಣಕಾಸು ನೀತಿಯ ಬದಲಾಗಿ ಬಿಗಿ ಹಣಕಾಸು ನೀತಿಯತ್ತ ಹೊರಳಬೇಕಾಯಿತು.

ಯುದ್ಧದ ಪರಿಣಾಮ: ರಷ್ಯಾ–ಉಕ್ರೇನ್ ಸಮರ ಆರಂಭ ಆದ ಬಳಿಕ ಕಚ್ಚಾ ತೈಲ ಸೇರಿದಂತೆ ಹಲವು ಸರಕುಗಳ ದರದಲ್ಲಿ ಭಾರಿ ಏರಿಕೆ ಕಂಡಿತು. ಇದು ಭಾರತವನ್ನೂ ಒಳಗೊಂಡಂತೆ ಜಾಗತಿಕ ಮಟ್ಟದಲ್ಲಿ ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಯಿತು.

ಮೇ ತಿಂಗಳಿನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ರೆಪೊ ದರವನ್ನು ಶೇ 1.90ರಷ್ಟು ಹೆಚ್ಚಳ ಮಾಡಲಾಯಿತು. ಇದಕ್ಕೆ ಅನುಗುಣವಾಗಿ ಬ್ಯಾಂಕ್‌ಗಳು ಸಹ ವಿವಿಧ ಸಾಲಗಳ ಮೇಲಿನ ಬಡ್ಡಿದರವನ್ನು ಶೇ 1.90ರಷ್ಟು ಏರಿಕೆ ಮಾಡಿದವು. ಆದರೆ ಠೇವಣಿಗಳ ಮೇಲಿನ ಬಡ್ಡಿದರ ಈ ಅವಧಿಯಲ್ಲಿ ಹೆಚ್ಚಾಗಿದ್ದು ಶೇ 0.48ರಷ್ಟು ಮಾತ್ರ. ಡಿಸೆಂಬರ್‌ನಲ್ಲಿ ರೆಪೊ ದರವನ್ನು ಶೇ 0.35ರಷ್ಟು ಹೆಚ್ಚಿಸಲಾಗಿದೆ.

ಹಣದುಬ್ಬರ ನಿಯಂತ್ರಿಸಲು ರೆಪೊ ದರ ಹೆಚ್ಚಳ ಮಾಡುವ ನಿರ್ಧಾರ ತೆಗೆದುಕೊಂಡಿದ್ದು ಬಹಳ ತಡವಾಯಿತು ಎನ್ನುವುದು ಮಾರುಕಟ್ಟೆ ತಜ್ಞರ ಪೈಕಿ ಕೆಲವರ ವಾದ. ಆದರೆ, ಆರ್‌ಬಿಐ ತನ್ನ ನಡೆಯನ್ನು ಸಮರ್ಥಿಸಿಕೊಂಡಿದೆ.

ಡಿಜಿಟಲ್ ಕರೆನ್ಸಿ

ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯು (ಸಿಬಿಡಿಸಿ) ದೇಶದಲ್ಲಿ ಪ್ರಾಯೋಗಿಕವಾಗಿ ಆರಂಭವಾಗಿದೆ. ಚಿಲ್ಲರೆ ಮತ್ತು ಸಗಟು ವಹಿವಾಟುಗಳಲ್ಲಿ ಇದನ್ನು ಬಳಕೆಗೆ ತರಲಾಗಿದೆ.

ಸಿಬಿಡಿಸಿ ಬಳಸಿ ನಡೆಯುವ ವಹಿವಾಟುಗಳು ನಿರ್ದಿಷ್ಟ ಹಂತದವರೆಗೆ ಗೋಪ್ಯವಾಗಿ ಇರುತ್ತವೆ ಎಂದು ಆರ್‌ಬಿಐ ಈಚೆಗಷ್ಟೇ ಹೇಳಿದೆ.

ಎಲ್‌ಐಸಿ ಹೌಸಿಂಗ್: ಗೃಹಸಾಲ ಬಡ್ಡಿ ಏರಿಕೆ

ಮುಂಬೈ (ಪಿಟಿಐ): ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಗೃಹಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.35ರಷ್ಟು ಹೆಚ್ಚಿಸಿದೆ.

ಎಚ್‌ಡಿಎಫ್‌ಸಿ ಕೂಡ ಗೃಹಸಾಲದ ಮೇಲಿನ ಬಡ್ಡಿ ದರವನ್ನು ಈಚೆಗೆ ಹೆಚ್ಚಿಸಿದೆ. ಎಲ್‌ಐಐ ಹೌಸಿಂಗ್ ಫೈನಾನ್ ನೀಡುವ ಗೃಹಸಾಲದ ಮೇಲಿನ ಬಡ್ಡಿ ದರವು ಈಗ ಶೇ 8.65ಕ್ಕೆ ತಲುಪಿದೆ.

ಮಾರುಕಟ್ಟೆ ಪರಿಸ್ಥಿತಿಗೆ ಅನುಗುಣವಾಗಿ ಬಡ್ಡಿ ದರ ಹೆಚ್ಚಳ ಮಾಡಲಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವೈ. ವಿಶ್ವನಾಥ ಗೌಡ್ ತಿಳಿಸಿದ್ದಾರೆ. ಮನೆಗಳ ಖರೀದಿ ಪ್ರಮಾಣದಲ್ಲಿ ಸ್ಥಿರತೆ ಕಂಡುಬಂದಿದೆ ಎಂದು ಗೌಡ್ ಹೇಳಿದ್ದಾರೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ರೆಪೊ ದರವನ್ನು ಮೇ ತಿಂಗಳ ನಂತರ ಐದು ಹಂತಗಳಲ್ಲಿ ಶೇ 2.25ರಷ್ಟು ಹೆಚ್ಚಿಸಿದೆ. ಆರ್‌ಬಿಐ ಕ್ರಮಕ್ಕೆ ಅನುಗುಣವಾಗಿ ಹಣಕಾಸು ಸಂಸ್ಥೆಗಳು ಕೂಡ ಸಾಲದ ಮೇಲಿನ ಬಡ್ಡಿ ದರವನ್ನು ಜಾಸ್ತಿ ಮಾಡಿವೆ.

ಕೂಚ್ ಬಿಹಾರ್: ರಾಜ್ಯ ತಂಡಕ್ಕೆ ಇನಿಂಗ್ಸ್ ಹಿನ್ನಡೆ

ಬೆಂಗಳೂರು: ಕರ್ನಾಟಕ ತಂಡ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ತಂಡದ ವಿರುದ್ಧ ಇನಿಂಗ್ಸ್ ಹಿನ್ನಡೆ ಅನುಭವಿಸಿದೆ.

ನಾಗ್ಪುರದ ವಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಸೋಮವಾರ ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 197 ರನ್‌ಗಳಿಗೆ ಆಲೌಟಾಯಿತು.

253 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ವಿದರ್ಭ ತಂಡ ದಿನದಾಟದ ಅಂತ್ಯಕ್ಕೆ 45 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 203 ಗಳಿಸಿದೆ. ಆತಿಥೇಯರು ಇದೀಗ ಒಟ್ಟು 456 ರನ್‌ಗಳ ಮುನ್ನಡೆಯಲ್ಲಿದ್ದಾರೆ.

ಅಜೇಯ ಶತಕ ಗಳಿಸಿದ ದಾನಿಷ್ ಮಲೆವಾರ್ (136) ಮತ್ತು ಆರಂಭಿಕ ಬ್ಯಾಟರ್ ಝುಬೈರುದ್ದೀನ್ (60) ಅವರು ವಿದರ್ಭ ತಂಡದ ಭಾರಿ ಮುನ್ನಡೆಗೆ ಕಾರಣರಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್; ವಿದರ್ಭ 127.4 ಓವರ್‌ಗಳಲ್ಲಿ 450. ಕರ್ನಾಟಕ 89.5 ಓವರ್‌ಗಳಲ್ಲಿ 197 (ಸ್ವರೂಪ್ ಎಸ್. ಹಿಪ್ಪರಗಿ 74, ಪ್ರಖರ್ ಚತುರ್ವೇದಿ 66, ಪ್ರಥಮ್ ಮಹೇಶ್ವರಿ 30ಕ್ಕೆ 6, ಗೌರವ್ ಫರ್ದೆ 65ಕ್ಕೆ 3). ಎರಡನೇ ಇನಿಂಗ್ಸ್: ವಿದರ್ಭ 45 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 203 (ಝುಬೈರುದ್ದೀನ್ ಬ್ಯಾಟಿಂಗ್ 60, ದಾನಿಷ್ ಮಲೆವಾರ್ ಬ್ಯಾಟಿಂಗ್ 136 (ಯಶೋವರ್ಧನ್ 19ಕ್ಕೆ 1)

ಕರ್ನಾಟಕಕ್ಕೆ ಜಯದ ಛಲ

ರಣಜಿ ಕ್ರಿಕೆಟ್: ಗೋವಾ ತಂಡದಲ್ಲಿ ಅರ್ಜುನ್ ತೆಂಡೂಲ್ಕರ್ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಗೋವಾ ವಿರುದ್ಧದ ಪಂದ್ಯ ಇಂದಿನಿಂದ
- ರಾಜ್ಯ ತಂಡಕ್ಕೆ ಋತುವಿನ ಮೂರನೇ ಪಂದ್ಯ

ಪಣಜಿ, ಗೋವಾ: ಹೊಸ ವರ್ಷದ ಸ್ವಾಗತಕ್ಕೆ ಸಿದ್ಧವಾಗಿರುವ ಗೋವಾದ ನೆಲದಲ್ಲಿ ಕರ್ನಾಟಕ ತಂಡವು ಮಂಗಳವಾರ ಪೊರ್ವರಿಯಂನಲ್ಲಿ ಈ ಬಾರಿಯ ರಣಜಿ ಟ್ರೋಫಿಯ ಸಿ ಗುಂಪಿನ ಮೂರನೇ ಪಂದ್ಯವಾಡಲಿದೆ.

ತನ್ನ ಮೊದಲೆರಡೂ ಪಂದ್ಯಗಳನ್ನೂ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಯಂಕ್ ಅಗರವಾಲ್ ಬಳಗವು ಆಡಿದೆ. ಪ್ರಸಕ್ತ ಋತುವಿನಲ್ಲಿ ತವರಿನಿಂದ ಹೊರಗೆ ಆಡಲಿರುವ ಮೊದಲ ಪಂದ್ಯವಾಗಿದೆ. ಸರ್ವಿಸಸ್ ಎದುರು ಡ್ರಾ ಹಾಗೂ ಪುದುಚೇರಿ ಎದುರು ಬೋನಸ್ ಅಂಕದೊಂದಿಗೆ ಜಯಭೇರಿ ಬಾರಿಸಿರುವ ಕರ್ನಾಟಕ ತಂಡವು ತನ್ನ ಗೆಲುವಿನ ಓಟ ಮುಂದುವರಿಸುವ ಛಲದಲ್ಲಿದೆ. ಕಳೆದ ಪಂದ್ಯದಲ್ಲಿ ಆಡಿದ ತಂಡವನ್ನೇ ಇಲ್ಲಿಯೂ ಉಳಿಸಿಕೊಳ್ಳುವುದು ಖಚಿತ.

ಅಂಕಿ ಸಂಖ್ಯೆ ಹಾಗೂ ಅನುಭವದ ಆಧಾರದಲ್ಲಿ ಗೋವಾ ತಂಡಕ್ಕಿಂತ ಕರ್ನಾಟಕವೇ ಹೆಚ್ಚು ಬಲಿಷ್ಠವಾಗಿದೆ. ಆರಂಭಿಕ ಬ್ಯಾಟರ್ ಆರ್. ಸಮರ್ಥ್ ಸತತ ಎರಡೂ ಪಂದ್ಯಗಳಲ್ಲಿ ಶತಕ ಗಳಿಸಿದ್ದಾರೆ. ಮಯಂಕ್ ಅಗರವಾಲ್ ಕೂಡ ಅರ್ಧಶತಕ ಗಳಿಸಿದ್ದಾರೆ.

ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ನಿಕಿನ್ ಜೋಸ್ ಮತ್ತು ವಿಶಾಲ್ ಒಣತ್ ಅವರೂ ಭರವಸೆ ಮೂಡಿಸಿದ್ದಾರೆ. ಅನುಭವಿ ಮನೀಷ್ ಪಾಂಡೆ ಹಾಗೂ ವಿಕೆಟ್‌ಕೀಪರ್–ಬ್ಯಾಟರ್ ಬಿ.ಆರ್. ಶರತ್ ತಮ್ಮ ನೈಜ ಲಯಕ್ಕೆ ಮರಳಿದರೆ ಬ್ಯಾಟಿಂಗ್ ವಿಭಾಗ ಮತ್ತಷ್ಟು ಬಲಿಷ್ಠವಾಗುವುದರಲ್ಲಿ ಅನುಮಾನವೇ ಇಲ್ಲ.

ಸ್ಪಿನ್ –ಆಲ್‌ರೌಂಡರ್‌ಗಳಾದ ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ತಂಡದ ಅಗತ್ಯಕ್ಕೆ ತಕ್ಕಂತೆ ಉತ್ತಮ ಕಾಣಿಕೆ ನೀಡುವ ಭರವಸೆ ಇದೆ. ಬೌಲಿಂಗ್ ವಿಭಾಗದ ಉದಯೋನ್ಮುಖ ಪ್ರತಿಭೆ ವಿದ್ವತ್ ಕಾವೇರಪ್ಪ ಹಾಗೂ ವೈಶಾಖ ವಿಜಯಕುಮಾರ್ ಕಡಲತಡಿಯ ಊರಿನಲ್ಲಿಯೂ ಮಿಂಚುವ ವಿಶ್ವಾಸದಲ್ಲಿದ್ದಾರೆ.

ಅರ್ಜುನ್ ಆಕರ್ಷಣೆ: ಗೋವಾ ತಂಡದಲ್ಲಿ ಆಡುತ್ತಿರುವ ಅರ್ಜುನ್ ತೆಂಡೂಲ್ಕರ್ (ಸಚಿನ್ ತೆಂಡೂಲ್ಕರ್ ಪುತ್ರ) ಪ್ರಮುಖ ಆಕರ್ಷಣೆಯಾಗಿದ್ದಾರೆ. ರಾಜಸ್ಥಾನ ವಿರುದ್ಧದ ಮೊದಲ ಪಂದ್ಯದಲ್ಲಿ ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದ ಅರ್ಜುನ್ ಶತಕ ದಾಖಲಿಸಿದ್ದರು. ಅದೇ ಪಂದ್ಯದಲ್ಲಿ ಸುಯಶ್ ಪ್ರಭುದೇಸಾಯಿ ದ್ವಿಶತಕ ಗಳಿಸಿದ್ದರು. ಗೋವಾ ತಂಡವು ರಾಜಸ್ಥಾನ ಮತ್ತು ಜಾರ್ಖಂಡ್ ಎದುರಿನ ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ.

ರೋನಿತ್ ಮೋರೆ (ಎಡ) ಮತ್ತು ಮಯಂಕ್ ಅಗರವಾಲ್

ತಂಡಗಳು: ಕರ್ನಾಟಕ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್, ರೋನಿತ್ ಮೋರೆ, ವಿಶಾಲ್ ಒಣತ್, ನಿಕಿನ್ ಜೋಸ್, ಮನೀಷ್ ಪಾಂಡೆ, ಶ್ರೇಯಸ್ ಗೋಪಾಲ್, ಬಿ.ಆರ್. ಶರತ್ (ವಿಕೆಟ್‌ಕೀಪರ್), ಕೃಷ್ಣಪ್ಪ ಗೌತಮ್, ವಿಜಯಕುಮಾರ್ ವೈಶಾಖ, ವಿದ್ವತ್ ಕಾವೇರಪ್ಪ, ಶುಭಾಂಗ್ ಹೆಗಡೆ, ಕೆ.ವಿ. ಸಿದ್ಧಾರ್ಥ್, ಶ್ರೀನಿವಾಸ್ ಶರತ್, ವಾಸುಕಿ ಕೌಶಿಕ್.

ಗೋವಾ: ದರ್ಶನ್ ಮಿಸಾಳ್ (ನಾಯಕ), ಏಕನಾಥ್ ಕೆರ್ಕರ್, ಸ್ನೇಹಲ್ ಸುಹಾಸ್ ಕೌತಣಕರ, ಅರ್ಜುನ್ ತೆಂಡೂಲ್ಕರ್, ಸುಯಶ್ ಪ್ರಭುದೇಸಾಯಿ, ಅಮೋಘ್ ದೇಸಾಯಿ, ಸುಮಿರನ್ ಆಮೋಣಕರ್, ಸಿದ್ಧೇಶ್ ಲಾಡ್, ಮೋಹಿತ್ ರೆಡಕರ್, ಶುಭಂ ದೇಸಾಯಿ, ಲಕ್ಷ್ಯ ಗರ್ಗ್, ಟುನಿಶ್ ಸಾವಕರ್, ಇಶಾನ್ ಗಡೇಕರ್, ಋತ್ವಿಕ್ ನಾಯಕ, ವೈಭವ್ ಗೋವೆಕರ್, ಫೆಲಿಕ್ಸ್ ಅಲೆಮಾವೊ, ಸಮರ್ ಶ್ರವಣ ದುಬಾಷಿ, ವೇದಾಂತ್ ನಾಯಕ್, ಅಮೂಲ್ಯಾ ಪಂಡರೇಕರ್, ದೀಪರಾಜ್ ಗಾಂವ್ಕರ್.

ಪಂದ್ಯ ಆರಂಭ: ಬೆಳಿಗ್ಗೆ 9.30

ದಕ್ಷಿಣ ಆಫ್ರಿಕಾ ತಂಡದ ಲುಂಗಿ ಗಿಡಿ ಅವರನ್ನು ಬೌಲ್ಡ್ ಮಾಡಿದ ಕ್ಯಾಮರಾನ್ ಗ್ರೀನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಕ್ರಿಕೆಟ್ ಟೆಸ್ಟ್: ದಕ್ಷಿಣ ಆಫ್ರಿಕಾಕ್ಕೆ ಮತ್ತೆ ಬ್ಯಾಟಿಂಗ್ ವೈಫಲ್ಯ

ಗ್ರೀನ್ ಪ್ರಭಾವಿ ಬೌಲಿಂಗ್

ಮೆಲ್ಬರ್ನ್ (ಎಪಿ): ಕ್ರಿಸ್‌ಮಸ್ ಮರುದಿನ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನೆರೆದಿದ್ದ 60 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಮುಂದೆ ಮಿಂಚಿನ ಬೌಲಿಂಗ್ ಪ್ರದರ್ಶನ ನೀಡಿದ ಆಸ್ಟ್ರೇಲಿಯಾದ ಕ್ಯಾಮರಾನ್ ಗ್ರೀನ್ ಅವರು ದಕ್ಷಿಣ ಆಫ್ರಿಕಾ ತಂಡದ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದರು.

ಗ್ರೀನ್ (27ಕ್ಕೆ 5) ಅವರ ಚುರುಕಿನ ದಾಳಿಗೆ ನಲುಗಿದ ದಕ್ಷಿಣ ಆಫ್ರಿಕಾ ತಂಡ 'ಬಾಕ್ಸಿಂಗ್ ಡೇ' ಟೆಸ್ಟ್ ಪಂದ್ಯದ ಮೊದಲ ದಿನ 189 ರನ್‌ಗಳಿಗೆ ಆಲೌಟಾಯಿತು. ಸೋಮವಾರದ ಆಟದ ಅಂತ್ಯಕ್ಕೆ ಆತಿಥೇಯ ತಂಡ 12 ಓವರ್‌ಗಳಲ್ಲಿ 1 ವಿಕೆಟ್‌ಗೆ 45 ರನ್ ಗಳಿಸಿದೆ.

ಉಸ್ಮಾನ್ ಖ್ವಾಜಾ (1) ಬೇಗನೇ ಔಟಾದರೆ, ಡೇವಿಡ್ ವಾರ್ನರ್ (ಬ್ಯಾಟಿಂಗ್ 32) ಮತ್ತು ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 5) ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿಕೊಂಡಿದ್ದಾರೆ.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಸ್ಕಾಟ್ ಬೋಲಂಡ್ ಮತ್ತು ಮಿಷೆಲ್ ಸ್ಟಾರ್ಕ್ ಅವರು ದಕ್ಷಿಣ ಆಫ್ರಿಕಾದ ಅಗ್ರ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ಪ್ರವಾಸಿ ತಂಡ 67 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು.

ಈ ವೇಳೆ ಜತೆಯಾದ ಕೈಲ್ ವೆರೆಯ್ನ್ (52) ಮತ್ತು ಮಾರ್ಕೊ ಜನ್ಸೆನ್ (59) ಆರನೇ ವಿಕೆಟ್‌ಗೆ 112 ರನ್‌ಗಳನ್ನು ಸೇರಿಸಿ ತಂಡಕ್ಕೆ ಆಸರೆಯಾದರು. ಇವರಿಬ್ಬರನ್ನೂ ಪೆವಿಲಿಯನ್‌ಗಟ್ಟಿದ ಗ್ರೀನ್, ಆಸ್ಟ್ರೇಲಿಯಾಕ್ಕೆ ಮೇಲುಗೈ ತಂದಿತ್ತರು. ದಕ್ಷಿಣ ಆಫ್ರಿಕಾದ ಕೊನೆಯ ಕ್ರಮಾಂಕದ ಬ್ಯಾಟರ್‌ಗಳು ಗ್ರೀನ್ ದಾಳಿಯನ್ನು ಎದುರಿಸಿ ನಿಲ್ಲುವಲ್ಲಿ ಎಡವಿದರು. 10 ರನ್‌ಗಳಿಗೆ ಕೊನೆಯ ಐದು ವಿಕೆಟ್‌ಗಳು ಬಿದ್ದವು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 68.4 ಓವರ್‌ಗಳಲ್ಲಿ 189 (ಡೀನ್ ಎಲ್ಗರ್ 26, ಕೈಲ್ ವೆರೆಯ್ನ್ 52, ಮಾರ್ಕೊ ಜನ್ಸೆನ್ 59, ಕ್ಯಾಮರಾನ್ ಗ್ರೀನ್ 27ಕ್ಕೆ 5, ಮಿಚೆಲ್ ಸ್ಟಾರ್ಕ್ 39ಕ್ಕೆ 2) ಆಸ್ಟ್ರೇಲಿಯಾ 12 ಓವರ್‌ಗಳಲ್ಲಿ 1 ವಿಕೆಟ್‌ಗೆ 45 (ಡೇವಿಡ್ ವಾರ್ನರ್ ಬ್ಯಾಟಿಂಗ್ 32, ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ 5)

2022 ಹಿನ್ನೋಟ

ಐಪಿಎಲ್ ಹಣಬಲ; ಟ್ರೋಫಿಗಳ ಬರ

ಭಾರತ ತಂಡವು ಈ ವರ್ಷವೂ ಪ್ರಮುಖ ಟೂರ್ನಿಗಳಲ್ಲಿ ಟ್ರೋಫಿ ಗೆಲ್ಲುವಲ್ಲಿ ವಿಫಲವಾಯಿತು. ಆದರೆ, ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯಲ್ಲಿ ಹಣದ ಮಹಾಪೂರವೇ ಹರಿದುಬಂತು. ದೇಶಿ ಕ್ರಿಕೆಟ್‌ನಲ್ಲಿ ಕರ್ನಾಟಕ ಆರಕ್ಕೇರಲಿಲ್ಲ. ಮೂರಕ್ಕಿಳಿಯಲಿಲ್ಲ. ಮಹಿಳಾ ಕ್ರಿಕೆಟ್ ದಿಗ್ಗಜರಾದ ಮಿಥಾಲಿ ರಾಜ್ ಹಾಗೂ ಜೂಲನ್ ಗೋಸ್ವಾಮಿ ನಿವೃತ್ತಿ ಘೋಷಿಸಿದರು. ಭಾರತದ ಕ್ರಿಕೆಟ್ ರಂಗವು ಹತ್ತಾರು ಏರಿಳಿತಗಳನ್ನು ಕಂಡ ವರ್ಷವಿದು.

ಏಷ್ಯಾಕಪ್ ವೈಫಲ್ಯ

ಸೆಪ್ಟೆಂಬರ್‌ನಲ್ಲಿ ನಡೆದ ಟಿ20 ಏಷ್ಯಾ ಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಗೆದ್ದ ತಂಡವು ಶುಭಾರಂಭ ಮಾಡಿತ್ತು. ಆದರೆ 'ಸೂಪರ್ ಫೋರ್' ಹಂತದಲ್ಲಿ ಭಾರತ ತಂಡವು ಶ್ರೀಲಂಕಾ ಮತ್ತು ಪಾಕಿಸ್ತಾನ ಎದುರಿನ ಪಂದ್ಯಗಳಲ್ಲಿ ಸೋತಿತು. ಸುಮಾರು ಮೂರು ವರ್ಷಗಳಿಂದ ವೈಫಲ್ಯ ಅನುಭವಿಸಿದ್ದ ವಿರಾಟ್ ಕೊಹ್ಲಿ ಈ ಟೂರ್ನಿಯಲ್ಲಿ ಲಯ ಕಂಡುಕೊಂಡರು.

ಕೈಗೆಟುಕದ ವಿಶ್ವಕಪ್: ಸೂರ್ಯ ಉದಯ

ಆಸ್ಟ್ರೇಲಿಯಾದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ಭಾರತ ಫೈನಲ್ ತಲುಪುವಲ್ಲಿ ಎಡವಿತು. ಟೂರ್ನಿಯ ಮೊದಲ ಪಂದ್ಯದಲ್ಲಿ ವಿರಾಟ್ ಕೊಹ್ಲಿಯ ಅಮೋಘ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು ಪಾಕಿಸ್ತಾನ ಎದುರು ಜಯಭೇರಿ ಬಾರಿಸಿತು. ಆದರೆ, ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಸೋತಿತು. ಸೂರ್ಯಕುಮಾರ್ ಯಾದವ್ '360 ಡಿಗ್ರಿ' ಬ್ಯಾಟರ್ ಎಂಬ ಮೆಚ್ಚುಗೆ ಗಳಿಸಿದರು.

ಐಪಿಎಲ್ ಬಂಪರ್

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯ ಮಾಧ್ಯಮ ಹಕ್ಕುಗಳು ₹ 48 ಸಾವಿರ ಕೋಟಿಗೆ ಹರಾಜಾಗಿದ್ದು ದಾಖಲೆ. ಇದೇ ಮೊದಲ ಬಾರಿಗೆ ಕಣಕ್ಕಿಳಿದ ಗುಜರಾತ್ ಟೈಟನ್ಸ್ ತಂಡವು ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಟ್ರೋಫಿ ಜಯಿಸಿತು. ಮೆಗಾ ಹರಾಜಿನಲ್ಲಿ ಬ್ಯಾಟರ್ ಇಶಾನ್ ಕಿಶನ್ ಅವರನ್ನು ಮುಂಬೈ ತಂಡವು ₹15.75 ಕೋಟಿಗೆ ಮರಳಿ ಖರೀದಿಸಿತು.

ಬಿನ್ನಿಗೆ ಅಧ್ಯಕ್ಷ ಪಟ್ಟ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಕರ್ನಾಟಕದ ರೋಜರ್ ಬಿನ್ನಿ ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇದರಿಂದಾಗಿ ಸೌರವ್ ಗಂಗೂಲಿ ಅಧ್ಯಕ್ಷ ಪಟ್ಟದಿಂದ ಕೆಳಗಿಳಿಯಬೇಕಾಯಿತು. ಜಯ್ ಶಾ ಅವರು ಕಾರ್ಯದರ್ಶಿಯಾಗಿ ಮುಂದುವರಿದರು. 70ನೇ ವಸಂತಕ್ಕೆ ಕಾಲಿಟ್ಟ ಬ್ರಿಜೇಶ್ ಪಟೇಲ್ ಅವರು ಐಪಿಎಲ್ ಸಮಿತಿ ಮುಖ್ಯಸ್ಥರ ಹುದ್ದೆಯಿಂದ ನಿರ್ಗಮಿಸಿದರು.

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

ಪ್ರಮುಖ ಅಂಶಗಳು

- ವರ್ಷಾರಂಭದಲ್ಲಿ ಭಾರತ ತಂಡವು ದಕ್ಷಿಣ ಅಫ್ರಿಕಾದಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಸೋತಿತು.
- ಎಲ್ಲ ಮೂರು ಮಾದರಿಗಳಿಗೂ ನಾಯಕರಾಗಿ ರೋಹಿತ್ ಶರ್ಮಾ ನೇಮಕ
- ಏಷ್ಯಾಕಪ್ ಗೆದ್ದ ಶ್ರೀಲಂಕಾ. ಪಾಕ್ ರನ್ನರ್ಸ್ ಅಪ್
- ಏಷ್ಯಾಕಪ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ಎದುರು ವಿರಾಟ್ ಕೊಹ್ಲಿ ಶತಕ. ಮೂರು ವರ್ಷಗಳ ನಂತರ ನೂರರ ಗಡಿ ದಾಟಿದರು
- ಟಿ20 ವಿಶ್ವಕಪ್ ಟೂರ್ನಿ: ಅರ್ಹತೆ ಪಡೆಯದ ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್. ಇಂಗ್ಲೆಂಡ್ ಚಾಂಪಿಯನ್.
- ಐಪಿಎಲ್ 15ನೇ ಆವೃತ್ತಿಯಲ್ಲಿ ಹತ್ತು ತಂಡಗಳು ಆಡಿದವು. ಈ ಮೊದಲು ಎಂಟು ತಂಡಗಳಿದ್ದವು.
- ಡಿಸೆಂಬರ್‌ನಲ್ಲಿ ನಡೆದ ಮಿನಿ ಹರಾಜಿನಲ್ಲಿ ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ (₹ 18.50 ಕೋಟಿ) ದಾಖಲೆ ಮೊತ್ತ ಗಳಿಸಿದರು.

ಮಿಥಾಲಿ ರಾಜ್ ಹಾಗೂ ಜೂಲನ್ ಗೋಸ್ವಾಮಿ

- ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಹಾಗೂ ವಿಜಯ್ ಹಜಾರೆ ಟ್ರೋಫಿಯಲ್ಲಿ ಸೆಮಿಫೈನಲ್ ಪ್ರವೇಶಿಸಿತು
- ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ರಘುರಾಮ್ ಭಟ್ ನೂತನ ಅಧ್ಯಕ್ಷರಾಗಿ ನೇಮಕ
- ಮಹಿಳಾ ಕ್ರಿಕೆಟ್: ಬ್ಯಾಟರ್ ಮಿಥಾಲಿ ರಾಜ್ ಮತ್ತು ಮಧ್ಯಮವೇಗಿ ಜೂಲನ್ ಗೋಸ್ವಾಮಿ ನಿವೃತ್ತಿ ಘೋಷಿಸಿದರು.
- ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ವೇಗದ ದ್ವಿಶತಕ ದಾಖಲಿಸಿದ ಇಶಾನ್ ಕಿಶನ್.
- ಪಾಕ್ ಎದುರು ರಾವಲ್ಪಿಂಡಿ ಟೆಸ್ಟ್ ಪಂದ್ಯದ ಮೊದಲ ದಿನವೇ 500 ರನ್ ಗಳಿಸಿದ ಇಂಗ್ಲೆಂಡ್ ವಿಶ್ವದಾಖಲೆ ಮಾಡಿತು.

ಸೌತ್ ಯುನೈಟೆಡ್ ಜಯಭೇರಿ

ಬೆಂಗಳೂರು: ಸೌತ್ ಯುನೈಟೆಡ್ ಎಫ್‌ಸಿ ತಂಡದವರು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಗೆಲುವು ಪಡೆದರು.

ಸೋಮವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ 5–0 ಗೋಲುಗಳಿಂದ ಶ್ರೀಗಜಾನನ ಎಫ್‌ಸಿ ತಂಡವನ್ನು ಮಣಿಸಿತು. ಮೊಹಮ್ಮದ್ ಅಫ್ತಾಬ್ ಹುಸೇನ್ (11 ಮತ್ತು 15ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಸಂಕೇತ್ ಅನಿಲ್ (10 ನೇ ನಿ.), ಸೈಯದ್ ಅಹ್ಮದ್ (55) ಮತ್ತು ವಿಘ್ನೇಶ್ ಶ್ರೀನಿವಾಸ್ (60) ತಲಾ ಒಂದು ಗೋಲು ತಂದಿತ್ತರು.

ಅಭಿಷೇಕ್ ಮಿಂಚು: 'ಬಿ' ಡಿವಿಷನ್ ಲೀಗ್ ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ 3-1 ಗೋಲುಗಳಿಂದ ಬೆಂಗಳೂರು ವಾರಿಯರ್ಸ್ ಎಫ್‌ಸಿ ವಿರುದ್ಧ ಗೆದ್ದಿತು. ಮೂರೂ ಗೋಲುಗಳನ್ನು ಗಳಿಸಿದ ಅಭಿಷೇಕ್ ಪಂಚಮಿಯಾ (37, 44 ಮತ್ತು 63ನೇ ನಿ.) ಅವರು ಬೆಂಗಳೂರು ಸಿಟಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಂಗಳವಾರ ನಡೆಯಲಿರುವ 'ಬಿ' ಡಿವಿಷನ್ ಪಂದ್ಯದಲ್ಲಿ ಪೋಸ್ಟಲ್ ಎಫ್‌ಸಿ ಮತ್ತು ಅಲ್ ಫತೇಹ್ ಎಫ್‌ಸಿ ತಂಡಗಳು ಎದುರಾಗಲಿವೆ.

ಬೆಂಗಳೂರು ಸಿಟಿ ಎಫ್‌ಸಿ ತಂಡದ ಅಭಿಷೇಕ್ ಪಂಚಮಿಯಾ (ಎಡ) ಮತ್ತು ಬೆಂಗಳೂರು ವಾರಿಯರ್ಸ್ ಎಫ್‌ಸಿ ತಂಡದ ಎ.ಸಲೀಂ ಚೆಂಡಿಗಾಗಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಕ್ರಿಕೆಟ್: ಕರ್ನಾಟಕ ಶುಭಾರಂಭ

ಬೆಂಗಳೂರು: ವಂದಿತಾ ಕೆ.ರಾವ್ (10ಕ್ಕೆ 4) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ, ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕ 9 ವಿಕೆಟ್‌ಗಳಿಂದ ರಾಜಸ್ತಾನ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ರಾಜಸ್ತಾನ: 35 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 96 (ಮೈನಾ ಸಿಯೊಲ್ 25, ಸೈನಾ ಕಪೂರ್ 18ಕ್ಕೆ 2, ವಂದಿತಾ ಕೆ.ರಾವ್ 10ಕ್ಕೆ 4)

ಕರ್ನಾಟಕ: 18 ಓವರ್‌ಗಳಲ್ಲಿ 1 ವಿಕೆಟ್‌ಗೆ 100 (ಲಾವಣ್ಯ ಚಲನ ಔಟಾಗದೆ 38, ಭವಿಕಾ ರೆಡ್ಡಿ 41) ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್ ಜಯ

1ರಂದು ರಾಜ್ಯಮಟ್ಟದ ಚೆಸ್ ಟೂರ್ನಿ

ತುಮಕೂರು: ನ್ಯೂ ತುಮಕೂರು ಜಿಲ್ಲಾ ಚೆಸ್ ಸಂಸ್ಥೆಯಿಂದ ರಾಜ್ಯ ಶಾಲಾ ಬಾಲಕ, ಬಾಲಕಿಯರ ಚೆಸ್ ಟೂರ್ನಿ ಜ.1ರಂದು ನಗರದ ಎಂಪ್ರೆಸ್ ಸರ್ಕಾರಿ ಶಾಲೆಯಲ್ಲಿ ನಡೆಯಲಿದೆ.

7 ವರ್ಷ, 9, 11, 13, 15 ಮತ್ತು 17 ವರ್ಷದ ಒಳಗಿನ ಮಕ್ಕಳಿಗೆ ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ವಿಜೇತರಾದವರು ತಮಿಳುನಾಡಿನ ಹೊಸೂರಿನಲ್ಲಿ ನಡೆಯಲಿರುವ ರಾಷ್ಟ್ರೀಯ ಶಾಲಾ ಚೆಸ್ ಟೂರ್ನಿಗೆ ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಆಸಕ್ತರು ಡಿ. 29ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ www.karnatakachess.com ಅಥವಾ ಮೊ 9036464600 ಸಂಪರ್ಕಿಸಬೇಕು.

ಟೆಸ್ಟ್: ಬಾಬರ್ ಶತಕ ಸಂಭ್ರಮ

ಕರಾಚಿ (ರಾಯಿಟರ್ಸ್): ನಾಯಕ ಬಾಬರ್ ಅಜಂ (ಬ್ಯಾಟಿಂಗ್ 160) ಗಳಿಸಿದ ಅಜೇಯ ಶತಕದ ನೆರವಿನಿಂದ ಪಾಕಿಸ್ತಾನ ತಂಡ, ನ್ಯೂಜಿಲೆಂಡ್ ವಿರುದ್ಧದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಹೆಜ್ಜೆಯಿಟ್ಟಿದೆ.

ಕರಾಚಿ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ ಪಾಕಿಸ್ತಾನ ಐದು ವಿಕೆಟ್‌ಗಳ ನಷ್ಟಕ್ಕೆ 317 ರನ್ ಗಳಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಲು ನಿರ್ಧರಿಸಿದ ಆತಿಥೇಯ ತಂಡ 110 ರನ್ ಗಳಿಸುವಷ್ಟರಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಆದರೆ ಸರ್ಫರಾಜ್ ಅಹ್ಮದ್ (86) ಅವರೊಂದಿಗೆ ಸೇರಿಕೊಂಡು ಬಾಬರ್, ತಂಡವನ್ನು ಕುಸಿತದಿಂದ ಪಾರು ಮಾಡಿದರು. ಈ ಜೋಡಿ ಐದನೇ ವಿಕೆಟ್‌ಗೆ 196 ರನ್ ಕಲೆಹಾಕಿತು.

277 ಎಸೆತಗಳನ್ನು ಎದುರಿಸಿದ ಬಾಬರ್, 15 ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದರು. ಟೆಸ್ಟ್ ಕ್ರಿಕೆಟ್‌ನಲ್ಲಿ 9ನೇ ಶತಕ ಪೂರೈಸಿದ ಅವರು ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿಕೊಂಡಿದ್ದಾರೆ.

ಶತಕ ಸಂಭ್ರಮದಲ್ಲಿ ಬಾಬರ್ ಅಜಂ –ಎಎಫ್‌ಪಿ ಚಿತ್ರ

12 ರನ್ ಗಳಿಸಿದ್ದಾಗ ಬಾಬರ್‌ಗೆ ಜೀವದಾನ ಲಭಿಸಿತ್ತು. ಇನಿಂಗ್ಸ್‌ನ 15ನೇ ಓವರ್‌ನಲ್ಲಿ ಮೈಕಲ್ ಬ್ರೇಸ್‌ವೆಲ್ ಅವರ ಬೌಲಿಂಗ್‌ನಲ್ಲಿ ಮೊದಲ ಸ್ಲಿಪ್‌ನಲ್ಲಿದ್ದ ಡೆರಿಲ್ ಮಿಚೆಲ್ ಸುಲಭ ಕ್ಯಾಚ್ ಕೈಚೆಲ್ಲಿದ್ದರು. ಆ ತಪ್ಪಿಗೆ ನ್ಯೂಜಿಲೆಂಡ್ ಭಾರಿ ಬೆಲೆ ತೆರಬೇಕಾಯಿತು.

ಬ್ರೇಸ್‌ವೆಲ್ ಅವರು ಪಾಕ್ ತಂಡಕ್ಕೆ ಆರಂಭಿಕ ಆಘಾತ ನೀಡಿದ್ದರು. ಇಮಾಮ್ ಉಲ್ ಹಕ್ (24) ಮತ್ತು ಶಾನ್ ಮಸೂದ್ (3) ಬೇಗನೇ ಔಟಾದರು. ಅಬ್ದುಲ್ಲಾ ಶಫೀಕ್ (7) ಅವರ ವಿಕೆಟ್ ಅಜಾಜ್ ಪಟೇಲ್ ಪಾಲಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 317 (ಇಮಾಮ್ ಉಲ್ ಹಕ್ 24, ಬಾಬರ್ ಅಜಂ ಬ್ಯಾಟಿಂಗ್ 161, ಸವೂದ್ ಶಕೀಲ್ 22, ಸರ್ಫರಾಜ್ ಅಹ್ಮದ್ 86, ಅಜಾಜ್ ಪಟೇಲ್ 91ಕ್ಕೆ 2, ಮೈಕಲ್ ಬ್ರೇಸ್‌ವೆಲ್ 61ಕ್ಕೆ 2, ಟಿಮ್ ಸೌಥಿ 51ಕ್ಕೆ 1)

ಹಾಕಿ: ಸಂದೀಪ್ ಹಾಕಿ ಕ್ಲಬ್‌ಗೆ ಜಯ

ಬೆಂಗಳೂರು: ಟಿ.ವಿ.ಪ್ರತೀಕ್ ಗಳಿಸಿದ ಮೂರು ಗೋಲುಗಳ ನೆರವಿನಿಂದ ಸಂದೀಪ್ ಹಾಕಿ ಕ್ಲಬ್ ತಂಡದವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಚ್‌ಎ 'ಬಿ' ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಸೋಮವಾರ ನಡೆದ ಪಂದ್ಯದಲ್ಲಿ ಸಂದೀಪ್ ಹಾಕಿ ಕ್ಲಬ್ 6–1 ಗೋಲುಗಳಿಂದ ನವೀನ್ ಹಾಕಿ ಕ್ಲಬ್ 'ಎ' ತಂಡವನ್ನು ಪರಾಭವಗೊಳಿಸಿತು. ಪ್ರತೀಕ್ ಅವರು 6, 26 ಹಾಗೂ 38ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಇತರ ಗೋಲುಗಳನ್ನು ಶ್ರೇಯಸ್ (24), ಹರ್ಷ (53) ಮತ್ತು ನಾಗರಾಜ್ (58) ಗಳಿಸಿದರು. ನವೀನ್ ತಂಡದ ಏಕೈಕ ಗೋಲನ್ನು ಪ್ರಸಾದ್ 33ನೇ ನಿಮಿಷದಲ್ಲಿ ತಂದಿತ್ತರು.

ರಾಯಲ್ ಹಾಕಿ ಕ್ಲಬ್ 3–0 ಗೋಲುಗಳಿಂದ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ 'ಎ' ತಂಡದ ವಿರುದ್ಧ ಗೆದ್ದಿತು. ಕರುಣ (19), ವೈಷ್ಣವ್ (16) ಹಾಗೂ ಜಗದೀಶ್ (26) ಅವರು ಗೋಲು ತಂದಿತ್ತರು.

ಮಂಗಳವಾರ ಟೀಮ್ ವೈಲ್ಡ್‌ಬೋರ್ಸ್– ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ 'ಎ' ಹಾಗೂ ಅಧಿಯಮಾನ್ ಎಂಜಿನಿಯರಿಂಗ್ ಕಾಲೇಜು– ನವೀನ್ ಹಾಕಿ 'ಎ' ತಂಡಗಳು ಎದುರಾಗಲಿವೆ.

ನಿಖತ್, ಲವ್ಲಿನಾಗೆ ಚಿನ್ನ

ಭೋಪಾಲ್ (ಪಿಟಿಐ): ವಿಶ್ವ ಚಾಂಪಿಯನ್ ನಿಖತ್ ಜರೀನ್ ಹಾಗೂ ಒಲಿಂಪಿಕ್ ಪದಕವಿಜೇತೆ ಲವ್ಲಿನಾ ಬೋರ್ಗೊಹೈನ್ ಸೋಮವಾರ ಇಲ್ಲಿ ನಡೆದ ಎಲೀಟ್ ರಾಷ್ಟ್ರೀಯ ಮಹಿಳಾ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿ (ಆರ್‌ಎಸ್‌ಪಿಬಿ) ಒಟ್ಟು 10 ಪದಕಗಳನ್ನು ಗೆದ್ದು ತಂಡ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿತು.

ತೆಲಂಗಾಣದ ನಿಖತ್ ಜರೀನ್ 50 ಕೆ.ಜಿ. ವಿಭಾಗದಲ್ಲಿ ಆರ್‌ಎಸ್‌ಪಿಬಿಯ ಅನಾಮಿಕಾ ವಿರುದ್ಧ ಗೆದ್ದರು. 26 ವರ್ಷದ ನಿಖತ್ ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಕೂಡ ಹೌದು.

75 ಕೆ.ಜಿ. ಫೈನಲ್‌ನಲ್ಲಿ ಅಸ್ಸಾಂ ತಂಡದ ಲವ್ಲಿನಾ ಅವರು ಸರ್ವಿಸಸ್‌ನ ಅರುಂಧತಿ ಚೌಧರಿ ವಿರುದ್ಧ 5–0ಯಿಂದ ಗೆದ್ದರು.

48 ಕೆ.ಜಿ. ವಿಭಾಗದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ ಮಂಜು ರಾಣಿ 5–0ಯಿಂದ ತಮಿಳುನಾಡಿನ ಎಸ್. ಕಲೈವಾಣಿ ವಿರುದ್ಧ ಗೆದ್ದಿತು.

ಶಿಕ್ಷಾ (54ಕೆ.ಜಿ), ಪೂನಂ (60 ಕೆ.ಜಿ), ಶಶಿ ಚೋಪ್ರಾ (63ಕೆ.ಜಿ) ಮತ್ತು ನೂಪುರ್ (+81 ಕೆಜಿ) ಅವರೂ ಚಿನ್ನದ ಪದಕಗಳನ್ನು ಜಯಿಸಿದರು. ಅದರಿಂದಾಗಿ ರೈಲ್ವೆ ತಂಡವು ಪಾರಮ್ಯ ಮೆರೆಯಿತು.

ನಿಖತ್ ಜರೀನ್

ಹರಿಯಾಣದ ಮನೀಷಾ (57ಕೆ.ಜಿ), ಸ್ವೀಟಿ (81 ಕೆ.ಜಿ), ಎಸ್‌ಎಸ್‌ಸಿಬಿಯ ಸಾಕ್ಷಿ (52ಕೆ.ಜಿ), ಮಧ್ಯಪ್ರದೇಶದ ಮಂಜು ಬೆಂಬೊರಿಯಾ (66 ಕೆ.ಜಿ) ಕೂಡ ಚಿನ್ನದ ಸಾಧನೆ ಮಾಡಿದರು.

ಟೂರ್ನಿಯ 12 ವಿಭಾಗಗಳಲ್ಲಿ ಒಟ್ಟು 302 ಬಾಕ್ಸಿಂಗ್ ಪಟುಗಳು ಪದಕಕ್ಕಾಗಿ ಪೈಪೋಟಿ ನಡೆಸಿದ್ದರು.

ನೇಪಾಳ ಪ್ರಧಾನಿಯಾಗಿ ಪುಷ್ಪ ಕಮಲ್ ಪ್ರಮಾಣ

ಕಠ್ಮಂಡು (ಪಿಟಿಐ): ಪುಷ್ಪ ಕಮಲ್ ದಹಲ್ (ಪ್ರಚಂಡ) ಸೋಮವಾರ ನೇಪಾಳದ ಪ್ರಧಾನಿಯಾಗಿ ಮೂರನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು.

ಶಿಥಲ್ ನಿವಾಸದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಪ್ರಮಾಣ ವಚನ ಬೋಧಿಸಿದರು.

ಒಟ್ಟು 275 ಸದಸ್ಯರ ಸಂಸತ್‌ನಲ್ಲಿ 169 ಸದಸ್ಯರು ಬೆಂಬಲ ನೀಡಿರುವ ಪತ್ರವನ್ನು ಮಾವೊವಾದಿ ನಾಯಕ ಪ್ರಚಂಡ ಅವರು ಅಧ್ಯಕ್ಷರಿಗೆ ಸಲ್ಲಿಸಿದ್ದರು. ಆ ಬಳಿಕ ವಿದ್ಯಾದೇವಿ ಪ್ರಚಂಡ ಅವರನ್ನು ಪ್ರಧಾನಿಯಾಗಿ ಭಾನುವಾರ ನೇಮಕ ಮಾಡಿದ್ದರು.

ಪ್ರಚಂಡ ಅವರು 13 ವರ್ಷಗಳ ಕಾಲ ಭೂಗತರಾಗಿದ್ದರು. ಸಿಪಿಎನ್–ಮಾವೊವಾದಿ ಪಕ್ಷವು ದಶಕಗಳ ಕಾಲದ ದಂಗೆಯನ್ನು ಕೊನೆಗಾಣಿಸಿ ಶಾಂತಿಯುತವಾದ ರಾಜಕೀಯವನ್ನು ಅಳವಡಿಸಿಕೊಂಡ ಬಳಿಕ ರಾಜಕೀಯ ಪ್ರವೇಶಿಸಿದ್ದರು.

1996-2006ರವರೆಗೆ ನಡೆದ ಸಶಸ್ತ್ರ ಹೋರಾಟದ ನೇತೃತ್ವವನ್ನು ವಹಿಸಿಕೊಂಡಿದ್ದರು. ಈ ಹೋರಾಟ 2006ರ ನವೆಂಬರ್‌ನಲ್ಲಿ ಸಮಗ್ರ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಕೊನೆಗೊಂಡಿತ್ತು.

ಪ್ರಧಾನಿ ಪುಷ್ಪ ಕಮಲ್ ದಹಲ್

ಜನರ ಜೀವ ಉಳಿಸಲು ಯತ್ನಿಸಿ: ಷಿ ಜಿನ್‌ಪಿಂಗ್

ಬೀಜಿಂಗ್ (ಎಪಿಎಫ್): 'ಜನರ ಜೀವವನ್ನು ಉಳಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಿ' ಎಂದು ಅಧ್ಯಕ್ಷ ಷಿ ಜಿನ್‌ಪಿಂಗ್ ಅಧಿಕಾರಿಗಳಿಗೆ ಸೋಮವಾರ ಸೂಚಿಸಿದ್ದಾರೆ. ದೇಶದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಮಿತಿಮೀರಿದ ಮೇಲೆ ಅವರು ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಹೇಳಿಕೆಯನ್ನು ನೀಡಿದ್ದಾರೆ.

ಪ್ರಸ್ತುತ ಚೀನಾ ಕೊರೊನಾದ ನಿಯಂತ್ರಣಕ್ಕೆ ಹೊಸ ಸವಾಲನ್ನು ಎದುರಿಸುತ್ತಿದೆ. ಹೀಗಾಗಿ ದೇಶೀಯವಾಗಿ ಅಭಿಯಾನಗಳನ್ನು ಆರಂಭಿಸಬೇಕು. ಸುರಕ್ಷತೆ ಕಾಪಾಡಿಕೊಳ್ಳಬೇಕು ಎಂದು ಷಿ ಹೇಳಿರುವುದಾಗಿ ಸರ್ಕಾರದ ವಾಹಿನಿ ಸಿಸಿಟಿವಿ ವರದಿ ಹೇಳಿದೆ. ಮುಂದಿನ ದಿನಗಳಲ್ಲಿ ಸೋಂಕಿನಿಂದ ಸಾವು ಹೆಚ್ಚಾಗಲಿದೆ ಎಂದು ಅಧ್ಯಯನಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಜಪಾನ್‌ನಲ್ಲಿ ಭಾರಿ ಹಿಮಪಾತ; 17 ಸಾವು

ಟೋಕಿಯೊ (ಎಪಿ): ಜಪಾನ್‌ನಲ್ಲಿ ಭಾರಿ ಹಿಮದಿಂದಾಗಿ 17 ಮಂದಿ ಸಾವನ್ನಪ್ಪಿದ್ದು, 90 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ನೂರಾರು ಮನೆಗಳು ವಿದ್ಯುತ್ ಸಂಪರ್ಕ ಕಳೆದುಕೊಂಡಿವೆ ಎಂದು ವಿಪತ್ತು ನಿರ್ವಹಣಾ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಉತ್ತರ ಭಾಗದಲ್ಲಿ ಕಳೆದ ವಾರ ಹಿಮಪಾತದಿಂದ 11 ಮಂದಿ ಸಾವನ್ನಪ್ಪಿದ್ದು, ನೂರಾರು ವಾಹನಗಳು ರಸ್ತೆಯಲ್ಲಿ ನಿಂತುಕೊಂಡಿದ್ದವು. ಮನೆಗಳ ಮೇಲೆ ಬಿದ್ದಿರುವ ಹಿಮವನ್ನು ಸ್ವಚ್ಛಗೊಳಿಸುವಾಗ ಜಾರಿ ಬಿದ್ದು ಹಿಮದಡಿಯಲ್ಲಿ ಸಿಲುಕಿ ಅನೇಕರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಗಳು ಮಾಹಿತಿ ನೀಡಿದ್ದಾರೆ. ವಿಮಾನ ನಿಲ್ದಾಣಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದ ಕಾರ್ಯ ಪುನರಾರಂಭವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ತೈವಾನ್ ಸುತ್ತ ಚೀನಾದ ಯುದ್ಧ ವಿಮಾನ ತಾಲೀಮು

ತೈಪೆ (ಎಎಫ್‌ಪಿ): ವಾರಾಂತ್ಯದ ಮಿಲಿಟರಿ ತಾಲೀಮಿನಲ್ಲಿ ತೈವಾನ್ ಸುತ್ತ ಚೀನಾ 71 ಯುದ್ಧ ವಿಮಾನಗಳು, ಹತ್ತಾರು ಫೈಟರ್ ಜೆಟ್‌ಗಳು ಮತ್ತು 7 ಹಡಗುಗಳನ್ನು ನಿಯೋಜಿಸಿದೆ ಎಂದು ತೈಪೆಯ ರಕ್ಷಣಾ ಇಲಾಖೆ ತಿಳಿಸಿದೆ.

ಅಮೆರಿಕ ಮತ್ತು ತೈವಾನ್‌ನ ಪ್ರಚೋದನೆಗಳಿಗೆ ಪ್ರತಿಯಾಗಿ ಭಾನುವಾರ ಯುದ್ಧ ತಾಲೀಮು ನಡೆಸಲಾಗಿದೆ ಎಂದು ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ(ಪಿಎಲ್‌ಎ) ಹೇಳಿದೆ.

ತೈವಾನ್‌ನ ರಕ್ಷಣಾ ಇಲಾಖೆಯ ಪ್ರಕಾರ, ಈವರೆಗೆ ಚೀನಾ ನಡೆಸಿರುವ ದೈನಂದಿನ ತಾಲೀಮುಗಳಿಗಿಂತಲೂ ಇದು ಹೆಚ್ಚು ಆಕ್ರಮಣಕಾರಿ ಎಂದ ಹೇಳಲಾಗಿದೆ. ಚೀನಾದ ಅತ್ಯಾಧುನಿಕ 6 ಎಸ್‌ಯು–30ಯುದ್ಧ ವಿಮಾನಗಳು ಸೇರಿ ಒಟ್ಟು 60 ಫೈಟರ್ ಜೆಟ್‌ಗಳು ತಾಲೀಮಿನಲ್ಲಿದ್ದವು ಎಂದು ತೈವಾನ್ ಟ್ವೀಟ್ ಮೂಲಕ ತಿಳಿಸಿದೆ. ಈ ಪೈಕಿ 47 ವಿಮಾನಗಳು ದ್ವೀಪ ರಾಷ್ಟ್ರದ ವಾಯು ರಕ್ಷಣಾ ವಲಯವನ್ನು ದಾಟಿ ಬಂದಿದ್ದವು ಎಂದು ಅದು ಹೇಳಿದೆ.

ಉಕ್ರೇನ್ ಡ್ರೋನ್ ಹೊಡೆದುರುಳಿಸಿದ ರಷ್ಯಾ

ಕೀವ್ (ಉಕ್ರೇನ್) (ಎಪಿ): ರಷ್ಯಾದ ಎಂಜಲ್ಸ್ ವಾಯುನೆಲೆಯ ಮೇಲೆ ಅಪ್ಪಳಿಸಲು ಬರುತ್ತಿದ್ದ ಉಕ್ರೇನ್‌ನ ಡ್ರೋನ್‌ಅನ್ನು ರಷ್ಯಾ ಹೊಡೆದುರುಳಿಸಿದೆ. ಇದೇ ವಾಯು ನೆಲೆಯ ಮೇಲೆ ಈ ತಿಂಗಳಲ್ಲಿ ಉಕ್ರೇನ್ ನಡೆಸುತ್ತಿರುವ ಎರಡನೇ ದಾಳಿ ಇದು. ಸೋಮವಾರ ಬೆಳಗಿನ ಸಮಯದಲ್ಲಿ ದಾಳಿ ನಡೆದಿದೆ. ದಾಳಿಯಿಂದಾಗಿ ವಾಯುನೆಲೆಯ ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.